# ಯುಗರಶ್ಮಿ


- ★ ದೇವನ ಸೃಷ್ಟಿಕರ್ತ್ಯ?
- ★ ಯೇಸು ಕ್ರಿಸ್ತರ ಪವಿತ್ರ ವಸ್ತ್ರ
- ★ "ಜಮಾಅತೆ ಇಸ್ಲಾಮಿ"ಯ ಲಕ್ಷ್ಯ- ಅಧಿಕಾರ ಕಸಿಯುವಿಕೆ
- ★ ಇಮಾಂ ಮಹ್‌ದಿಯ ಕುರುಹುಗಳು
- ★ ಪೈಗಂಬರ್- ಲೋಕದ ಪ್ರಕಾಶ
- ★ ಸ್ಪೆಯಿನ್‌ನಲ್ಲಿ ಮಸೀದಿ
- ★ ಡಾ| ಅಬ್ದುಸ್ಸಲಾಮರ ಭಾರತ ಸಂದರ್ಶನ
- ★ ಹಿಜರಿ ಹದಿನೈದನೇ ಶತಕದ ಆರಂಭ
- ★ ಇಸ್ಲಾಂ ಮತ ತತ್ತ್ವಜ್ಞಾನ



ತ್ರೈಮಾಸಿಕ

ಜನವರಿ

1981

ಬೆಲೆ: ರೂ. 1-00


ಮನುಷ್ಯರ ಪೈಕಿ ಕೆಲವು ಉತ್ಕೃಷ್ಟರು ದೈವಸಂತುಷ್ಟಿಯನ್ನು ಗಳಿಸಲಿಕ್ಕಾಗಿ ತಮ್ಮ ಜೀವನನ್ನೇ ವಿಕ್ರಯಿಸುತ್ತಾರೆ; ಅಂತಹ ವರಿಷ್ಮದಾಸರಿಗೆ ದೇವನು ಕರುಣೆ ದೋರುತ್ತಾನೆ.

— ಪವಿತ್ರ ಖುರ್‌ಆನ್ [2:208]

# ಯುಗರಶ್ಮಿ ತ್ರೈಮಾಸಿಕ

10-23-1008, ಅನ್ಸಾರಿ ರೋಡ್, ಬಂದರ್, ಮಂಗಳೂರು-575 001.

ಸಂಪುಟ: 6 ಡಿಸೆಂಬರ್ 1980-ಜನವರಿ 1981/ಫತಹ್ 1359-ಸುಲ್ಹ್ 1360 ಸಂಚಿಕೆ: 3

ಸಂಪಾದಕ: ಮುಹಮ್ಮದ್ ಯೂಸುಫ್

ಬಿಡಿಪ್ರತಿ: ಒಂದು ರೂಪಾಯಿ ವಾರ್ಷಿಕ ಚಂದಾ: ನಾಲ್ಕು ರೂಪಾಯಿಗಳು


**ವಿಷಯ ಸೂಚಿಕೆ:** ಪುಟ


* ದೈವಸಂತುಷ್ಟಿ – ನನ್ನ ಕಿರೀಟ ... ... 1
* ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು ... ... 2
* ದೇವನ ಸೃಷ್ಟಿಕರ್ತ? ... ... 3
* ಯೇಸು ಕ್ರಿಸ್ತರ ಪವಿತ್ರ ವಸ್ತ್ರ ... ... 7
* "ಜಮಾಅತೆ ಇಸ್ಲಾಮಿ"ಯ ಲಕ್ಷ್ಯ–ಅಧಿಕಾರ ಕಸಿಯುವಿಕೆ ... ... 11
* ಇಮಾಂ ಮಹ್‌ದಿಯ ಕುರುಹುಗಳು ... ... 13
* ಪೈಗಂಬರ್–ಲೋಕದ ಪ್ರಕಾಶ ... ... 18
* ಸ್ಪೈಯಿನ್‌ನಲ್ಲಿ ಮಸೀದಿ! ... ... 20
* ಅಹ್ಮದಿಯಾ ವಾರ್ತೆಗಳು ... ... 23
* ಸಂಪಾದಕರಿಗೆ ಪತ್ರ ... ... 29
* ಹಿಜರಿ ಹದಿನೈದನೆ ಶತಕದ ಆರಂಭ ... ... 31
* ಪುಸ್ತಕ ವಿಭಾಗ–ಇಸ್ಲಾಂ ಮತ ತತ್ವಜ್ಞಾನ



ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್‌ರವರ

## ಮೈತ್ರಿ ಸಂದೇಶ

"......ಹಿಂದೂ ಮುಸ್ಲಿಂ ಮೈತ್ರಿಗಾಗಿ ನೀಡಿದ ಈ ಸಂದೇಶ ತುಂಬಾ ಮಹತ್ವದ್ದು, ಹಿಂದೂಗಳೂ ಮುಸ್ಲಿಮರೂ ಸಮಾನವಾಗಿ ಪರಿಶೀಲಿಸಬೇಕಾದ ಗ್ರಂಥವಿದು......" —ಉದಯವಾಣಿ.

"......ಭಿನ್ನ ಧರ್ಮೀಯರಲ್ಲಿ ಮೈತ್ರಿ ಬೆಸೆಯಬಲ್ಲ ಲೇಖನ......" —ನವಭಾರತ.

ಪುಟಗಳು: 48 ಬೆಲೆ: ಒಂದು ರೂಪಾಯಿ ಅಂಚೆ ವೆಚ್ಚ: ಉಚಿತ



ಬರೆಯಿರಿ: The Editor, YUGARASHMI, Kannada Quarterly,
10-23/1008, Ansari Road, Bunder, Mangalore-575 001.

بسم الله الرحمن الرحيم

نحمده ونصلي على رسوله الكريم

# ಯುಗ ರಶ್ಮಿ

| ಸಂಪುಟ: 6 | ಡಿಸೆಂಬರ್ 1980–ಜನವರಿ 1981 / ಫತಹ್ 1359-ಸುಲ್ಹ್ 1360 | ಸಂಚಿಕೆ: 3 |
| --- | --- | --- |

## ದೈವಸಂತುಷ್ಟಿ- ನನ್ನ ಕಿರೀಟ

ನಾನು 'ಇಬ್ನು ಮರಿಯಂ'; ಆದರೆ ಆಕಾಶದಿಂದ
ಇಳಿದು ಬಂದಿಲ್ಲ.

ನಾನು 'ಮಹ್‌ದಿ'ಯೂ ಹೌದು; ಆದರೆ ಖಡ್ಗವಿಲ್ಲ,
ಯುದ್ಧವೂ ಇಲ್ಲ.

ನನ್ನ ಲಕ್ಷ್ಯ ರಾಜ್ಯವಲ್ಲ; ಯುದ್ಧದಿಂದ ನನಗೆ
ಏನನ್ನೂ ಸಾಧಿಸಬೇಕಾಗಿಲ್ಲ.

ನನ್ನ ಧರ್ಮ ಹೃದಯಗಳನ್ನು ಗೆಲ್ಲುವುದು;
ರಾಜ್ಯಗಳನ್ನಲ್ಲ.

ಈ ರಾಜ್ಯಗಳಿಂದ ನನಗೇನು ಕಾರ್ಯ?
ನನ್ನ ರಾಜ್ಯವೇ ಬೇರೆ.

ಕಿರೀಟಗಳು ನನಗೇಕೆ? ದೈವಸಂತುಷ್ಟಿಯೇ
ನನ್ನ ಕಿರೀಟ.

(ದುರ್ರೆ ಸಮೀನ್)

–ಹಝ್ರತ್ ಅಹ್ಮದ್

ಅಹ್ಮದಿಯಾ ಸಂಘಟನೆಯ ಸ್ಥಾಪಕರು.

# ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

1. ಎಲ್ಲಾ ಅಮಲು ಪದಾರ್ಥಗಳನ್ನು ವರ್ಜಿಸಿರಿ.

2. ಮದ್ಯಪಾನ ಮಾಡಬಾರದು; ಅದು ಎಲ್ಲಾ ಕೆಡುಕುಗಳ ಕೀಲಿಗೈ.

3. ಅಧಿಕ ಸೇವಿಸಿದರೆ ಅಮಲು ಉಂಟು ಮಾಡುವ ಎಲ್ಲವನ್ನೂ ಸಂಪೂರ್ಣ ನಿಷೇಧಿಸಲಾಗಿದೆ.

4. ಋಣ ಬಾಧ್ಯತೆಯಿಂದ ಜಾಗರೂಕರಾಗಿರಿ. ಅದು ರಾತ್ರಿ ಮನೋಚಿಂತೆಗೂ ಹಗಲು ಮಾನಹಾನಿಗೂ ಕಾರಣವಾಗುತ್ತದೆ.

5. ನೆರೆಕರೆಯವರೊಡನೆ ದುಷ್ಟವಾಗಿ ವರ್ತಿಸುವವನು ಸತ್ಯ ವಿಶ್ವಾಸಿಯಲ್ಲ; ಸತ್ಯ ವಿಶ್ವಾಸಿಯಾಗಲು ಸಾಧ್ಯವಿಲ್ಲ.

6. ಶುಚಿತ್ವ ಸತ್ಯವಿಶ್ವಾಸದ ಅರ್ಧಾಂಶವಾಗಿದೆ

7. ನಿಮ್ಮ ಮನೆಯನ್ನೂ ಪರಿಸರವನ್ನೂ ಶುಚಿಯಾಗಿಡಿರಿ.

8. ನಿಮ್ಮ ಸೋದರರನ್ನು ಸಂದರ್ಶಿಸುವಾಗ ವಸ್ತ್ರವನ್ನೂ ಸವಾರಿಯನ್ನೂ ಶುಚಿಯಾಗಿರಿಸಿರಿ. ಅಲ್ಲಾಹು ಅಶುದ್ಧಿಯನ್ನು ಇಷ್ಟಪಡುವುದಿಲ್ಲ.

9. ಕೂದಲನ್ನು ಚೆನ್ನಾಗಿ ಬಾಚಿ ಕಾಪಾಡಿರಿ.

10. ತಲೆಗೆ ಎಣ್ಣೆ ಹಚ್ಚುವಾಗ ಹಣೆಯಿಂದ ಪ್ರಾರಂಭಿಸಬೇಕು. ಅದು ತಲೆನೋವನ್ನು ಗುಣಪಡಿಸುವುದು.

(ಸರ್ ಮುಹಮ್ಮದ್ ಝಫರುಲ್ಲಾ ಖಾನರ **Wisdom of the Holy Prophet Muhammad** ಎಂಬ ಪುಸ್ತಕದಿಂದ ಆಯ್ದುದು)


## ಅಹ್ಮದಿಯಾ ಸಂದೇಶ

**ಮುಸ್ಲಿಮರನ್ನು ಸಂಬೋಧಿಸಿ ಬರೆದ ಒಂದು ಉಪನ್ಯಾಸ**

**ಗ್ರಂಥಕರ್ತ: ಹಝ್ರತ್ ಮಿರ್ಝಾ ಬಶೀರುದ್ದೀನ್ ಮುಹಮೂದ್ ಅಹ್ಮದ್**

ಪುಟ: **60** ಬೆಲೆ: ಒಂದು ರೂಪಾಯಿ ಅಂಚೆ ವೆಚ್ಚ: ಉಚಿತ

ಬರೆಯಿರಿ: The Editor, YUGARASHMI Kannada Quarterly,
10-23/1008, Ansari Road, Bunder, Mangalore-575001.

# ದೇವನ ಸೃಷ್ಟಿಕರ್ತ?

★ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಎಂ. ಎ.

ಈ ಪ್ರಪಂಚವನ್ನು ದೇವನು ಸೃಷ್ಟಿಸಿದ್ದರೆ ದೇವನನ್ನು ಸೃಷ್ಟಿಸಿದ್ದು ಯಾರು? ಪ್ರಪಂಚವನ್ನು ಸಂಬಂಧಿಸಿ ಅದರ ಸೃಷ್ಟಿಕರ್ತನೂ ಒಡೆಯನೂ ಯಾರೆಂಬ ಪ್ರಶ್ನೆ ಉದ್ಭವಿಸುವುದಾದರೆ ದೇವನ ಸಂಬಂಧಿಸಿಯೂ ಅವನ ಸೃಷ್ಟಿಕರ್ತ ಮತ್ತು ಒಡೆಯ ಯಾರೆಂಬ ಪ್ರಶ್ನೆ ಉದ್ಭವಿಸಬೇಕಲ್ಲವೇ ಎಂದು ಕೆಲವರು ಸಂಶಯಪಡುತ್ತಾರೆ. ಈ ಸಂಶಯಕ್ಕೆ ಉತ್ತರ ಇದಾಗಿದೆ: ಒಂದನೆಯದಾಗಿ ದೇವನ ಸಂಬಂಧಿಸಿ ಅಂಥ ಒಂದು ಪ್ರಶ್ನೆ ಉದ್ಭವಿಸಲು ಎಡೆಯಿಲ್ಲ. ಅದರ ಕಾರಣ ನಂತರ ಹೇಳಲಾಗುವುದು. ಈ ಪ್ರಪಂಚದ ಸೃಷ್ಟಿಕರ್ತನೂ ಒಡೆಯನೂ ಆಗಿರುವ ಸತ್ತೆಯನ್ನು ಅದಕ್ಕಿಂತ ಮಿಗಿಲಾದ ಇನ್ನೊಂದು ಸತ್ತೆ ಸೃಷ್ಟಿಸಿದೆಯೆಂದು ಸಂಕಲ್ಪಿಸುವ ಪಕ್ಷದಲ್ಲಿ, ಆ ಮೇಲಿನ ಸತ್ತೆಯನ್ನು ನಾವು ದೇವನೆಂದು ಹೆಸರಿಸುವೆವು. ಅದರ ಕೆಳಗಿನ ಸತ್ತೆಯನ್ನು ಸೃಷ್ಟಿಗಳ ಪೈಕಿ ಒಂದೆಂದೂ ಕಾರ್ಯಕಾರಣ ಶೃಂಖಲೆಯ ಒಂದು ಕೊಂಡಿಯೆಂದೂ ಸೃಷ್ಟಿ ಪರಂಪರೆಯ ಒಂದು ಘಟಕವೆಂದೂ ಭಾವಿಸಲಾಗುವುದು. ಇನ್ನು ಆ ಮೇಲಿನ ಸತ್ತೆಯ ಸೃಷ್ಟಿಕರ್ತ ಮತ್ತು ಒಡೆಯ ಯಾರೆಂದು ಯಾರಾದರೂ ಪ್ರಶ್ನಿಸುವುದಾದರೆ ಅದರ ಉತ್ತರ ಹೀಗಿದೆ: ಆ ಮೇಲಿನ ಸತ್ತೆ ಸಹ ಅದಕ್ಕಿಂತ ಮಿಗಿಲಾದ ಇನ್ನೊಂದು ಸೃಷ್ಟಿಯೆಂದಾದರೆ ಆ ಅತ್ಯಂತ ಮಿಗಿಲಾದ ಸತ್ತೆಯನ್ನು ಆಗಿರಬಹುದು ನಾವು ದೇವನೆಂದು ಹೇಳುವುದು. ಅದರ ಕೆಳಗಿನ ಎಲ್ಲಾ ಸತ್ತೆಗಳನ್ನೂ ಸೃಷ್ಟಿಭಾಗವೆಂದು ಗಣಿಸಲಾಗುವುದು. ಸಂಕ್ಷಿಪ್ತವಾಗಿ, ಈ ಶೃಂಖಲೆ ಯಾವ ಸತ್ತೆಯಲ್ಲಿ ಕೊನೆಗೊಳ್ಳುತ್ತದೋ, ಎಂದರೆ ಯಾವ ಸತ್ತೆಯನ್ನು ಈ ಶೃಂಖಲೆಯ ಮೊತ್ತ ಮೊದಲಿನ ಕೊಂಡಿಯೆಂದೂ ಅದಕ್ಕಿಂತ ಮಿಗಿಲಾದ ಒಂದು ಸತ್ತೆ ಇಲ್ಲವೆಂದೂ ಗಣಿಸಲಾಗುವುದೋ, ಅದನ್ನು ನಾವು ದೇವನೆಂದು ಹೆಸರಿಸುತ್ತೇವೆ. ಅದರ ಹೊರತಾದ ಎಲ್ಲವನ್ನೂ ಸೃಷ್ಟಿವಿಭಾಗವೆಂದು ಪರಿಗಣಿಸಲಾಗುವುದು.

ಇನ್ನು ಪ್ರತಿಯೊಂದು ಸತ್ತೆಯ ಸಂಬಂಧಿಸಿ ಅದರ ಸೃಷ್ಟಿಕರ್ತ ಮತ್ತು ಒಡೆಯ ಯಾರೆಂಬ ಪ್ರಶ್ನೆಯೇಳುವುದರಿಂದ ಮೊತ್ತ ಮೊದಲಿನದೆಂದು ಹೇಳಲಾಗುವ ಒಂದು ಸತ್ತೆಯ ಅಸ್ತಿತ್ವ ಸಾಬೀತಾಗುವುದಿಲ್ಲವೆಂದು ಯಾರಾದರೂ ಭಾವಿಸುವುದಾದರೆ ಅದಕ್ಕಿರುವ ಉತ್ತರ ಇದಾಗಿದೆ: ಈ ಶೃಂಖಲೆಗೆ ಒಂದು ಪ್ರಾರಂಭ ಸತ್ತೆ ಇಲ್ಲವೆಂಬುದು ಬುದ್ಧಿಗೆ ಅನುಯೋಜ್ಯವಲ್ಲ. ಏಕೆಂದರೆ, ಒಂದು ಆದಿ ಸತ್ತೆಯನ್ನು ಸಮ್ಮತಿಸದಿದ್ದರೆ ಆ ಪ್ರಾರಂಭ ವಸ್ತುವಿನ ಸರಣಿಯಹಾದ ಲೋಕ ಸಹಿತ ಎಲ್ಲಾ ವಸ್ತುಗಳನ್ನು ಅಲ್ಲಗಳೆದಂತಾಗುವುದು. ಬೇರೆ ಮಾತಿನಲ್ಲಿ ಹೇಳುವುದಾದರೆ, ಅದರ ಅರ್ಥ ಲೋಕವೂ ಸರ್ವ ವಸ್ತುಗಳೂ ಕೇವಲ ಮಾಯೆಯೆಂದೂ ಯಥಾರ್ಥದಲ್ಲಿ ಭೂಮಿಯಾಗಲಿ ಆಕಾಶವಾಗಲಿ ಸೂರ್ಯಚಂದ್ರಗಳಾಗಲಿ ನಕ್ಷತ್ರಗಳಾಗಲಿ ಮನುಷ್ಯನಾಗಲಿ ಇತರ ಜೀವಜಾಲಗಳಾಗಲಿ ವೃಕ್ಷವಾಗಲಿ ನೀರಾಗಲಿ ಗಾಳಿಯಾಗಲಿ ಇತರ ಯಾವುದೇ ವಸ್ತುವಾಗಲಿ ಇಲ್ಲವೆಂದಾಗಿದೆ. ಉದಾಹರಣೆಗಾಗಿ ಲೋಕವನ್ನು 'ಎ' ಎಂದೂ ಅದರ ಸೃಷ್ಟಿಕರ್ತನನ್ನು 'ಬಿ' ಎಂದೂ ಹೆಸರಿಸೋಣ. 'ಬಿ'ಯನ್ನು 'ಸಿ'ಯೂ 'ಸಿ'ಯನ್ನು 'ಡಿ'ಯೂ ಸೃಷ್ಟಿಸಿದ್ದೆಂದು ಸಂಕಲ್ಪಿಸಿರಿ. ಈ ವಿಧದಲ್ಲಿ ಸಾಧ್ಯವಿದ್ದಷ್ಟು ಈ ಶೃಂಖಲೆಯನ್ನು ಮುಂದುವರಿಸಿಕೊಂಡು ಹೋಗಿರಿ. ಎಂದರೆ, ಪ್ರತಿಯೊಂದು ವಸ್ತುವಿನ ಸಂಬಂಧಿಸಿ ಅದು ಅದಕ್ಕಿಂತ ಉನ್ನತ ಮಟ್ಟದ ಇನ್ನೊಂದು ವಸ್ತುವಿನ ಸೃಷ್ಟಿಯೆಂದು ಭಾವಿಸಿರಿ. ಆಗ ಆ ಶೃಂಖಲೆ ಎಲ್ಲಿಯೂ ಕೊನೆಗೊಳ್ಳುವುದಿಲ್ಲವೆಂಬುದು ಸ್ಪಷ್ಟ. ಅದರ ಅರ್ಥ ಈ ಶೃಂಖಲೆಗೆ ಮೊತ್ತಮೊದಲಿ

ನದೆಂದು ಹೇಳಲಾಗುವ ಒಂದು ಕೊಂಡಿ ಇದೆಯೆಂದು ಸಾಬೀತಾಗುವುದಿಲ್ಲ ಎಂದಾಗಿದೆ. ಆದಿ ಕೊಂಡಿ ಸಾಬೀತಾಗುವುದಿಲ್ಲವಾದರೆ ಅದರ ಸೃಷ್ಟಿಯಾಗಿರುವ ನಂತರದ ಕೊಂಡಿ ಸಹ ಸಾಬೀತಾಗುವುದಿಲ್ಲ. ಸಂಕ್ಷಿಪ್ತವಾಗಿ ಮೊದಲಿನ ಕೊಂಡಿ ಸಾಬೀತಾಗುವುದಿಲ್ಲವಾದುದರಿಂದ ನಂತರದ ಎಲ್ಲಾ ಕೊಂಡಿಗಳು ಸಹ ಕಳಚಿಕೊಳ್ಳುತ್ತವೆ. ಮೇಲಿನ ಉದಾಹರಣೆಯಿಂದ ಹೇಳುವುದಾದರೆ 'ಡಿ'ಯ ಅಸ್ತಿತ್ವ ಸಾಬೀತಾಗುವುದಿಲ್ಲವಾದರೆ 'ಸಿ' ಸಹ ಇಲ್ಲವೆಂದೂ 'ಸಿ'ಯ ಅಸ್ತಿತ್ವ ಸಾಬೀತಾಗುವುದಿಲ್ಲವಾದರೆ 'ಬಿ' ಸಹ ಇಲ್ಲವೆಂದೂ 'ಬಿ'ಯ ಅಸ್ತಿತ್ವಸಾಬೀತಾಗುವುದಿಲ್ಲವಾದರೆ 'ಎ' ಸಹ ಇಲ್ಲವೆಂದೂ ಒಪ್ಪಬೇಕಾದೀತು. ಆಗ, 'ಡಿ'ಯ ಅಸ್ತಿತ್ವವನ್ನು ಅಲ್ಲಗಳೆಯುವುದರಿಂದ 'ಎ'ಯ ಅಸ್ತಿತ್ವವನ್ನು ಸಹ ಅಲ್ಲಗಳೆಯಲಿಕ್ಕೆ ನಾವು ನಿರ್ಬಂಧಿತರಾಗುವೆವು. ಆದರೆ ಕನಿಷ್ಟ ಪಕ್ಷ 'ಎ' ಎಂದು ನಾವು ಹೆಸರಿಸಿರುವ ಲೋಕದ ಅಸ್ತಿತ್ವ ಸರ್ವಸಮ್ಮತವಾಗಿ ಸಾಬೀತು ಗೊಂಡಿದೆ. ಲೋಕದ ಅಸ್ತಿತ್ವವನ್ನು ಅಲ್ಲಗಳೆಯಲಿಕ್ಕೆ ಯಾರಿಗೂ ಸಾಧ್ಯವಿಲ್ಲ. ಒಟ್ಟಿನಲ್ಲಿ, ಈ ಶೃಂಖಲೆಯ ಆದಿ ಕೊಂಡಿ ಸಾಬೀತಾಗುವುದಿಲ್ಲವೆಂಬ ಅನುಮಾನ ಸರಿಯಲ್ಲ. ಏಕೆಂದರೆ, ಆಗ ಪ್ರಪಂಚದ ಅಸ್ತಿತ್ವವನ್ನು ಅಲ್ಲಗಳೆಯಬೇಕಾದೀತು. ಆದ್ದರಿಂದ ಈ ಶೃಂಖಲೆಗೆ ಒಂದು ಆದಿ ಕೊಂಡಿ ಇದೆಯೆಂದು ನಾವು ಒಪ್ಪಲು ನಿರ್ಬಂಧಿತರು. ಅದರ ಅರ್ಥ ಅದಕ್ಕಿಂತ ಮಿಗಿಲಾದ ಒಂದು ಸತ್ತೆಯಿಲ್ಲದ ಆದಿ ಸತ್ತೆಯಲ್ಲಿ ವಿಶ್ವಾಸವಿಡಬೇಕಾಗುತ್ತದೆ. ಆದರೆ ಅಂಥ ಒಂದು ಸತ್ತೆ ಸೃಷ್ಟಿಯಾಗಿರಲಾರದೆಂಬುದು ಸ್ಪಷ್ಟ. ದೇವನೆಂದು ನಾವು ಹೇಳುವುದು ಅದೇ ಸತ್ತೆಯನ್ನಾಗಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಈ ಶೃಂಖಲೆಯನ್ನು ಎಷ್ಟು ಮುಂದುವರಿಸಿಕೊಂಡು ಹೋದರೂ ಒಂದು ಕಡೆಯಲ್ಲಿ ಅದನ್ನು ಕೊನೆಗೊಳಿಸಬೇಕಾಗುತ್ತದೆ. ಎಂದರೆ ಯಾವುದಾದರೂ ಒಂದು ಸತ್ತೆಯನ್ನು ಈ ಶೃಂಖಲೆಯ ಮೊದಲಿನ ಕೊಂಡಿಯೆಂದು ಒಪ್ಪಬೇಕಾಗುತ್ತದೆ. ಆ ಆದಿ ಕೊಂಡಿಯೇ ಸೃಷ್ಟಿಯಲ್ಲದ ದೈವ. ಇತರ ಎಲ್ಲಾ ವಸ್ತುಗಳು, ಅವುಗಳಿಗೆ ಎಷ್ಟು ಮಿಗಿಲಾದ ಶಕ್ತಿಯೂ ಶ್ರೇಷ್ಠತೆಯೂ ಇದ್ದರೂ ಸರಿ, ಅವೆಲ್ಲಾ ಸೃಷ್ಟಿ ಹಾಗೂ ಏಕದೇವನ ಹಿಡಿತದಲ್ಲಿವೆ.

ಇನ್ನು ದೇವನ ಸೃಷ್ಟಿಕರ್ತನೂ ಒಡೆಯನೂ ಯಾರೆಂಬ ಪ್ರಶ್ನೆಯೇ ತಪ್ಪೆಂದು ಸಂಕ್ಷಿಪ್ತವಾಗಿ ವ್ಯಕ್ತಪಡಿಸಲು ನಾನು ಬಯಸುತ್ತೇನೆ. ದೇವನ ಸಂಬಂಧಿಸಿ ಅಂಥ ಒಂದು ಪ್ರಶ್ನೆಯೇ ಉದ್ಭವಿಸಬಾರದು. ಏಕೆಂದರೆ ದೈವ ಮತ್ತು ಸೃಷ್ಟಿಯ ವ್ಯಾಖ್ಯೆಗಳು ವಿಭಿನ್ನ. ಎರಡು ವ್ಯಾಖ್ಯೆಗಳು ಸಹ ಒಂದೇ ವಸ್ತುವಿನಲ್ಲಿ ಒಟ್ಟುಗೂಡುವುದೆಂಬುದನ್ನು ವಿವೇಕ ಒಪ್ಪಲಾರದು. ಎಲ್ಲಕ್ಕಿಂತ ಮಿಗಿಲಾದ ಒಂದು ಸತ್ತೆಗೆ ದೈವವೆಂಬ ಹೆಸರು ಹೇಳಬೇಕೆಂದು "ದೈವ"ದ ವ್ಯಾಖ್ಯೆ ನಮ್ಮೊಡನೆ ಅಗತ್ಯಪಡಿಸುತ್ತದೆ. ಆದರೆ "ಸೃಷ್ಟಿ"ಯ ವ್ಯಾಖ್ಯೆ ಯಾವ ವಸ್ತುವನ್ನು ನಾವು ಸೃಷ್ಟಿಯೆಂದು ಗಣಿಸುತ್ತೇವೋ ಆ ವಸ್ತುವಿಗೆ ಮಿಗಿಲಾದ ಒಂದು ಸತ್ತೆ ಇದೆಯೆಂದು ಸಮ್ಮತಿಸಲಿಕ್ಕೆ ನಮ್ಮನ್ನು ನಿರ್ಬಂಧಿಸುತ್ತದೆ. ಈ ಎರಡು ನಿರೂಪಣೆಗಳು ಯಾವ ರೀತಿಯಲ್ಲೂ ಒಂದು ವಸ್ತುವಿನಲ್ಲಿ ಒಂದುಗೂಡಲಾರವು. ಚೆನ್ನಾಗಿ ಆಲೋಚಿಸಿ ನೋಡಿರಿ. ಯಾವುದಾದರೂ ವಸ್ತುವನ್ನು ಸೃಷ್ಟಿಯೆಂದು ಒಪ್ಪುವುದರ ಅರ್ಥ ಅದಕ್ಕಿಂತ ಮಿಗಿಲಾಗಿ ಅದರ ಸೃಷ್ಟಿಕರ್ತ ಹಾಗೂ ಒಡೆಯನಾದ ಒಂದು ಸತ್ತೆಯುಂಟೆಂದಾಗಿದೆ. ಆಗ, ದೈವವನ್ನು ಸೃಷ್ಟಿಯೆಂದು ಭಾವಿಸುವುದಾದರೆ, ದೇವನ ಮೇಲೆ ಅವನ ಸೃಷ್ಟಿಕರ್ತ ಹಾಗೂ ಒಡೆಯನಾಗಿ ಅವನ ಮೇಲೆ ಆಧಿಪತ್ಯ ನಡೆಸುವ ಮತ್ತು ಅವನ ಅಸ್ತಿತ್ವಕ್ಕೆ ಅವಲಂಬವಾಗಿರುವ ಇನ್ನೊಂದು ಸತ್ತೆ ಇದೆಯೆಂದಾಗುತ್ತದೆ. ಈ ಸತ್ತೆ ಎಲ್ಲಾ ವಿಧದಲ್ಲೂ ದೇವನಿಗೆ ಮಿಗಿಲಾಗಿರಬಹುದು. ಅಂಥ ಒಂದು ಮಿಗಿಲಾದ ಸತ್ತೆ ಇದೆಯೆಂದಾದರೆ ನಾವು ಮಾತ್ರವಾದ ಆ ಕೆಳಗಿನ ಸತ್ತೆ ದೈವವಲ್ಲ; ಮೇಲಿನ ಸತ್ತೆಯು ದೈವವಾಗಿರಬೇಕೆಂಬುದು ಸ್ಪಷ್ಟ. ಕೆಳಗಿನ ದೈವವಾದರೋ, ಸೃಷ್ಟಿಯೂ ಆಶ್ರಿತನೂ ಆಳಲ್ಪಡುವವನೂ ಆಗಿರಬಹುದು. ಎಲ್ಲಕ್ಕಿಂತ ಮಿಗಿಲಾದ ಒಂದು ಸತ್ತೆ ಇದೆಯೆಂದಾದರೆ ಆ ಕೆಳಗಿನ ಸತ್ತೆಯ ಕುರಿತು ದೈವವೆಂಬ ಪದವನ್ನು ಪ್ರಯೋಗಿಸಲು ಬುದ್ಧಿಯುಳ್ಳ ಯಾರಿಗೆ ಸಾಧ್ಯ? ಇನ್ನೂ ಆಲೋಚಿಸಿರಿ. ಯಾವುದಾದರೊಂದು ಸತ್ತೆಯನ್ನು ಅದೊಂದು ಸೃಷ್ಟಿಯಲ್ಲವೆಂದು ಒಪ್ಪದೆ ದೈವವೆಂದು ಹೆಸರಿಸಲು ನಿಮಗೆ ಸಾಧ್ಯವಿಲ್ಲ. ನೀವು ಅದರ ಸಂಬಂಧಿಸಿ ಅದೊಂದು ಸೃಷ್ಟಿಯೆಂಬ ಭಾವನೆಯನ್ನು ಕೈಗೊಂಡರೆ ಅದಕ್ಕಿಂತ ಮೇಲೆ ಅದರ ಸೃಷ್ಟಿಕರ್ತನೂ ಒಡೆಯನೂ ಆಗಿ ಇನ್ನೊಂದು ಸತ್ತೆಯು

ಅಸ್ತಿತ್ವವನ್ನು ಸಾಬೀತುಗೊಳಿಸಲು ನಿರ್ಬಂಧಿತರಾಗುವಿರಿ. ಆ ಮೇಲಿನ ಸತ್ತೆಯು ಅಸ್ತಿತ್ವವನ್ನು ಅಂಗೀಕರಿಸುವುದರೊಂದಿಗೆ ದೈವದ ವ್ಯಾಖ್ಯೆ ಕೆಳಗಿನ ಸತ್ತೆಯಿಂದ ಆ ಮೇಲಿನ ಸತ್ತೆಗೆ ವರ್ಗಾಯಿಸಲ್ಪಡುತ್ತದೆ. ಸಂಕ್ಷಿಪ್ತವಾಗಿ, ಸೃಷ್ಟಿಯೆಂದು ಗಣಿಸಲ್ಪಡುವ ಯಾವುದೇ ಸತ್ತೆಗೂ ದೈವವಾಗಲಿಕ್ಕೆ ಸಾಧ್ಯವಿಲ್ಲ. ಏಕೆಂದರೆ, ಆ ಸ್ಥಿತಿಯಲ್ಲಿ ಅದಕ್ಕಿಂತ ಮೇಲಿನ ಮತ್ತು ಅದನ್ನು ಸೃಷ್ಟಿಸಿದ ಸತ್ತೆಗೆ ದೈವವೆಂದು ಹೇಳಲಾಗುವುದು. ಒಟ್ಟಾರೆ, ದೈವದ ಮತ್ತು ಸೃಷ್ಟಿಯ ವ್ಯಾಖ್ಯೆ ಎಂದಿಗೂ ಒಂದೇ ವಸ್ತುವಿನಲ್ಲಿ ಒಂದುಗೂಡಲಾರದೆಂದು ಸಾಬೀತಾಯಿತು. ಎಂದರೆ, ಒಂದೇ ಸತ್ತೆ ದೈವ ಮತ್ತು ಸೃಷ್ಟಿಯಾಗಿ ಇರುವುದು ಅಸಂಭವನೀಯ. ಅದು ಅಸಂಭಾವ್ಯವಾದುದರಿಂದ ದೈವವೆಂದು ನಂಬುವ ಯಾವುದಾದರೂ ಸತ್ತೆಯು ಸಂಬಂಧಿಸಿ ಅದರ ಸೃಷ್ಟಿಕರ್ತ ಯಾರೆಂಬ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಒಪ್ಪದೆ ನಿರ್ವಾಹವಿಲ್ಲ.

ಈ ಸಂಶಯಕ್ಕೆ ಇನ್ನೊಂದು ಉತ್ತರ ಇದಾಗಿದೆ– ದೇವನ ಸಂಬಂಧಿಸಿ ಅವನ ಸೃಷ್ಟಿಕರ್ತ ಯಾರೆಂಬ ಪ್ರಶ್ನೆ ಉದ್ಭವಿಸಲಿಕ್ಕೆ ಎಡೆಯಿಲ್ಲವೆಂಬ ವಾದವನ್ನು ಬದಿಗೆ ಸರಿಸಿ, ಸದ್ಯ ದೈವವನ್ನು ಒಂದು ಸೃಷ್ಟಿಯೆಂದು ಸಮ್ಮತಿಸೋಣ; ನಂತರ ಅದರ ಫಲಿತಾಂಶವೇನೆಂದು ನೋಡೋಣ. ಪ್ರಪಂಚದಲ್ಲಿರುವ ಪ್ರತಿಯೊಂದು ವಸ್ತುವಿಗೂ ಕೆಲವು ವಿಶಿಷ್ಟ ಗುಣಗಳೂ ಸ್ವಭಾವಗಳೂ ಇವೆ. ಆ ಗುಣ ಸ್ವಭಾವಗಳಿಂದ ಅದು ಇತರ ವಸ್ತುಗಳಿಂದ ಭಿನ್ನವಾದುದೆಂದು ಗುರುತಿಸಲ್ಪಡುತ್ತದೆ. ಉದಾಹರಣೆಗಾಗಿ ಗಾಳಿಯಲ್ಲೂ, ಕಲ್ಲಿನಲ್ಲೂ. ಗೋಚರಿಸದ ಕೆಲವು ವೈಶಿಷ್ಟ್ಯಗಳು ನೀರಿಗೆ ಇವೆ. ಆ ವಿಶಿಷ್ಟತೆಯಿಂದಾಗಿ ಗಾಳಿ ಮತ್ತು ಕಲ್ಲಿನಿಂದ ನೀರನ್ನು ಬೇರೆಯಾಗಿ ನಾವು ಗುರುತಿಸುತ್ತೇವೆ. ಆ ವೈಶಿಷ್ಟ್ಯವನ್ನು ನೀರಿನಿಂದ ಬೇರ್ಪಡಿಸುವುದಾದರೆ ನೀರು ನೀರಾಗಿರಲಿಕ್ಕಿಲ್ಲ. ಸಂಕ್ಷಿಪ್ತವಾಗಿ, ಪ್ರತಿಯೊಂದು ವಸ್ತುವಿಗೂ ವಿಭಿನ್ನ ಗುಣ ವಿಶೇಷಗಳಿವೆ. ಆ ಗುಣ ವಿಶೇಷಗಳೇ ಅವುಗಳ ಅಸ್ತಿತ್ವವನ್ನು ಬಾಕಿಯಾಗಿರಿಸುತ್ತವೆ ಹಾಗೂ ಇತರ ವಸ್ತುಗಳಿಂದ ಅವುಗಳನ್ನು ಬೇರ್ಪಡಿಸಿ ತಿಳಿಯಲು ಕಾರಣವಾಗುತ್ತವೆ. ನಾವು ಒಂದು ಸತ್ತೆಯ ಸಂಬಂಧಿಸಿ ದೈವವೆಂಬ ಪದವನ್ನು ಪ್ರಯೋಗಿಸುವಾಗ, ಆ ಹೆಸರು ನೀಡಲ್ಪಡಲಿಕ್ಕೆ ಹಾಗೂ ಇತರ ವಸ್ತುಗಳಿಂದ ಅದನ್ನು ಬೇರ್ಪಡಿಸಲಿಕ್ಕೆ ಯೋಗ್ಯವಾದ ಕೆಲವು ಗುಣ ವಿಶೇಷಗಳನ್ನು ನಮ್ಮ ಬುದ್ಧಿ ಸಮ್ಮತಿಸಬೇಕು. ಆ ಗುಣ ವಿಶೇಷಗಳು ದೈವಾಸ್ತಿತ್ವದ ಸ್ತಂಭಗಳಂತಿವೆ. ಅವುಗಳನ್ನು ಆ ಸತ್ತೆಯಿಂದ ಬೇರ್ಪಡಿಸಿದರೆ ಮತ್ತೆ ಅದು ದೈವವಾಗಿರಲಿಕ್ಕಿಲ್ಲ. ಉದಾಹರಣೆಗಾಗಿ, ಒಂದು ಒಬ್ಬ ದೇವನಿದ್ದರೆ ಅವನು ಅನಾದಿಯಾಗಿರಬೇಕೆಂದು ವಿವೇಕ ನಮಗೆ ತೋರಿಸುತ್ತದೆ. ಎಂದರೆ, ಅವನಿಗೆ ಆದಿಯಿಲ್ಲ. ಒಬ್ಬ ದೇವನಿದ್ದರೆ ಅವನು ಅನಶ್ವರನಾಗಿರಬೇಕೆಂದು ಬುದ್ಧಿ ನಮಗೆ ತೋರಿಸುತ್ತದೆ. ಎಂದರೆ ಅವನು ಶಾಶ್ವತನಾಗಿರುತ್ತಾನೆ. ಒಬ್ಬ ದೇವನಿದ್ದರೆ ಅವನು ಸ್ವಯಂ ಸಂಪೂರ್ಣನಾಗಿರಬೇಕೆಂದು ವಿವೇಕ ನಮಗೆ ತೋರಿಸಿಕೊಡುತ್ತದೆ. ಎಂದರೆ, ಇನ್ನೊಂದು ವಸ್ತುವಿನ ಆಶ್ರಯವಿಲ್ಲದೆ ಸ್ವಯಂ ನೆಲೆನಿಲ್ಲುವವನಾಗಿರಬೇಕು. ಒಬ್ಬ ದೇವನಿದ್ದರೆ ಅವನು ಸರ್ವಶಕ್ತನಾಗಿರಬೇಕೆಂದು ಬುದ್ಧಿ ನಮಗೆ ತೋರಿಸಿಕೊಡುತ್ತದೆ. ಎಂದರೆ, ಅವನ ಶಕ್ತಿ ಪರಿಪೂರ್ಣವಾಗಿರಬೇಕು. ಅವನ ಪ್ರವೃತ್ತಿಗಳಲ್ಲಿ ಹಸ್ತಕ್ಷೇಪ ಮಾಡುವಂಥ ಬೇರೆ ಯಾವುದೇ ಶಕ್ತಿ ಇರಬಾರದು. ಒಬ್ಬ ದೇವನಿದ್ದರೆ, ಅವನು ಏಕನಾಗಿರಬೇಕೆಂದು ವಿವೇಕ ನಮಗೆ ತೋರಿಸಿಕೊಡುತ್ತದೆ. ಎಂದರೆ ಅವನಿಗೆ ಸಮಾನನಾಗಿ ಯಾರೂ ಇರಬಾರದು. ಒಬ್ಬ ದೇವನಿದ್ದರೆ ಅವನು ತನ್ನೆಲ್ಲಾ ಗುಣ ವಿಶೇಷಗಳಲ್ಲಿ ಸ್ಥಿರತೆಯುಳ್ಳವನೂ ಸ್ವತಂತ್ರನೂ ಆಗಿರಬೇಕೆಂದು ವಿವೇಕ ನಮಗೆ ತೋರಿಸಿಕೊಡುತ್ತದೆ. ಎಂದರೆ ಅವನ ಎಲ್ಲಾ ಗುಣ ವಿಶೇಷಗಳು ಅವನಲ್ಲಿ ಸದಾ ಇರಬೇಕು; ಅವುಗಳ ನೆಲೆ ನಿಲ್ಲುವಿಕೆ ಇನ್ನೊಂದು ಸತ್ತೆಯ ಅಭೀಷ್ಟ ಅಥವಾ ಆಶ್ರಯಕ್ಕೆ ವಿಧೇಯವಾಗಿರಬಾರದು.

ನಾನು ಉದಾಹರಣೆಯಾಗಿ ಹೇಳಿದ ಗುಣವಿಶೇಷಗಳೆಲ್ಲಾ ನಾವು ದೈವವೆಂದು ಹೆಸರಿಸುವ ಆ ಸತ್ತೆಯಲ್ಲಿ ಇರಬೇಕೆಂದು ವಿವೇಕ ನಮಗೆ ತಿಳಿಸಿಕೊಡುತ್ತದೆ. ಏಕೆಂದರೆ, ಇಷ್ಟರ ವರೆಗೆ ನಡೆದುಕೊಂಡು ಬಂದ ಹಾಗೂ ಈಗಲೂ ನಡೆದುಕೊಳ್ಳುತ್ತಾ ಇರುವ ಲೋಕ ವ್ಯವಸ್ಥೆಯ ಸ್ಥಾಪನೆ ಈ ಗುಣ ವಿಶೇಷಗಳ ಹೊರತು ಸಾಧ್ಯವಲ್ಲ. ಒಟ್ಟಾರೆ, ಈ ಗುಣ ವಿಶೇಷಗಳೂ ಇದೇ ರೀತಿಯ ಇತರ ಗುಣ ವಿಶೇಷಗಳೂ ದೈವ ಸಿಂಹಾಸನದ ಸ್ತಂಭಗಳಾಗಿವೆ. ಆ ಸ್ತಂಭಗಳ ಹೊರತಾಗಿ ಆ ಸಿಂಹಾಸನ ಯಾವ ರೀತಿಯಲ್ಲೂ ಬಾಕಿಯಾಗಲಿಕ್ಕಿಲ್ಲ. ಆದರೆ

ದೈವವನ್ನು ಸೃಷ್ಟಿಯೆಂದು ಸಂಕಲ್ಪಿಸುವುದಾದರೆ ಈ ಎಲ್ಲಾ ಗುಣ ವಿಶೇಷಗಳನ್ನು ಅಲ್ಲಗಳೆಯಲಿಕ್ಕೆ ನಾವು ನಿರ್ಬಂಧಿತರಾಗುವೆವು. ದೈವವನ್ನು ಸೃಷ್ಟಿಯೆಂದು ಭಾವಿಸುವುದಾದರೆ ಈ ಗುಣ ವಿಶೇಷಗಳಲ್ಲಿ ಯಾವುದೂ ಅವನಲ್ಲಿ ಬಾಕಿಯುಳಿಯದು. ಉದಾಹರಣೆಗೆ, ದೇವನು ಸೃಷ್ಟಿಯೆಂದಾದರೆ ಅವನು ಅನಾದಿಯಾಗುವುದಿಲ್ಲವೆಂಬುದು ಸ್ಪಷ್ಟ; ಅವನು ನೂತನವಾಗಿ ಉಂಟಾದವನೆಂದು ಒಪ್ಪಬೇಕಾದೀತು. ದೇವನು ಸೃಷ್ಟಿಯೆಂದಾದರೆ ಅವನು ಅನಶ್ವರನಾಗಿರಲಿಕ್ಕಿಲ್ಲ; ನಶ್ವರನೆಂದು ಒಪ್ಪಬೇಕಾದೀತು. ದೇವನು ಸೃಷ್ಟಿಯೆಂದಾದರೆ ಅವನು ಸ್ವಯಂ ಸಂಪೂರ್ಣನಾಗಿರಲಿಕ್ಕಿಲ್ಲ; ಅವನ ಸೃಷ್ಟಿಕರ್ತನೂ ಒಡೆಯನೂ ಆದ ಇನ್ನೊಂದು ಸತ್ತೆಯ ಆಶ್ರಿತನೆಂದು ಒಪ್ಪಬೇಕಾದೀತು. ದೈವವು ಸೃಷ್ಟಿಯೆಂದಾದರೆ ಅವನು ಸರ್ವಶಕ್ತನಾಗಿರಲಿಕ್ಕಿಲ್ಲ; ಅವನ ಶಕ್ತಿ ಪರಿಮಿತವೆಂದೂ ಅವನ ಸೃಷ್ಟಿಕರ್ತನೂ ಒಡೆಯನೂ ಆದ ಇನ್ನೊಂದು ಸತ್ತೆಗೆ ತೋರುವಾಗಲೆಲ್ಲ ಯಥೇಷ್ಟ ಅವನ ಪ್ರವೃತ್ತಿಗಳಲ್ಲಿ ಹಸ್ತಕ್ಷೇಪ ಮಾಡಲು ಅಧಿಕಾರವುಂಟೆಂದೂ ಒಪ್ಪಬೇಕಾದೀತು. ದೇವನು ಸೃಷ್ಟಿಯೆಂದಾದರೆ ಏಕನಾಗಿರಲಿಕ್ಕಿಲ್ಲ; ಅವನ ಹೊರತಾಗಿ ಬೇರೆಯೂ ದೈವಗಳಿವೆಯೆಂದು ಒಪ್ಪಬೇಕಾದೀತು. ಏಕೆಂದರೆ ಒಂದು ದೈವವನ್ನು ಸೃಷ್ಟಿಸಿದ ಸತ್ತೆ ತನ್ನ ಸೃಷ್ಟಿ ವೈಭವ ಮತ್ತು ಅಧಿಕಾರ ವ್ಯಾಪ್ತಿಯನ್ನು ಸಾಬೀತುಗೊಳಿಸಲಿಕ್ಕಾಗಿ ಅನೇಕ ದೈವಗಳನ್ನು ಸೃಷ್ಟಿಸದಿರಲಿಕ್ಕೆ ಕಾರಣವಿಲ್ಲ. ದೇವನು ಸೃಷ್ಟಿಯೆಂದಾದರೆ ಅವನು ತನ್ನ ಗುಣವಿಶೇಷಗಳಲ್ಲಿ ಯಾವುದರಲ್ಲೂ ಸ್ಥಿರತೆಯುಳ್ಳವನೂ ಸ್ವತಂತ್ರನೂ ಆಗಿರಲಾರ; ಅವನ ಗುಣವಿಶೇಷಗಳೆಲ್ಲಾ ಅವನ ಸೃಷ್ಟಿಕರ್ತನಾದ ಮೇಲಿನ ಸತ್ತೆಯ ಅಭೀಷ್ಟಕ್ಕೂ ದಯೆಗೂ ವಿಧೇಯವೆಂದು ಒಪ್ಪಬೇಕಾದೀತು. ಏಕೆಂದರೆ ಸೃಷ್ಟಿಯ ಎಲ್ಲಾ ಗುಣ ವಿಶೇಷ ಸೃಷ್ಟಿಯೇ ಆಗಿರುತ್ತದೆ ಮತ್ತು ಸೃಷ್ಟಿಕರ್ತನ ಅಧಿಕಾರಕ್ಕೆ ವಿಧೇಯವಾಗಿರುತ್ತದೆ. ಸಂಕ್ಷಿಪ್ತವಾಗಿ, ದೈವವು ಸೃಷ್ಟಿಯೆಂದು ಭಾವಿಸುವುದರ ಫಲಿತಾಂಶ ದೈವತ್ವದ ಸಿಂಹಾಸನ ಯಾವ ಗುಣವಿಶೇಷಗಳ ಮೇಲೆ ಸ್ಥಾಪಿತಗೊಂಡಿವೆಯೆಂದು ವಿವೇಕ ತೋರಿಸಿಕೊಡುತ್ತದೆಯೋ, ಆ ಗುಣ ವಿಶೇಷಗಳೆಲ್ಲಾ ಮರೆಯಾಗಿ ದೇವನು ಅವನ ಸ್ಥಾನದಿಂದ ಹೊರದೂಡಲ್ಪಟ್ಟು ಸಾಮಾನ್ಯ ಸೃಷ್ಟಿಯ ಸ್ಥಾನಕ್ಕೆ ಇಳಿಸಲ್ಪಡುತ್ತಾನೆ ಎಂದಾಗಿದೆ. ಅವನು ಎಲ್ಲಾ ವಿಷಯದಲ್ಲೂ ಅವನ ಸೃಷ್ಟಿಕರ್ತ ಹಾಗೂ ಒಡೆಯನ ಸಹಾಯಕ್ಕೆ ಆಶ್ರಿತನಾಗಿ ಯಾವ ವಿಧದಲ್ಲೂ ಸ್ವತಂತ್ರ ಜೀವಿತವಿಲ್ಲದವನಾಗುತ್ತಾನೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಯಾವ ರೀತಿಯಲ್ಲಿ ನೋಡಿದರೂ ದೈವದ ಮತ್ತು ಸೃಷ್ಟಿಯ ಗುಣ ವಿಶೇಷಗಳು ಪರಸ್ಪರ ವಿರುದ್ಧವೆಂದೂ ಅವು ಯಾವ ವಿಧದಲ್ಲೂ ಒಂದೇ ವಸ್ತುವಿನಲ್ಲಿ ಒಂದುಗೂಡುವುದು ಸಂಭವನೀಯವಲ್ಲವೆಂದೂ ಮನದಟ್ಟಾಗುತ್ತದೆ. ಒಟ್ಟಾರೆ, ಯಾವ ಸತ್ತೆಯನ್ನು ದೈವವೆಂದು ಭಾವಿಸಲಾಗುತ್ತದೋ, ಅದು ಸೃಷ್ಟಿಯಲ್ಲವೆಂದು ಒಪ್ಪಲಿಕ್ಕೂ ಯಾವ ಸತ್ತೆಯನ್ನು ಸೃಷ್ಟಿಯೆಂದು ಗ್ರಹಿಸುತ್ತೇವೋ, ಅದನ್ನು ದೈವವೆಂದು ಹೆಸರಿಸದಿರಲಿಕ್ಕೂ ನಾವು ನಿರ್ಬಂಧಿತರಾಗುತ್ತೇವೆ.

●


"ಯುಗರಶ್ಮಿ"ಗೆ ಚಂದಾದಾರರಾಗಿರಿ.

**ವಾರ್ಷಿಕ ಚಂದಾ ರೂ. 4-00**

ಅಂಚೆ ವೆಚ್ಚ ಉಚಿತ.

# ಯೇಸುಕ್ರಿಸ್ತರ ಪವಿತ್ರ ವಸ್ತ್ರ

★ ಎನ್. ಎ.

ಶಿಲುಬೆಗೆ ಹಾಕಿದ ಯೇಸುಕ್ರಿಸ್ತರನ್ನು ಕೆಳಗಿಳಿಸಿದ ಬಳಿಕ ಸುತ್ತಿದ ಪವಿತ್ರ ಶವವಸ್ತ್ರ (Holy Shroud) ಅದರ ಅಕೃತ್ರಿಮತೆಯನ್ನು ಸಾರುವ, ನಿರಾಕರಿಸಲಾಗದ ದೃಷ್ಟಾಂತಗಳ ಸಹಿತ 'ಶಿಲುಬೆಯ ಮೇಲಿನ ಮರಣ'ದ ವಾಸ್ತವಾಂಶವೇನೆಂದು ಸ್ಪಷ್ಟಪಡಿಸುವ ಪ್ರಬಲವಾದ ಸಾಕ್ಷ್ಯಗಳನ್ನು ನೀಡಿ ಕ್ರೈಸ್ತ ಲೋಕದಲ್ಲಿ ಕೋಲಾಹಲ ವನ್ನು ಸೃಷ್ಟಿಸಿದೆ.

ಕಳೆದ 80 ವರ್ಷಗಳ ಕಾಲದಿಂದ ನಡೆಸುತ್ತಿರುವ ಅಧ್ಯಯನ ಮತ್ತು 30 ವರ್ಷಗಳಿಂದ ಅಸಂಖ್ಯಾತ ವಿಜ್ಞಾನಿಗಳೂ ತಾಂತ್ರಿಕ ತಜ್ಞರೂ ಕಲಾ ವಿದಗ್ಧರೂ ನಡೆಸುತ್ತಿರುವ ನಿರಂತರ ಸಂಶೋಧನೆಗಳ ಮೂಲಕ ಈ ಪವಿತ್ರ ಬಟ್ಟೆ ಎರಡು ಸಾವಿರ ವರ್ಷಗಳ ಮೊದಲು ಯೇಸುಕ್ರಿಸ್ತರಿಗೆ ಹೊದಿಸಿದ ಬಟ್ಟೆಯೇ ಆಗಿದೆಯೆಂದೂ ಅದರ ಮೇಲೆ ಗೋಚರಿಸುವ ರಕ್ತದ ಕಲೆಗಳು ಇಸ್ರಾಯೇಲ್ ಪ್ರವಾದಿಯಾದ ಯೇಸುಕ್ರಿಸ್ತರ ಶರೀರದಲ್ಲಿ ಉಂಟಾದ ಗಾಯಗಳಿಂದ ಒಸರಿಸಿದ ಮನುಷ್ಯರಕ್ತದ ಕಲೆಗಳೇ ಆಗಿವೆಯೆಂದೂ ಅಸಂದಿಗ್ಧವಾಗಿ ರುಜುಗೊಳಿಸಲ್ಪಟ್ಟಿದೆ.

### ಶಿಲುಬಾ ಘಟನೆ

ಯಹೂದ, ಕ್ರೈಸ್ತ, ಮುಸ್ಲಿಂ ಎಂಬೀ ಮೂರು ಮಹಾ ಸಮುದಾಯಗಳೆಡೆಯಲ್ಲಿ ದೀರ್ಘಕಾಲದಿಂದ ವಾದಗ್ರಸ್ತವಾದ ಒಂದು ಪ್ರಶ್ನೆ ಯೇಸುಕ್ರಿಸ್ತರ ಅಥವಾ ಈಸಾ ಪ್ರವಾದಿಯ ಶಿಲುಬಾ ಘಟನೆಯಾಗಿದೆ.

ಮಿಥ್ಯಾ ಪ್ರವಾದಿ ಹೀನವಾದ ಮರಣಕ್ಕೆ ತುತ್ತಾಗುವನು, ಕೊಲ್ಲಲ್ಪಡುವನು ಎಂಬ ಪವಿತ್ರ ವಚನಗಳ ಪ್ರಕಾರ ಯೇಸುವನ್ನು ಶಿಲುಬೆಗೆ ಹಾಕಿ ಕೊಂದು ಆತನು ಶಪಿಸಲ್ಪಟ್ಟವನೂ ಮಿಥ್ಯಾವಾದಿಯೆಂದೂ ತಾವು ಸಾಬೀತುಪಡಿಸಿದ್ದೇವೆ ಎಂದು ಯಹೂದರು 19 ಶತಕಗಳಿಂದ ವಾದಿಸುತ್ತಿದ್ದಾರೆ.

ಯೇಸು ಶಿಲುಬೆಯ ಮೇಲೆ ಮರಣಿಸಿದ್ದು ವಾಸ್ತವವಾದರೂ ಅದು ಲೋಕದ ಪಾಪಮುಕ್ತಿಗಾಗಿದ್ದ ಒಂದು 'ಶಾಪಗ್ರಸ್ತ ಮರಣ'ವಾಗಿತ್ತೆಂದೂ ಮೂರನೆಯ ದಿನ ಪುನರುತ್ಥಾನಗೊಂಡ ಯೇಸು ಆಕಾಶಕ್ಕೆ ಏರಿ ಹೋದರೆಂದೂ ಕ್ರೈಸ್ತರು ನಂಬುತ್ತಿದ್ದಾರೆ.

ಆದರೆ ಈಸಾ ಪ್ರವಾದಿ ವಧಿಸಲ್ಪಡಲೂ ಇಲ್ಲ ಶಿಲುಬೆಯ ಮೇಲೆ ಮೃತ್ಯುವನ್ನಪ್ಪಲೂ ಇಲ್ಲವೆಂದೂ ಈ ವಿಷಯದಲ್ಲಿ ಯಹೂದರು ಸಂಶಯಗ್ರಸ್ತರಾಗಿದ್ದರೆಂದೂ ಅವರು ಊಹನೆಯನ್ನು ಕೈಗೊಂಡಿದ್ದರೆಂದೂ ಖುರ್‌ಆನ್ ಪ್ರಸ್ತಾಪಿಸಿದೆ (4:158). ಯೇಸುವಿಗೂ ಮಾತೆಗೂ ಜನವಾಸಯೋಗ್ಯವಾದ ಶುದ್ಧ ಜಲ ಸಮೃದ್ಧಿಯಿಂದ ಕೂಡಿದ ಒಂದು ಉನ್ನತ ಪ್ರದೇಶದಲ್ಲಿ ಆಭಯ ನೀಡಲಾಗಿತ್ತೆಂದು ಖುರ್‌ಆನ್ ವ್ಯಕ್ತಗೊಳಿಸಿದೆ (23:51). ಈಸಾ ಪ್ರವಾದಿ (ಯೇಸುಕ್ರಿಸ್ತರು) 120 ವಯಸ್ಸಿನ ವರೆಗೆ ಬದುಕಿದ್ದರೆಂದು ಮುಹಮ್ಮದ್ ಪೈಗಂಬರರು ನುಡಿದಿರುವರೆಂದು ಉಲ್ಲೇಖವಿದೆ. ಖುರ್‌ಆನಿನ ಪ್ರಸ್ತಾವನೆಯೂ ಪೈಗಂಬರರ ಹೇಳಿಕೆಯೂ ಸತ್ಯವೆಂದು ಆಧುನಿಕ ಸಂಶೋಧನೆಗಳು ನಿಸ್ಸಂದಿಗ್ಧವಾಗಿ ರುಜುಪಡಿಸಿವೆ.

ಕಾಶ್ಮೀರದ ಶ್ರೀನಗರದಲ್ಲಿರುವ ಯೂಸ್ ಆಸಫರ ಸಮಾಧಿ ಯೇಸುಕ್ರಿಸ್ತರ ಸಮಾಧಿಯೇ ಆಗಿದೆಯೆಂದೂ ಶಿಲುಬಾ ಘಟನೆಯ ನಂತರ ಪೆಲೆಸ್ತೀನದಿಂದ ಸುರಕ್ಷಿತರಾಗಿ ಪೂರ್ವ ಪ್ರದೇಶಗಳಲ್ಲಿ ಸಂಚರಿಸಿದ ಮಸೀಹಾ ಕೊನೆಗೆ ಭಾರತವನ್ನು ತಲುಪಿ ಕಾಶ್ಮೀರದಲ್ಲಿ ಮೃತ್ಯುವನ್ನಪ್ಪಿದರೆಂದೂ ಅಹ್ಮದಿಯಾ ಸಂಘಟನೆಯ ಸಂಸ್ಥಾಪ

ಕರು ಘೋಷಿಸಿ, ಈ ವಾಸ್ತವಿಕತೆಯನ್ನು ಸಾಬೀತುಗೊಳಿಸಿ ತೋರಿಸುವ ಹೆಚ್ಚಿನ ಸಾಕ್ಷ್ಯಗಳು ಮುಂದೆ ಲಭಿಸುವುವೆಂದು ಭವಿಷ್ಯ ನುಡಿದರು. ಯೇಸು ಟಿಬೇಟ್ ಮತ್ತು ಮಧ್ಯೇಶ್ಯ ಪ್ರದೇಶಗಳಲ್ಲಿ ಸಂಚರಿಸಿದ್ದರೆಂದು ಪ್ರಸ್ತಾಪಿಸುತ್ತಾ ರಶ್ಯನ್ ಸಂಚಾರಿಯಾದ ನಿಕೋಲಸ್ ನೋಟೋವಿಚ್ The Unknown Life of Jesus (ಯೇಸುವಿನ ಅಜ್ಞಾತ ಜೀವನ) ಎಂಬ ಹೆಸರಿನಲ್ಲಿ ಪ್ರಕಟಿಸಿದ ಕೃತಿ ಕ್ರೈಸ್ತ ಲೋಕದಲ್ಲಿ ದೊಡ್ಡ ಗುಲ್ಲೆಬ್ಬಿಸಿದ್ದು ಇದೇ ಕಾಲದಲ್ಲಾಗಿದೆ. ಇತ್ತೀಚೆಗೆ ಪುರಾತನ ವಸ್ತು ಸಂಶೋಧಕರು ಕಂಡು ಹಿಡಿದ Dead Sea Scrolls ಅಥವಾ 'ಖುಮ್ರಾನ್ ಸುರುಳಿಗಳು' ಆದಿ ಕಾಲದ ಕ್ರೈಸ್ತರ ನಂಬಿಕೆಯ ಕುರಿತು ಚಕಿತಗೊಳಿಸುವ ವಾಸ್ತವಾಂಶಗಳನ್ನು ಬಹಿರಂಗ ಗೊಳಿಸಿವೆ. ಆಧುನಿಕ ಕ್ರೈಸ್ತ ಮತದ ಮೂಲ ಸಿದ್ಧಾಂತವಾದ 'ಯೇಸುಕ್ರಿಸ್ತರ ಶಿಲುಬೆಯ ಮೇಲಿನ ಮರಣ ನಂಬಿಕೆ' ಆದಿಕಾಲದ ಕ್ರೈಸ್ತ ವಿಶ್ವಾಸದ ಅಂಶವಾಗಿರಲಿಲ್ಲವೆಂದು ಅದರಿಂದ ಸಾಬೀತಾಗಿದೆ. ಈಗ ಪವಿತ್ರ ವಸ್ತ್ರದ ಕುರಿತು ನಡೆಸಿದ ಸಂಶೋಧನೆಗಳು ಸಹ ಶಿಲುಬಾ ಮರಣ ವಿಶ್ವಾಸಕ್ಕೆ ಬಲವಾದ ಪ್ರಹಾರವೆಂದು ಗಣಿಸಲ್ಪಟ್ಟಿದೆ. ಯೇಸು ಶಿಲುಬೆಯ ಮೇಲೆ ಮೃತಪಟ್ಟಿಲ್ಲವೆಂದೂ ಪವಿತ್ರ ವಸ್ತ್ರದಲ್ಲಿರುವ ರಕ್ತದ ಕಲೆ ಜೀವಂತ ಶರೀರದಿಂದ ಒಸರಿದ್ದೆಂದೂ ಪ್ರಸ್ತುತ ಸಂಶೋಧನೆಗಳು ಬಹಿರಂಗಪಡಿಸಿವೆ.


## ಪವಿತ್ರ ವಸ್ತ್ರ ಸುವಾರ್ತೆಗಳಲ್ಲಿ

ಶಿಲುಬೆಯಿಂದ ಕೆಳಗಿಳಿಸಿದ ಯೇಸುವಿನ ಶರೀರವನ್ನು ಯಹೂದ ಪದ್ಧತಿ ಪ್ರಕಾರ ಸುಗಂಧ ದ್ರವ್ಯಗಳಿಂದ ಲೇಪನ ಮಾಡಿದ ನಂತರ ಒಂದು ವಸ್ತ್ರದಲ್ಲಿ ಸುತ್ತಿ ಸವಾಧಿ (ಕಲ್ಲಿನ ಗುಹೆ) ಯಲ್ಲಿಡಲಾಗಿತ್ತು. ಮೂರನೆಯ ದಿನ ಯೇಸು ಈ ಹೊದಿಕೆಯನ್ನು ನೀಗಿಸಿ ಗುಹೆಯಿಂದ ಹೊರಬಂದರು. ಯೇಸುವನ್ನು ರಕ್ಷಿಸುವ ಗೂಢಾಲೋಚನೆಯಲ್ಲಿ ಸೇರಿದ್ದ ಅರಿಮಥಾಯದ ಯೋಸೇಫ್ ಮತ್ತು ನಿಕೋದೇಮು ಎಂಬ ಹೆಸರಿನ ಭಿಷಗ್ವರ ಈ ಕಾರ್ಯದಲ್ಲಿ ಯೇಸುವಿಗೆ ಸಹಾಯವನ್ನಿತ್ತಿರಬೇಕು. ಗುಹೆಯಲ್ಲಿ ಯೇಸುವಿನ ಶರೀರವನ್ನಿಟ್ಟ ಸ್ಥಳದಲ್ಲಿ ಬಿಳಿ ವಸ್ತ್ರಧಾರಿಗಳಾದ ಇಬ್ಬರು ದೂತರು, ಒಬ್ಬ ತಲೆಯ ಭಾಗದಲ್ಲೂ ಇನ್ನೊಬ್ಬನು ಕಾಲಿನ ಭಾಗದಲ್ಲೂ ಕುಳಿತುಕೊಂಡು ಕಂಡುದಾಗಿ 'ಯೋಹಾನ'ದಲ್ಲಿ ಉಲ್ಲೇಖವಿದೆ. ಶಿಲುಬಾ ಘಟನೆಯ ಮೂರನೆಯ ದಿನ ಮುಂಜಾನೆ ಗುಹೆಯನ್ನು ಸಂದರ್ಶಿಸಿದ ಮರಿಯ ಮತ್ತಿತರರು ಯೇಸು ಕಾಣುವುದಿಲ್ಲವೆಂದು ಮೊದಲಿಗೆ ತಿಳಿಸಿದರು. ಗುರು ಕಾಣೆಯಾಗಿದ್ದಾರೆಂದು ಕೇಳಿ ಸೀಮೋನ, ಪೇತ್ರ ಮತ್ತು ಇನ್ನೊಬ್ಬ ಶಿಷ್ಯ ಗುಹೆಯೆಡೆಗೆ ಓಡಿ ಬಂದರು. ಆ ಶಿಷ್ಯನು ಪೇತ್ರನಿಗಿಂತ ಮುಂದೆ ಓಡಿ ಹೋಗಿ ಗುಹೆಯೊಳಗೆ ಇಣುಕಿ ನೋಡಿದಾಗ ವಸ್ತ್ರಗಳನ್ನು ಕಂಡನು. ನಂತರ ಸೀಮೋನ ಮತ್ತು ಪೇತ್ರ ಗುಹೆಯೊಳಗೆ ಪ್ರವೇಶಿಸಿ ವಸ್ತ್ರಗಳು ಅಲ್ಲಿರುವುದನ್ನೂ ಯೇಸುವಿನ ತಲೆಯ ಮೇಲಿದ್ದ ವಸ್ತ್ರ ಬೇರೊಂದೆಡೆಯಲ್ಲಿ ಸುತ್ತಿ ಇರುವುದಾಗಿಯೂ ಕಂಡರು. (ಯೋಹಾನ).

## ಪವಿತ್ರ ವಸ್ತ್ರದ ಚರಿತ್ರೆ

ಯೇಸು ಗುಹೆಯೊಳಗೆ ಉಪಯೋಗಿಸಿದ ಈ ವಸ್ತ್ರ ಪೇತ್ರನ ನೇತೃತ್ವದಲ್ಲಿ ವಿಶ್ವಾಸಿಗಳಾದ ಕ್ರೈಸ್ತರು ಒಂದು ಪುಣ್ಯ ಸ್ಮಾರಕ ವಸ್ತುವೆಂಬಂತೆ ಕಾಪಾಡಿಕೊಂಡು ಬಂದರು. ಆದಿ ಶತಕಗಳಲ್ಲಿ ಈ ಸ್ಮಾರಕ ವಸ್ತ್ರವನ್ನು ಎಲ್ಲಿಯೂ ಪ್ರದರ್ಶಿಸಲಾಗಿಲ್ಲ. ರೋಮನರ ಮರ್ದನ ಕಾರಣದಿಂದ ಮತ್ತು ಮತಪರವಾದ ಸ್ಮಾರಕಗಳಿಗೆದುರಾಗಿ ಆ ಕಾಲದಲ್ಲುಂಟಾದ ಕೆಲವು ಚಟುವಟಿಕೆಗಳಿಗೆ ಹೆದರಿಕೊಂಡು ಈ ಪವಿತ್ರ ಅವಶೇಷವನ್ನು ರಹಸ್ಯವಾಗಿರಿಸಲಾಗಿತ್ತು. ಆ ಕಾಲದಲ್ಲಿ ಆದಿ ಕ್ರೈಸ್ತರ ಅಭಯ ಕೇಂದ್ರಗಳಾಗಿದ್ದ ಸಮಾಧಿ ಗುಹೆಗಳಲ್ಲಿ (Cata Combs) ಒಂದರಲ್ಲಿ ಈ ಪವಿತ್ರ ವಸ್ತ್ರವನ್ನು ಮೊತ್ತ ಮೊದಲಿಗೆ ಕಂಡು ಹಿಡಿಯಲಾಗಿತ್ತು. ಅದು ನಂತರ ಪೌರಸ್ತ್ಯ ಕ್ರೈಸ್ತರ ಒಂದು ಮಹಾ ಕೇಂದ್ರವಾಗಿದ್ದ ಎಡೆಸ್ಸಾದಲ್ಲಿ ಸುರಕ್ಷಿಸಿ ಇರಿಸಲಾಗಿದ್ದರಿಂದ 'ಎಡೆಸ್ಸಾದ ವಸ್ತ್ರ' (Cloth of Edessa) ಎಂಬ ಹೆಸರಿನಲ್ಲಿ ಕರೆಯಲ್ಪಟ್ಟಿತು. ಒಬ್ಬ ರೋಮನ್ ಚಕ್ರವರ್ತಿ ಎಡೆಸ್ಸಾವನ್ನು ಆಕ್ರಮಿಸಿ ಪವಿತ್ರ ವಸ್ತ್ರವನ್ನು ಕೋನ್‌ಸ್ಟಂಟಿನೋಪಲಿಗೆ ಕೊಂಡು ಹೋದನು. 1204ರ ತನಕ ಸುಮಾರು 700 ವರ್ಷ ಕಾಲ ಅದನ್ನು ಅಲ್ಲಿ ಸುರಕ್ಷಿತವಾಗಿರಿಸಲಾಗಿತ್ತು. 1355ರಲ್ಲಿ ಫ್ರಾನ್ಸಿನ ಲಿರೆ (Lirey) ಎಂಬಲ್ಲಿ ಅದನ್ನು ಸುರಕ್ಷಿತವಾಗಿರಿಸಿದುದಾಗಿ

1



2

ಇಟೆಲಿಯ ಟ್ಯೂರಿನ್‌ನಲ್ಲಿರುವ ಯೇಸುಕ್ರಿಸ್ತರ ಪವಿತ್ರ ವಸ್ತ್ರ. ಸುಮಾರು ಆರು ಅಡಿ ನೀಳವುಳ್ಳ ಮನುಷ್ಯಾಕೃತಿಯ ಪ್ರತಿಚ್ಛಾಯೆ ಅದರಲ್ಲಿ ಗೋಚರಿಸುತ್ತದೆ. (1-2 ನೋಡಿರಿ).

ದಾಖಲೆ ಇದೆ. ಫ್ರೆಂಚರು ಪವಿತ್ರ ವಸ್ತ್ರದ ಪ್ರದರ್ಶನದಿಂದ ತುಂಬಾ ಹಣ ಗಳಿಸಿದರು. ಇದರ ನಂತರ ಇಟೆಲಿಯ ರಾಜಮಂದಿರ ನಿಯಂತ್ರಣದಲ್ಲಿ ಈ ಪವಿತ್ರ ಅವಶೇಷ ಟೂರಿನಿನ 'ರಿನೈಸೆನ್ಸ್ ಕಾಥೆಡ್ರ'ದಲ್ಲಿ ಸುರಕ್ಷಿತವಾಗಿರಿಸಲ್ಪಟ್ಟಿತು. ಅದರ ನಂತರ 'ಟೂರಿನಿನ ಪವಿತ್ರ ವಸ್ತ್ರ' ಎಂಬ ಹೆಸರಿನಲ್ಲಿ ಈ ಶವ ವಸ್ತ್ರವನ್ನು ಕರೆಯಲಾಯಿತು.

33 ವರ್ಷಗಳಿಗೊಮ್ಮೆ ಈ ವಸ್ತ್ರವನ್ನು ಸಾರ್ವಜನಿಕರ ಪ್ರದರ್ಶನಕ್ಕೆ ಇಡುವುದು ವಾಡಿಕೆ. ವಿಶೇಷವಾಗಿ ತಯಾರಿಸಿದ ಒಂದು ಬೆಳ್ಳಿಯ ಪೆಟ್ಟಿಗೆಯಲ್ಲಿ ಇದನ್ನು ಇಡಲಾಗಿದೆ. ಅಗ್ನಿಸ್ಪರ್ಶದ ಕಾರಣದಿಂದ ಪೆಟ್ಟಿಗೆಯ ಒಂದು ಭಾಗ ಕರಗಿ ವಸ್ತ್ರದ ಒಂದು ಭಾಗ



ಯೇಸುಕ್ರಿಸ್ತರ ಪವಿತ್ರ ವಸ್ತ್ರದಲ್ಲಿ ಮೂಡಿ ಬಂದ ಮುಖ ಚ್ಛಾಯೆಯನ್ನು ಎನ್‌ಲಾರ್ಜ್ ಮಾಡಿದಾಗ.

ಕರಟಿ ಹೋಗಿದೆ. ಕಳೆದ 300 ವರ್ಷಗಳಲ್ಲಿ 12 ಸಲ ಅದನ್ನು ಭಕ್ತ ಜನರ ದರ್ಶನಕ್ಕಾಗಿ ಇಡಲಾಗಿತ್ತು. 1973ರಲ್ಲಿ, ಟೆಲಿವಿಷನ್ ಪ್ರದರ್ಶನಕ್ಕೆ ಮೊದಲು ಅದನ್ನು ಪತ್ರ ಪ್ರತಿನಿಧಿಗಳೂ ಛಾಯಾಚಿತ್ರಗಾರರೂ ಅತ್ಯಂತ ಸಮೀಪದಿಂದ ಸ್ಪರ್ಶಿಸಿ ನೋಡಿದರು.

## ವೈಜ್ಞಾನಿಕ ಸಂಶೋಧನೆಗಳು

1898ರಲ್ಲಿ ಇಟೆಲಿಯ ಓರ್ವ ಎಡ್ವಕೇಟ್ ಸೆಕುಂಡಾ ಪಿಯಾ (Secunda Pia) 14 ಅಡಿ 3 ಇಂಚು ಉದ್ದ ಮತ್ತು 3 ಅಡಿ 7 ಇಂಚು ಅಗಲವಿರುವ ಈ ವಸ್ತ್ರದ ಫೋಟೋ ತೆಗೆದನು. ಸುಮಾರು 6 ಅಡಿ ನೀಳದ ಒಂದು ಮನುಷ್ಯ ಶರೀರದ ಮುಂಭಾಗ ಮತ್ತು ಹಿಂಭಾಗದ ಪ್ರತಿಚ್ಛಾಯೆಗಳು ವಸ್ತ್ರದಲ್ಲಿ ಗೋಚರಿಸಿದವು. ಸುವಾರ್ತೆಗಳಲ್ಲಿ ವಿವರಿಸಿದ ರೀತಿಯಲ್ಲಿ ಯೇಸುವಿನ ಶರೀರದಲ್ಲಿ ಉಂಟಾಗಿದ್ದ ಎಲ್ಲಾ ಗಾಯಗಳೂ ಪ್ರಹಾರಗಳಿಗೆ ಗುರಿಯಾಗಿ ರಕ್ತ ಒಸರಿದ ಕಲೆಗಳೂ ವಸ್ತ್ರದಲ್ಲಿ ಕಾಣಿಸಿದವಲ್ಲದೆ ಯೇಸುವಿನದೆಂದು ಖಂಡಿತ

ವಾಗಿ ಹೇಳಲಾಗುವ ನೆಗೆಟಿವ್ ರೂಪ ಸಹ ಅದರಲ್ಲಿ ಗೋಚರಿಸಿತು. ಆ ಬಳಿಕ ಅನೇಕ ವಿಜ್ಞಾನಿಗಳ ತಂಡ ನಿರಂತರ ಸಂಶೋಧನೆಗಳನ್ನು ಆರಂಭಿಸಿತು. ಡಾಕ್ಟರ್‌ಗಳು, ಸರ್ಜನ್‌ಗಳು, ಶರೀರ ವಿಜ್ಞಾನಿಗಳು, ಟೆಕ್ಸ್‌ಟ್ಟ್ಯಾಲ್ ವಿದಗ್ಧರು, ಇತಿಹಾಸಗಾರರು, ಪುರಾತನ ವಸ್ತು ಸಂಶೋಧಕರು, ಕಲಾಕಾರರು, ಕಲಾವಿಮರ್ಶಕರು ಮುಂತಾದವರು ಈ ತಂಡದಲ್ಲಿದ್ದರು. 2000 ವರ್ಷ ಮೊದಲು ರೋಮನ್ ಸಂಪ್ರದಾಯ ಪ್ರಕಾರ ಚಾಟಿ ಪ್ರಹಾರಕ್ಕೆ ಗುರಿಯಾದ ಮತ್ತು ಶಿಲುಬೆಗೆ ಜಡಿಯಲ್ಪಟ್ಟ ಓರ್ವ ಮನುಷ್ಯನ ಶವ ವಸ್ತ್ರವೇ ಇದು ಆಗಿದೆಯೆಂದು ಈ ವೈಜ್ಞಾನಿಕ ಸಂಶೋಧನೆಗಳ ಮೂಲಕ ನಿಸ್ಸಂದಿಗ್ಧವಾಗಿ ರುಜುಗೊಳಿಸಲ್ಪಟ್ಟಿದೆ. ಈ ವಸ್ತ್ರ ಯೇಸುವಿನ ಕಾಲದಲ್ಲಿ ಪೆಲಸ್ತೀನದಲ್ಲಿ ನೇಯ್ದ ಬಟ್ಟೆಯೆಂದು ಅದರ ನೇಯ್ಗೆಯ ಕ್ರಮ ಸ್ಪಷ್ಟಪಡಿಸುವುದಾಗಿ ಟೆಕ್ಸ್‌ಟ್ಯಾಲ್ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಈ ವಸ್ತ್ರದ ಮೇಲಿನ ಧೂಳಿಕಣಗಳನ್ನು ವಿಜ್ಞಾನಿಗಳು ಪರೀಕ್ಷಿಸಿದಾಗ ಅದರಲ್ಲಿ ಗುರುತಿಸಲ್ಪಟ್ಟ ಪುಷ್ಪ ಪರಾಗರೇಣುಗಳಲ್ಲಿ ಕೆಲವು ಪೆಲಸ್ತೀನದಲ್ಲಿ ಮಾತ್ರ ಇರುವವಾಗಿರುತ್ತವೆ.

ಸಂಕ್ಷಿಪ್ತವಾಗಿ, ಇಪ್ಪತ್ತನೆಯ ಶತಮಾನದ ವಿಜ್ಞಾನ ಮತ್ತು ತಾಂತ್ರಿಕ ವಿದ್ಯೆಯ ಸಹಾಯದಿಂದ ಯೇಸುವಿನ ಶಿಲುಬಾ ಘಟನೆ ಲೋಕದ ಮನಸ್ಸಾಕ್ಷಿಯ ಮುಂದೆ ಇನ್ನೊಮ್ಮೆ ಪುನರ್ಪರಿಶೀಲನೆಗೆ ಬಂದಿದೆ.

ಪವಿತ್ರ ವಸ್ತ್ರದ ಕುರಿತು ಗೌರವವನ್ನು ಪ್ರದರ್ಶಿಸುವುದನ್ನು ಕೆಥೋಲಿಕ್ ಸಭೆ ಪ್ರೋತ್ಸಾಹಿಸುವುದಾದರೂ ಇದರ ಪ್ರಾಮಾಣಿಕತೆಯನ್ನು ಅಂಗೀಕರಿಸುವ ಅಧಿಕೃತ ಅಭಿಪ್ರಾಯವನ್ನು ಪ್ರಕಟಿಸಿಲ್ಲ. ಯೇಸುವಿನ ಪ್ರತಿರೂಪ ಪವಿತ್ರ ವಸ್ತ್ರದಲ್ಲಿ ಮೂಡಿದ್ದು ಒಂದು ದಿವ್ಯದ್ಭುತವೆಂದು ಭಾವಿಸುವುದಾದರೂ ಇದು ಸಂಪೂರ್ಣ ಸ್ವಾಭಾವಿಕ ಮಾತ್ರವೆಂದು ವ್ಯಕ್ತಪಡಿಸಲಾಗಿದೆ. ಮಸೀಹಾ ಶಿಲುಬೆಯ ಮೇಲೆ ಮರಣ ಹೊಂದಲಿಲ್ಲವೆಂದು ಸಾಬೀತುಗೊಳಿಸುವ ಪುರಾವೆಗಳು ಆ ಮೂಲಕ ಸ್ಪಷ್ಟಗೊಂಡಿವೆ. ಈ ಕಾರಣದಿಂದ ಕೆಥೋಲಿಕ್ ಸಭೆ ಇಷ್ಟರ ವರೆಗೆ ಮೌನವಲಂಬಿಸಿದ್ದು. ಆದರೆ "ಪವಿತ್ರ ವಸ್ತ್ರದಲ್ಲಿ ಕಾಣಿಸುವ ಪ್ರತಿರೂಪ ಮನುಷ್ಯಕರಗಳಿಂದ ನಿರ್ಮಿಸಲ್ಪಟ್ಟದ್ದಲ್ಲ" ಎಂದು ಪೋಪ್ ಪಿಯೂಸ್ 9ನೇಯವರು ಪ್ರಸ್ತಾಪಿಸಿರುವರು. 1973 ನವೆಂಬರ್ 23ರಂದು ಪವಿತ್ರ ವಸ್ತ್ರ 20 ಕೋಟಿ ಜನರಿಗೆ ಕಾಣಿಸುವ ರೀತಿಯಲ್ಲಿ ಟೆಲಿವಿಷನ್‌ನಲ್ಲಿ ಪ್ರದರ್ಶಿಸುವ ಮೊದಲು ಪೋಪ್ ಪೌಲ್ ಮಾಡಿದ ಭಾಷಣದಲ್ಲಿ ಯೇಸುವನ್ನು ಸುತ್ತಿದ ವಸ್ತ್ರವೇ ಇದೆಂದು ತಾನು ವೈಯಕ್ತಿಕವಾಗಿ ನಂಬುತ್ತೇನೆಂದು ಘೋಷಿಸಿದರು.

### ಶಿಲುಬೆಯ ಮೇಲೆ ಮರಣ ಹೊಂದಲಿಲ್ಲ.

ಇಲ್ಲಸ್ಟ್ರೇಟೆಡ್ ವೀಕ್ಲಿ ಓಫ್ ಇಂಡಿಯಾ (Illustrated Weekly of India) ದ 1975 ಮಾರ್ಚ್ 30ರ ಸಂಚಿಕೆಯಲ್ಲಿ The Holy Shroud ಎಂಬ ತಲೆಬರಹದಲ್ಲಿ ಎಫ್. ಸಿ. ಫ್ರೈಟಾಸ್ (F. C. Freitas) ಬರೆದ ಲೇಖನದಲ್ಲಿ ಹೀಗೆ ಹೇಳಲಾಗಿದೆ:

"ಪವಿತ್ರ ಶವ ವಸ್ತ್ರದ ಕುರಿತು ಅತ್ಯಂತ ಕೋಲಾಹಲವನ್ನುಂಟು ಮಾಡುವ ವಿವಾದ ವಿಷಯ ಅದರ ನೈಜತೆಯ ಕುರಿತಲ್ಲ, ಬದಲಾಗಿ, ಕ್ರಿಸ್ತನ ಕಷ್ಟಾನುಭವಗಳನ್ನು ಅದು ಉಲ್ಲೇಖಿಸಿದ ರೀತಿಯ ಕುರಿತಾಗಿದೆ. ಪವಿತ್ರ ವಸ್ತ್ರ ಘೋಷಿಸುವ ಕ್ರೈಸ್ತ ಸಂದೇಶದ ಅತ್ಯಂತ ದೊಡ್ಡ ವಿಮರ್ಶಕನು ವಸ್ತ್ರದ ಸಂಬಂಧಿಸಿದ ಇಂಟರ್‌ನೇಶನಲ್ ಫೌಂಡೇಶನ್ ಪ್ರೆಸಿಡೆಂಟ್ ಎಂದು ಕರೆಯಲ್ಪಡುವ ಕುರ್ಟ್ ಬರ್ನಾ ಆಗಿದ್ದಾರೆ. ವಸ್ತ್ರದಿಂದ ಲಭಿಸಿದ ಪುರಾವೆಗಳನ್ನೂ ಕ್ರಿಸ್ತನ ಸಂಬಂಧಿಸಿ ತನಗೆ ಲಭಿಸಿದುದಾಗಿ ಅವರು ಹೇಳುವ ತಿಳುವಳಿಕೆಗಳನ್ನೂ ಅವಲಂಬಿಸಿ ಕುರ್ಟ್ ಬರ್ನಾ ಅಂದಾಜು ಮಾಡುವುದೇನೆಂದರೆ ಕ್ರಿಸ್ತ ಶಿಲುಬೆಯ ಮೇಲೆ ಮೃತಪಟ್ಟಿಲ್ಲವೆಂದೂ ಈಟಿಯ ತಿವಿತ ಆತನ ಹೃದಯಕ್ಕೆ ಘಾಸಿ ಮಾಡಲಿಲ್ಲವೆಂದೂ ಜೀವಂತವಾಗಿಯೇ ಆತನನ್ನು ಶಿಲುಬೆಯಿಂದ ಕೆಳಗಿಳಿಸಲಾಗಿತ್ತೆಂದೂ ಆಗಿದೆ. ಕ್ರಿಸ್ತನ ಮರಣದ ಹೆಸರಿನಲ್ಲಿ ಯಹೂದರೂ ಕ್ರೈಸ್ತರೂ ಬೇರ್ಪಡುವ ಅಗತ್ಯವಿಲ್ಲವೆಂದೂ ಅವರು ಹೇಳುತ್ತಾರೆ. ಕ್ರಿಸ್ತನ ತಥಾಕಥಿತ ಪುನರುತ್ಥಾನವು (Resurrection) ಅಬೋಧಾವಸ್ಥೆಯಿಂದ ಬೋಧಾವಸ್ಥೆಗೆ ಮರಳಿಕೆ ಮಾತ್ರ. ಕ್ರಿಸ್ತನನ್ನು ಚರಿತ್ರ ಪುರುಷನೆಂದು ಅಂಗೀಕರಿಸಿಕೊಂಡು ಆತನ ಪುನರುತ್ಥಾನ ಮತ್ತು ಅದರ ಸ್ವಾಭಾವಿಕ, ತಾತ್ವಿಕ ಮತ್ತು ಧರ್ಮಶಾಸ್ತ್ರ ಪರವಾದ ಕ್ರಿಯಾಫಲಗಳನ್ನು ಅಲ್ಲಗಳೆಯುವವರು ಕಳೆದ ಎರಡು ಸಾವಿರ ವರ್ಷಗಳಿಂದೀಚೆಗೆ ಪದೇ ಪದೇ ಕ್ರಿಸ್ತ ಶಿಲುಬೆಯ ಮೇಲೆ ಮೃತಪಡಲಿಲ್ಲವೆಂಬ

# "ಜಮಾಅತೆ ಇಸ್ಲಾಮಿ"ಯ ಲಕ್ಷ್ಯ— ಅಧಿಕಾರ ಕಸಿಯುವಿಕೆ

★ ಜೆ. ಡಿ. ಎಸ್.

ಸಯ್ಯದ್ ಅಬುಲ್ ಆಲಾ ಸಾಹೇಬ್ ಮೌದೂದಿ ಏತಕ್ಕಾಗಿ ಒಂದು ಪ್ರತ್ಯೇಕ ಜಮಾತನ್ನು ಸ್ಥಾಪಿಸಿದ್ದು? ಆ ಜಮಾತಿನ ಲಕ್ಷ್ಯವೇನು? ವಿವೇಚಿಸುವ ಮುಸ್ಲಿಮರ ಹೃದಯದಲ್ಲಿ ಉದಿಸುವ ಹಾಗೂ ಉತ್ತರ ಪಡೆಯಲು ಆಶಿಸುವ ಪ್ರಶ್ನೆಗಳಾಗಿವೆ ಇವು. "ಜಮಾಅತೆ ಇಸ್ಲಾಮಿ"ಯ ಲಕ್ಷ್ಯ ಬಲಪ್ರಯೋಗಿಸಿ ಅಧಿಕಾರ ಕಸಿದುಕೊಳ್ಳುವುದು ಮತ್ತು ಯುದ್ಧಮಾಡಿ ಲೋಕಾಧಿಪತ್ಯವನ್ನು ಪಡೆಯುವುದಾಗಿದೆ ಎಂದು ಅವರ ಸಾಹಿತ್ಯಗಳನ್ನು ಚೆನ್ನಾಗಿ ಅಧ್ಯಯನ ಮಾಡಿದವರಿಗೆ ತಿಳಿಯಬಹುದು. ಆದರೆ, ಸಾಮಾನ್ಯರು ಅದನ್ನು ತಿಳಿಯದೆ ಅವರ ಪ್ರಚಾರಕ್ಕೆ ಬಲಿಯಾಗುತ್ತಾರೆ. ಅವರ ಯಥಾರ್ಥ ಉದ್ದೇಶ ಲಕ್ಷ್ಯ ಇದೆಂದು ತಿಳಿದುಕೊಂಡರೆ ಸಾಮಾನ್ಯನು ಎಂದಿಗೂ ಅವರೊಂದಿಗೆ ಸೇರಲಾರ. ಒಟ್ಟಾರೆ, ಮೇಲೆ ಹೇಳಿದ ಪ್ರಶ್ನೆಗಳಿಗೆ ಅಬುಲ್ ಆಲಾ ಮೌದೂದಿ ಸಾಹೇಬ್, ಅವರ ಲೆಫ್ಟಿನೆಂಟರುಗಳಾದ ಅಮೀನ್ ಅಹ್ಸನ್ ಸಾಹೇಬ್ ಇಸ್ಲಾಹಿ, ಮುಹಮ್ಮದ್ ನಈಂ ಸಿದ್ದೀಖ್ ಸಾಹೇಬ್ ಎಂಬಿವರ ಬರಹಗಳಿಂದ ಉತ್ತರ ಕಂಡು ಹಿಡಿಯಬಹುದು.

ಪವಿತ್ರ ಖುರ್‌ಆನಿನಲ್ಲಿ ಹಿಸ್‌ಬುಲ್ಲಾ ಎಂದು ಹೆಸರಿಸಿದ್ದು ತನ್ನ ಪಾರ್ಟಿಯಾದ "ಜಮಾಅತೆ ಇಸ್ಲಾಮಿ"ಯ ಕುರಿತೆಂದು ವಾದಿಸುತ್ತಾ ಮೌದೂದಿ ಸಾಹೇಬ್ ಹೀಗೆ ಬರೆಯುತ್ತಾರೆ:

"ಈ ಪಾರ್ಟಿಗೆ ಆಡಳಿತಾಧಿಕಾರ ಕಸಿದುಕೊಳ್ಳದಿರಲು ನಿರ್ವಾಹವಿಲ್ಲ. ಏಕೆಂದರೆ ಅಕ್ರಮವಾದ ಸಂಸ್ಕೃತಿ ಒಂದು ಅಕ್ರಮಿಯಾದ ಆಡಳಿತದ ಶಕ್ತಿಯಿಂದ ನೆಲೆ ನಿಲ್ಲುತ್ತದೆ. ಎಷ್ಟರ ವರೆಗೆ ಆಡಳಿತ ಅಕ್ರಮಿಗಳಿಂದ ಸಾಲೀಹ್‌ಗಳ* ಕೈಗಳಿಗೆ ಬದಲಾಯಿಸಲ್ಪಡುವುದಿಲ್ಲವೋ ಅಷ್ಟರ ವರೆಗೆ ಒಳ್ಳೆಯ ಸಂಸ್ಕೃತಿ ಸ್ಥಾಪಿಸಲ್ಪಡಲು ಸಾಧ್ಯವಿಲ್ಲ." (ತಫ್‌ಹೀಮಾತ್–ಪುಟ 71).

### ಆಡಳಿತವನ್ನು ಕಸಿದುಕೊಳ್ಳಬೇಕು

ಇನ್ನೂ ಬರೆಯುತ್ತಾರೆ:

"ಇದು ಧರ್ಮೋಪದೇಶ ಮಾಡುವ ಭಾಷಣಗಾರರ ಹಾಗೂ ಸುವಾರ್ತೆಗಾರರ ಒಂದು ಸಂಘವಲ್ಲ. ತದ್ವಿರುದ್ಧವಾಗಿ ದೈವಿಕ ಭಟರ ಸಂಘವಾಗಿದೆ.... ಅದರ ಕೆಲಸ ಲೋಕದಿಂದ ಅಕ್ರಮ, ಅನ್ಯಾಯ, ಅಧರ್ಮ, ಕಲಹ, ಶೋಷಣೆ ಎಂಬಿವನ್ನು ಬಲಪ್ರಯೋಗಿಸಿ ನಿರ್ಮೂಲಗೊಳಿಸುವುದು, ಅಲ್ಲಾಹನ ಹೊರತಾದ ದೇವಂದಿರ ದೈವತ್ವವನ್ನು ಕೊನೆಗೊಳಿಸುವುದು, ಕೆಡುಕಿನ ಸ್ಥಾನದಲ್ಲಿ ಒಳಿತನ್ನು ಸ್ಥಾಪಿಸುವುದು. ಒಟ್ಟಾರೆ, ಈ ಪಾರ್ಟಿಗೆ ಆಡಳಿತಾಧಿಕಾರವನ್ನು ಕಸಿದುಕೊಳ್ಳದಿರಲಿಕ್ಕೆ ನಿರ್ವಾಹವಿಲ್ಲ." (ತಫ್‌ಹೀಮಾತ್ - ಪುಟ 71).

* ಅರ್ಥಾತ್, ಮೌದೂದಿ ಸಾಹೇಬರ ಅನುಯಾಯಿಗಳು -ಸಂ.

---

### ಯೇಸುಕ್ರಿಸ್ತರ ಪವಿತ್ರ ವಸ್ತ್ರ

(10ನೇ ಪುಟದಿಂದ)

ತತ್ವವನ್ನು ಹೇಳುತ್ತಿರುವರು. ಆದರೆ ಪವಿತ್ರ ಬರೆಹಗಳು (ಯೇಸುವಿನ ಚರಿತ್ರೆಯನ್ನು ದಾಖಲೆ ಮಾಡಿದ್ದು ಈ ಪವಿತ್ರ ಬರೆಹಗಳೇ ಆಗಿವೆ) ಕ್ರೈಸ್ತ ವಿಶ್ವಾಸ ಸಂಪೂರ್ಣ ಕ್ರಿಸ್ತ ಶಿಲುಬೆಯ ಮೇಲಿನ ಮರಣದಲ್ಲೂ ಪುನರುತ್ಥಾನದಲ್ಲೂ ಆಧರಿತವೆಂದು ವ್ಯಕ್ತಗೊಳಿಸುತ್ತವೆ."

"ಆದ್ದರಿಂದ, ಪವಿತ್ರವಸ್ತ್ರಕ್ಕೆ ಸಂಬಂಧಿಸಿದ ಪುರಾವೆಗಳ ಮುಖೇನ ಕ್ರಿಸ್ತ ಶಿಲುಬೆಯ ಮೇಲೆ ಮೃತಪಟ್ಟಿಲ್ಲವೆಂದು ಸಮರ್ಥಿಸುವ ಶ್ರಮ ಸೂಕ್ಷ್ಮಪರಿಶೀಲನೆಗೆ ಅರ್ಹವಾಗಿದೆ... ಪವಿತ್ರ ವಸ್ತ್ರದಲ್ಲಿ ಕಾಣಿಸುವ ದೊಡ್ಡ ರಕ್ತದ ಕಲೆಗಳು ಗುಹೆಯಲ್ಲಿರಿಸಿದ ನಂತರ ಕ್ರಿಸ್ತನಿಗೆ ಜೀವವಿತ್ತೆಂದು ರುಜುಪಡಿಸುತ್ತದೆಂಬುದು ಕುರ್ಟ್‌ಬರ್ನಾ ಎತ್ತಿಹಿಡಿಯುವ ಇನ್ನೊಂದು ವಾದವಾಗಿದೆ."

ಮತ್ತೂ ಬರೆಯುತ್ತಾರೆ.

"ಜನರನ್ನು ಸುಧಾರಿಸಲಿಕ್ಕೆ ಯಾವ ಯೋಜನೆಯೂ ಆಡಳಿತಾಧಿಕಾರವನ್ನು ಕಸಿದು ವಶಪಡಿಸುವುದರ ವಿನಾ ಫಲಕಾರಿಯಾಗಲಿಕ್ಕಿಲ್ಲ. ಅಲ್ಲಾಹನ ಭೂಮಿಯಿಂದ ಅಕ್ರಮ ಮತ್ತು ಅನ್ಯಾಯವನ್ನು ನಿರ್ಮೂಲಗೊಳಿಸಲಿಕ್ಕೂ ಜನರನ್ನು ಸುಧಾರಿಸಲಿಕ್ಕೂ ಯಾವನಾದರೂ ನಿಜವಾಗಿಯೂ ಇಚ್ಛಿಸುವುದಾದರೆ ಅವನು ಭಾಷಣಕಾರನೂ ಉಪದೇಶಕನೂ ಆಗಿ ವರ್ತಿಸುವುದು ವ್ಯರ್ಥ. ಅವನು ಎಚ್ಚೆತ್ತು ದೋಷಪೂರ್ಣ ಆಡಳಿತೆಯನ್ನು ಕೊನೆಗೊಳಿಸಿ ದುರ್ಜನರ ಕೈಯಿಂದ ಅಧಿಕಾರ ಕಸಿದುಕೊಂಡು ಸರಿಯಾದ ಮಾರ್ಗದಲ್ಲಿರುವ ಆಡಳಿತವನ್ನು ಸ್ಥಾಪಿಸಬೇಕಾದೀತು." (ಹಕೀಕತೆ ಜಿಹಾದ್).

### ನೆರೆದೇಶಗಳನ್ನು ಆಕ್ರಮಿಸಬೇಕು

'ಹಕೀಕತೆ ಜಿಹಾದ್' ಎಂಬ ಅದೇ ಗ್ರಂಥದಲ್ಲಿ ಲೋಕವ್ಯಾಪಕ ಕ್ರಾಂತಿ ಎಂಬ ತಲೆಬರಹದಲ್ಲಿ ಮೌದೂದಿ ಸಾಹೇಬ್ ಹೀಗೆ ಬರೆದಿರುತ್ತಾರೆ:

"ಒಂದು ಕಡೆಯಲ್ಲಿ ತಮ್ಮ ಆದರ್ಶ ಮತ್ತು ಅವಲೋಕನವನ್ನು ಲೋಕದಲ್ಲಿ ಪ್ರಚುರಪಡಿಸಿ ಈ ಪಂಥವನ್ನು ಸ್ವೀಕರಿಸಲಿಕ್ಕಾಗಿ ಎಲ್ಲಾ ದೇಶಗಳ ಜನರನ್ನೂ ಆಹ್ವಾನಿಸುವಾಗ, ಇನ್ನೊಂದು ಕಡೆಯಲ್ಲಿ ಅವರು ಶಕ್ತಿಯಿದ್ದರೆ ಯುದ್ಧ ಮಾಡಿ ಅಮುಸ್ಲಿಂ ಆಡಳಿತಗಳನ್ನು ನಾಶಗೊಳಿಸಿ ಅದರ ಸ್ಥಾನದಲ್ಲಿ ಇಸ್ಲಾಮಿಕ ಆಡಳಿತವನ್ನು ಸ್ಥಾಪಿಸಬೇಕು."

### ಸಾಯುಧ ಕ್ರಾಂತಿ ಅನಿವಾರ್ಯ

ಮೌದೂದಿ ಸಾಹೇಬರ ಬಲಗೈ ಬಂಟ ಮೌಲಾನ ಅಮೀನ್ ಅಹ್ಸನ್ ಸಾಹೇಬ್ ಇಸ್ಲಾಹಿ* ಹೀಗೆ ಬರೆದಿದ್ದಾರೆ:

"ಯಾವುದೇ ಸರಕಾರ ವ್ಯಾಖ್ಯಾನ ಅಸಾಧ್ಯವಾದ ರೀತಿಯಲ್ಲಿ ಇಸ್ಲಾಮಿಕ ನಿಯಮಕ್ಕೆದುರಾಗಿ ವರ್ತಿಸುವಾಗ, ಸಾಲೀಹ್‌ಗಳಾದ ಪ್ರಜೆಗಳು ಸಂಘಟಿತರಾಗಿ ಅವರಿಗೆ ಶಕ್ತಿಯಿದ್ದರೆ, ಜನರಲ್ಲಿ ಬಹುಸಂಖ್ಯಾತರು ಅವರೊಂದಿಗೆ ಸೇರುವುದಾದರೆ ಅಥವಾ ಪ್ರಾಯೋಗಿಕ ಕಾರ್ಯಕ್ರಮ ಆರಂಭಿಸಿದಲ್ಲಿ ಬಹುಸಂಖ್ಯಾತರು ಅವರೊಂದಿಗೆ ಸೇರುವರೆಂಬ ಭರವಸೆಯಿದ್ದರೆ ತಮ್ಮ ಶಕ್ತಿಯನ್ನು ಸಂಘಟಿಸಿ ದೇಶದಲ್ಲಿ ಸಾಯುಧ ವಿಪ್ಲವ ನಡೆಸಿ ಅಧಿಕಾರವನ್ನು ಕಸಿದುಕೊಳ್ಳಲು ಸಾಲಿಹ್‌ಗಳ ಜಮಾಅತಿಗೆ ಹಕ್ಕುಂಟು ಎಂಬುದಷ್ಟೇ ಅಲ್ಲ, ಹಾಗೆ ಮಾಡಬೇಕಾದುದು ಅವರ ಧಾರ್ಮಿಕ ಕರ್ತವ್ಯ ಸಹ ಆಗಿದೆ." (ಇಸ್ಲಾಮೀ ರಿಯಾಸತ್, ಪುಟ 42).

ಮೌದೂದಿ ಸಾಹೇಬ್ ಮತ್ತು ಅವರ ಅನುಚರರ ಅಭಿಪ್ರಾಯ ಪ್ರಕಾರ ಶಕ್ತಿ ಸಂಘಟಿಸಿ ಸಾಯುಧ ಕ್ರಾಂತಿ ನಡೆಸಿ ಅಧಿಕಾರ ಕಸಿದುಕೊಳ್ಳಬೇಕಾದುದು ಅವರ ಕರ್ತವ್ಯವೆಂದು ಮೇಲಿನ ಉದ್ಧಾರಣೆಗಳಿಂದ ಚೆನ್ನಾಗಿ ಸ್ಪಷ್ಟವಾಗುತ್ತದೆ.

ಪಾಕಿಸ್ತಾನದ ಗಲಭೆ ಕಾಲದಲ್ಲಿ (1952) ಗವರ್ನಮೆಂಟ್ ಹೌಸಿನಲ್ಲಿ ಮೌದೂದಿ ಸಾಹೇಬ್ ಕೈಗೊಂಡ ನೆಲೆಯ ಕುರಿತು ವಿಚಾರಣೆ ಕೋರ್ಟಿನ ನ್ಯಾಯಾಧೀಶ ಹೊರಡಿಸಿದ ಅಭಿಪ್ರಾಯವನ್ನು ಇಲ್ಲಿ ಉದ್ಧರಿಸುವುದು ಅನುಚಿತವಾಗದೆಂದು ಭಾವಿಸುತ್ತೇನೆ. ನ್ಯಾಯಾಧೀಶರು ಹೀಗೆ ಹೇಳುತ್ತಾರೆ:

"ಆಡಳಿತೆ ಸಂಪೂರ್ಣವಾಗಿ ಕುಸಿಯಬೇಕೆಂದು ಅವರು ಇಚ್ಛಿಸಿದ್ದರೆಂದು ಅವರ ಸಂಬಂಧಿಸಿದ ಸಾಕ್ಷ್ಯಗಳಿಂದ ನಾವು ಅನುಮಾನ ಪಡುತ್ತೇವೆ. ಸರಕಾರದ ವಿಷಮ ಸ್ಥಿತಿಗಳಲ್ಲೂ ಸಂಕಷ್ಟ ಕಾಲದಲ್ಲೂ ಅವರು ಆನಂದಿಸುತ್ತಿದ್ದರು. ಜಮಾಅತೆ ಇಸ್ಲಾಮಿಯ ಲಕ್ಷ್ಯ ಅಧಿಕಾರ ಕಸಿದುಕೊಳ್ಳುವಿಕೆ ಎಂಬ ವಿಚಾರವನ್ನು ಮುಂದಿಟ್ಟು ನೋಡುವುದಾದರೆ–ಅವರ ಅಭಿಪ್ರಾಯ ಪ್ರಕಾರ ಅಲ್ಲಾಹನ ಅಧಿಕಾರದ ಕೆಳಗೆ ಧಾರ್ಮಿಕ ಆಡಳಿತೆ ಸ್ಥಾಪಿಸಲು ಅತ್ಯಂತ ಯುಕ್ತ ಮಾರ್ಗ ಇದು – ನಡೆದ ಘಟನೆಗಳಿಗೆಲ್ಲಾ ಜಮಾಅತೆ ಇಸ್ಲಾಮಿಯ ಸಹಾಯ ಸಹಕಾರ ಇತ್ತೆಂಬುದು ದಿಟವೆಂದು ಮನಗಾಣಬಹುದು." (Report of the Court of Inquiry, Page 271).

### ಕ್ರಾಂತಿಕಾರಿ ಪಂಥ

ಇತರ ಮುಸ್ಲಿಂ ಜಮಾಅತುಗಳಲ್ಲಿ ಯಾವುದಕ್ಕೂ ಬಾಹ್ಯವಾದ ನಾಯಕತ್ವ ಗಳಿಸುವುದರಲ್ಲಾಗಲಿ ಬಲ ಪ್ರಯೋಗಿಸಿ ಅಧಿಕಾರ ಕಸಿದುಕೊಳ್ಳುವುದರಲ್ಲಾಗಲಿ ನಂಬಿಕೆ ಇಲ್ಲ. ಅದಕ್ಕೆ ಬೇಕಾಗಿ ಶ್ರಮಿಸುವುದೂ ಇಲ್ಲ.

* ಇವರು ನಂತರ ಮೌದೂದಿ ಸಾಹೇಬರನ್ನು ಕಟುವಾಗಿ ಟೀಕಿಸಿ ಪಾರ್ಟಿ ತ್ಯಜಿಸಿದರು. —ಸಂ.

# ಇಮಾಂ ಮಹ್‌ದಿಯ ಕುರುಹುಗಳು

—ಮೌಲವಿ ಮುಹಮ್ಮದ್ ಉಮರ್ H. A.

1400 ವರ್ಷಗಳ ಮೊದಲು ಹಝ್ರತ್ ಮುಹಮ್ಮದ್ ಪೈಗಂಬರ್ (ಸ. ಅ.) ರವರು ಕೊನೆಗಾಲದಲ್ಲಿ ಅವತರಿಸುವ ಇಮಾಂ ಮಹ್‌ದಿಯ ಕುರಿತು ವ್ಯಕ್ತವಾಗಿ ವಿವರಿಸಿರುವರು. ವಾಗ್ದಾನ ಮಾಡಲ್ಪಟ್ಟ ಆ ಮಹಾ ಸುಧಾರಕ ಅವತರಿಸುವಾಗ ಆಕಾಶ ಭೂಮಿಗಳಲ್ಲಿ ಉಂಟಾಗುವ ಮಹತ್ತಾದ ಕುರುಹುಗಳ ಕುರಿತೂ ಅಂದು ಲೋಕದ ರಾಜಕೀಯ, ಸಾಂಸ್ಕೃತಿಕ ಸಾಮುದಾಯಿಕ ರಂಗಗಳಲ್ಲಿ ಉಂಟಾಗುವ ಘಟನೆಗಳ ಕುರಿತೂ ಪೈಗಂಬರರು ಭವಿಷ್ಯ ನುಡಿದಿರುವರು.

ಆಧುನಿಕ ಕಾಲದಲ್ಲಿ ಆಧ್ಯಾತ್ಮಿಕ ಕ್ರಾಂತಿಯ ಇತಿಹಾಸವನ್ನು ವಿರಚಿಸಿ ವಾಗ್ದತ್ತ ಮಸೀಹಾಗಿ ಅವತೀರ್ಣರಾದ ಹಝ್ರತ್ ಅಹ್ಮದರಲ್ಲಿ ಈ ಎಲ್ಲಾ ಕುರುಹುಗಳೂ ಭವಿಷ್ಯ ನುಡಿಗಳೂ ನೆರವೇರಿವೆ. ಪೈಗಂಬರ್ (ಸ. ಅ.)ರವರ ಸತ್ಯಸಾಕ್ಷ್ಯದ ಮನೋಜ್ಞ ದೃಷ್ಟಾಂತ ಸಹ ಆಗಿರುವ ಈ ಭವಿಷ್ಯೋಕ್ತಿಗಳೂ ಕುರುಹುಗಳೂ ಹಝ್ರತ್ ಅಹ್ಮದ್ (ಅ) ರವರಲ್ಲಿ ನೆರವೇರಿದ್ದು ಹೇಗೆಂದು ಪರಿಶೋಧಿಸೋಣ.

### 1. ಹೆಸರು

ಮಹ್‌ದಿಯ ಹೆಸರು ಅಹ್ಮದ್, ಅಬ್ದುಲ್ಲಾ, ಮಹ್‌ದಿ ಎಂದಾಗಿರುವುದೆಂದು ಪೈಗಂಬರ್ (ಸ.) ನುಡಿದದ್ದು ನಾನು ಕೇಳಿರುವೆನೆಂದು ಹುದೈಫ ವರದಿ ಮಾಡಿದ್ದಾರೆ. (ಬಿಹಾರುಲ್ ಅನ್ವಾರ್, ಸಂಪುಟ 13, ಪುಟ 174).

---

## “ಜಮಾಅತೆ ಇಸ್ಲಾಮಿ”ಯ ಲಕ್ಷ್ಯ – ಅಧಿಕಾರ ಕಸಿಯುವಿಕೆ

(12ನೇ ಪುಟದಿಂದ)

ಅವರಿಗೆ ವಿಪ್ಲವಕಾರಿ ಉದ್ದೇಶವೇನೂ ಇಲ್ಲ. ಮೌದೂದಿ ಸಾಹೇಬರ ಸಿದ್ಧಾಂತ ಪ್ರಕಾರ ಇಸ್ಲಾಮಿನ ಯಥಾರ್ಥ ಉದ್ದೇಶವೇ ಅದು. ಒಟ್ಟಾರೆ ಇತರ ಎಲ್ಲಾ ಮುಸ್ಲಿಂ ಜಮಾಅತುಗಳನ್ನು ಅಯೋಗ್ಯವೆಂದು ತಳ್ಳಿಕೊಂಡು ಅವರು ಪ್ರತ್ಯೇಕವಾದೊಂದು ಜಮಾಅತನ್ನು ಸ್ಥಾಪಿಸಿದರು. ಅವರು ಹೇಳುವುದನ್ನು ನೋಡಿರಿ:

“ಈ ಕಾಲದಲ್ಲಿ ಭಾರತದಲ್ಲಿ ಮುಸ್ಲಿಮರ ಹಲವು ಜಮಾಅತುಗಳು ಇಸ್ಲಾಮಿನ ಹೆಸರಿನಲ್ಲಿ ಕಾರ್ಯವೆಸಗುತ್ತಿವೆ. ಆದರೆ ಇಸ್ಲಾಮಿನ ಒರೆಗಲ್ಲಿನ ಮೇಲೆ ಅವರ ಲಕ್ಷ್ಯಗಳನ್ನು ವೀಕ್ಷಣಗಳನ್ನೂ ಪ್ರವೃತ್ತಿಗಳನ್ನೂ ಒರೆಸಿ ನೋಡಿದರೆ ಎಲ್ಲರೂ ಅನರ್ಹರೆಂದು ಸಾಬೀತಾಗುತ್ತದೆ. ಪಾಶ್ಚಾತ್ಯ ವಿದ್ಯಾಭ್ಯಾಸ ಮತ್ತು ತರಬೇತಿ ಸಿದ್ಧಿಸಿದ ರಾಜಕೀಯ ನೇತಾರರಾದರೂ ಸರಿ, ಮತಪಂಡಿತರೂ ನಿಯಮದ ಮುಫ್ತಿಗಳಾದರೂ ಸರಿ, ಇಬ್ಬಗೆಯ ಮುಖಂಡರೂ ಅವರ ವೀಕ್ಷಣ ಮತ್ತು ಧೋರಣೆ ಪ್ರಕಾರ ಒಂದೇ ರೀತಿಯಲ್ಲಿ ದಾರಿ ತಪ್ಪಿದವರು. ಉಭಯ ಪಕ್ಷದವರೂ ಸತ್ಯದಿಂದ ವಿಚಲಿತರಾಗಿ ಕತ್ತಲೆಯಲ್ಲಿ ತಪ್ಪಿ ನಡೆಯುವವರಾಗಿದ್ದಾರೆ... ಅವರ ಯಾವ ವೀಕ್ಷಣವೂ ಮುಸಲ್ಮಾನನ ವೀಕ್ಷಣವಲ್ಲ. ‘ಅಲ್ಲಾಹನ ದೃಷ್ಟಾಂತಗಳನ್ನೂ ದರ್ಶನಗಳನ್ನೂ ನಿಷೇಧಿಸಿದವರಾಗಿದ್ದಾರೆ ಅವರು. ಅವರ ಕರ್ಮಗಳು ನಿಷ್ಫಲ. ಅಂತ್ಯ ದಿನದಂದು ನಾವು ಅವರಿಗೆ ಯಾವ ಬೆಲೆಯನ್ನೂ ನೀಡಲಾರೆವು’.” (ಮುಸಲ್ಮಾನ್ ಔರ್ ಸಿಯಾಸಿ ಕಶ್ಮಕಶ್, ಸಂಪುಟ 3, ಪುಟ 95-96).

ಇತರ ಮುಸ್ಲಿಂ ಜಮಾಅತುಗಳು ತಾವು ವಾಸಿಸುವ ರಾಷ್ಟ್ರಗಳ ಸರಕಾರಗಳನ್ನು ನಾಶಪಡಿಸಿ ದೈವಿಕ ಆಡಳಿತೆ ಸ್ಥಾಪಿಸಲಿಕ್ಕಾಗಿ ಯಾವ ಪ್ರಯತ್ನವನ್ನೂ ಮಾಡದಿರುವುದರಿಂದ ಅಯೋಗ್ಯವೆಂದು ಮೌದೂದಿ ಸಾಹೇಬ್ ನಂಬುತ್ತಾರೆ. ಒಟ್ಟಾರೆ ಮೌದೂದಿ ಸಾಹೇಬರ ದೃಷ್ಟಿಯಲ್ಲಿ ಅವರೆಲ್ಲಾ ದಪ್ಪ ಅಕ್ಷರಗಳಲ್ಲಿ ಬರೆದ ಖುರ್‌ಆನ್ ವಾಕ್ಯದಲ್ಲಿ ಹೇಳಿದ ಪಂಗಡದವರು! ಮೌದೂದಿ ಸಾಹೇಬ್ ಮತ್ತು ಅನುಯಾಯಿಗಳ ಯಥಾರ್ಥ ಉದ್ದೇಶ ಧಾರ್ಮಿಕ ಅಥವಾ ಆಧ್ಯಾತ್ಮಿಕ ಪರಿವರ್ತನೆಯಲ್ಲವೆಂದೂ ರಾಷ್ಟ್ರಾಧಿಕಾರವನ್ನು ಕಸಿದುಕೊಳ್ಳುವುದಾಗಿದೆಯೆಂದೂ ಈ ವಾದಗಳ ಬೆಳಕಿನಲ್ಲಿ ಖಂಡಿತವಾಗಿ ಹೇಳಲು ಸಾಧ್ಯವಿದೆ. (‘ಚಂದ್ರಿಕ’: 20-8-’55). ●

### 2. ಕುಟುಂಬ

ಸತ್ಯ ವಿಶ್ವಾಸ ಸುರಯ್ಯಾ (ಕಾರ್ತಿಕ) ನಕ್ಷತ್ರದ ವರೆಗೆ ಮೇಲಕ್ಕೆತ್ತಲ್ಪಡುವ ಕಾಲ ಬಂದೊದಗಿದಾಗ ಫಾರ್ಸಿ ವಂಶದ ಕೆಲವರು ಅಥವಾ ಓರ್ವ ಅದನ್ನು ಭೂಮಿಗೆ ತಿರುಗಿ ತರುವರು. (ಬುಖಾರಿ, ಸಂಪುಟ 3, ಪುಟ 131).

### 3. ರಾಜ್ಯ

ಅಹ್ಮದ್ ಎಂಬ ಹೆಸರಿನ ಮಹ್‌ದಿಯ ಸಂಗಡ ಒಂದು ಜಮಾಅತು ಇಂಡಿಯಾದಲ್ಲಿ ಜಿಹಾದ್ (ಮತ ಪ್ರಚಾರ) ನಡೆಸುವುದು. (ಅನ್ನಜ್ಮುಸ್ಸಾಖಿಬ್, ಸಂಪುಟ 2, ಪುಟ 41-42).

### 4. ದೇಶ

'ಕದಿಅ' ಎಂಬ ಹೆಸರಿನಿಂದ ಕರೆಯಲ್ಪಡುವ ಸ್ಥಳದಲ್ಲಿ ಇಮಾಂ ಮಹ್‌ದಿ ಪ್ರತ್ಯಕ್ಷಗೊಳ್ಳುವರು. (ಜವಾಹಿರುಲ್ ಅಸ್ರಾರ್, ಬಿಹಾರುಲ್ ಅನ್ವಾರ್, ಸಂಪುಟ 13, ಪುಟ 19).

### 5. ಕಾಲ

ಸಾವಿರದ ಇನ್ನೂರ ನಲ್ವತ್ತು (ಹಿಜ್‌ರಿ) ವರ್ಷಗಳ ನಂತರ ಅಲ್ಲಾಹು ಇಮಾಂ ಮಹ್‌ದಿಯನ್ನು ನಿಯೋಗಿಸುವನು. (ಅನ್ನಜ್ಮುಸ್ಸಾಖಿಬ್, ಸಂಪುಟ 2, ಪುಟ 209).

### 6. ಜಮಾಅತಿನ ಹೆಸರು

ಅಂತ್ಯಕಾಲದಲ್ಲಿ ತನ್ನ ಸಮುದಾಯ 73 ಪಂಗಡಗಳಾಗಿ ವಿಂಗಡಿಸಲ್ಪಡುವುದೆಂದೂ ಅವುಗಳ ಪೈಕಿ 72 ಪಂಗಡಗಳು ನರಕವಾಸಿಗಳಾಗುವುವೆಂದೂ ಒಂದು ಪಂಗಡ ಮಾತ್ರ ಮೋಕ್ಷಾರ್ಹವಾಗುವುದೆಂದೂ ಆ ಜಮಾಅತು ಓರ್ವ ಆಧ್ಯಾತ್ಮಿಕ ನೇತಾರನ (ಇಮಾಂ ಮಹ್‌ದಿಯ) ಕೈಕೆಳಗೆ ತನ್ನ ಮತ್ತು ತನ್ನ ಸಹಚರರ ಪ್ರವರ್ತನ ಪಥದಲ್ಲಿ ಚಲಿಸುವುದೆಂದೂ ಪೈಗಂಬರ್ (ಸ.ಅ.) ಪ್ರಸ್ತಾಪಿಸಿದ್ದಾರೆ. ಮಿಶ್ಕಾತಿನ ವ್ಯಾಖ್ಯಾನವಾದ ಮಿರ್ಖಾತ್‌ನಲ್ಲಿ ಆ ಜಮಾಅತಿನ ಹೆಸರು "ಅಹ್ಮದಿಯಾ ಜಮಾಅತ್" ಎಂಬುದಾಗಿರುವುದೆಂದು ಪ್ರಸ್ತಾಪಿಸಲಾಗಿದೆ. ಅದು ಹೀಗಿದೆ:

ಎಪ್ಪತ್ತ ಎರಡು ಪಂಗಡಗಳು ನರಕದಲ್ಲಿ ಬೀಳುವರು. ಮೋಕ್ಷಾರ್ಹವಾದ ಜಮಾಅತು ಮುಹಮ್ಮದೀ ಶರೀಅತಿನಲ್ಲಿ ಚಲಿಸುವ ಪವಿತ್ರ ಅಹ್ಮದಿಯಾ ತರೀಖತಿನಲ್ಲಿ (ಜಮಾಅತಿನಲ್ಲಿ) ಸೇರಿದವರಾಗಿದ್ದೀತು. (ಮಿರ್ಖಾತ್—ಶರಹ್ ಮಿಶ್ಕಾತ್, ಸಂಪುಟ 1, ಪುಟ 204).

### 7. ಕಾಲ ಸೂಚನೆ

"ವ ಇದಲ್ ಇಷಾರು ಉತ್ತಿಲತ್" (ಖುರ್‌ಆನ್ 81:5). ಮರುಭೂಮಿಯ ಹಡಗು ಎಂಬ "ಒಂಟೆ ತ್ಯಜಿಸಲ್ಪಡುವುದು." ಎಂದರೆ, ನೆಲ, ಜಲ ಆಕಾಶಗಳಲ್ಲಿ ತ್ವರಿತವಾಗಿ ಸಂಚರಿಸುವ ವಾಹನಗಳು ಬಳಸಲ್ಪಡುವ ಕಾರಣದಿಂದಾಗಿ ಒಂಟೆ ಸವಾರಿ ಉಪೇಕ್ಷಿಸಲ್ಪಡುವುದು.

### 8. ನಾಗರಿಕತೆ

"ವ ಇದಲ್ ವುಹೂಶು ಹುಶ್ಶಿರತ್" (ಖುರ್‌ಆನ್ 81:6). "ವನ್ಯ ಮೃಗ ಜಂತುಗಳು ಒಂದುಗೂಡಿಸಲ್ಪಡುವುವು." ಪ್ರಾಣಿ ಸಂಗ್ರಹಾಲಯ ಮತ್ತು ವಸ್ತು ಸಂಗ್ರಹಾಲಯಗಳ ಮೂಲಕ ಪ್ರಪಂಚದ ವಿವಿಧ ಕಡೆಗಳಲ್ಲಿ ಕಂಡು ಬರುವ ಪಕ್ಷಿ ಮೃಗಾದಿಗಳು ಒಂದುಗೂಡಿಸಲ್ಪಡುವುವು. ಹಿಂದುಳಿದ ಸ್ಥಿತಿಯಲ್ಲಿ ಕಾಲ ಕಳೆಯುತ್ತಿದ್ದ ಜನ ವರ್ಗಗಳು ಆಧುನಿಕ ನಾಗರಿಕತೆಯ ಕಾರಣದಿಂದ ಲೋಕದಲ್ಲಿ ಪ್ರಬಲ ಶಕ್ತಿಯಾಗಿ ಬೆಳೆಯುವುವು.

### 9. ಭೂಸ್ಥಿತಿ

"ವ ಇದಲ್ ಬಿಹಾರು ಸುಜ್ಜಿರತ್" (ಖುರ್‌ಆನ್ 81:7). ಕಾಲುವೆಗಳನ್ನು ನಿರ್ಮಿಸಿ "ನದಿಗಳೂ ಸಮುದ್ರಗಳೂ ಪರಸ್ಪರ ಸಂಯೋಜಿಸಲ್ಪಡುವುವು." ಅಣೆಕಟ್ಟುಗಳನ್ನು ರಚಿಸಿ ನೀರಾವರಿ ಯೋಜನೆ ಏರ್ಪಡಿಸಲಾಗುವುದು.

### 10. ಸಾರಿಗೆ ಸಂಚಾರ ಪ್ರಗತಿ

"ವ ಇದನ್ನುಫೂಸು ಸುವ್ವಿಜತ್" (ಖುರ್‌ಆನ್ 81:8). ಸಾರಿಗೆ ಸಂಚಾರ ಸೌಕರ್ಯವಲ್ಲದೆ ರೇಡಿಯೋ, ಟೆಲಿವಿಷನ್ ಮೊದಲಾದ ವ್ಯವಸ್ಥೆಗಳ ಮೂಲಕ "ವಿಭಿನ್ನ ಜನತೆಗಳೆಡೆಯಲ್ಲಿ ಅನ್ಯೋನ್ಯ ಸಂಪರ್ಕವುಂಟಾಗುವುದು." ವಿವಿಧ ಪಾರ್ಟಿಗಳೂ ಸಹಕಾರ ಸಂಘಗಳೂ ಹುಟ್ಟಿಕೊಳ್ಳುವುವು.

### 11. ಸಾಹಿತ್ಯ ಪ್ರಕಾಶನ

"ವ ಇದಸ್ಸುಹುಫು ನುಷಿರತ್" (ಖುರ್‌ಆನ್ 81:೧೦). "ಗ್ರಂಥಗಳೂ ಪತ್ರಿಕೆಗಳೂ ಅತ್ಯಧಿಕ ಪ್ರಕಾಶಿತಗೊಳ್ಳುವುವು." ಆಧುನಿಕ ಮುದ್ರಣ ಯಂತ್ರಗಳ ಸಹಾಯದಿಂದ ಪತ್ರಿಕೆಗಳ ಪ್ರಕಟನೆ ವಿಫುಲವಾಗಿ ನಡೆಯುತ್ತವೆ. ವಾಚನಾಲಯ ಮತ್ತು ಗ್ರಂಥಾಲಯಗಳ ಹೆಚ್ಚಳ ಸಹ ಇಲ್ಲಿ ಸೂಚಿತ.

### 12. ಧಾರ್ಮಿಕ ಸ್ಥಿತಿ

ಇಮಾಂ ಮಹ್‌ದಿಯ ಆಗಮನ ಕಾಲದ ಧಾರ್ಮಿಕ ಪರಿಸ್ಥಿತಿಗಳ ಕುರಿತು ಪೈಗಂಬರ್ (ಸ.) ವಿಶದವಾಗಿ ಭವಿಷ್ಯ ನುಡಿದಿರುವರು:

(i) ಆ ಕಾಲದಲ್ಲಿ ಕ್ರೈಸ್ತ ಧರ್ಮಕ್ಕೆ ವಿಫುಲ ಅಭಿವೃದ್ಧಿ ಸಿದ್ಧಿಸುವುದು. (ಮುಸ್ಲಿಂ, ಸಂಪುಟ 2, ಕಿತಾಬುಲ್ ಫಿತನ್).

ಕ್ರೈಸ್ತ ಧರ್ಮದ ಎದುರಲ್ಲಿ ಇಸ್ಲಾಂ ಧರ್ಮದ ಶೋಚನೀಯ ಸ್ಥಿತಿಯ ಕುರಿತು ಹೀಗೆ ಹೇಳಲಾಗಿದೆ:

(ii) ಆ ಕಾಲದಲ್ಲಿ ಇಸ್ಲಾಂ ಆರಂಭದಶೆಯಲ್ಲಿದ್ದಂತೆ ಬಲಹೀನವಾದ ಒಂದು ಸ್ಥಿತಿಯಲ್ಲಿರುವುದು. (ಇಬ್ನು ಮಾಜ).

### 13 ಸಾಮುದಾಯಿಕ ಸ್ಥಿತಿ

(i) ಮುಸ್ಲಿಮರು ದಜ್ಜಾಲಿನ (ಕ್ರೈಸ್ತರ) ಅನುಯಾಯಿಗಳಾಗುವರು. (ತಿರ್ಮಿದಿ, ಅಬ್ವಾಬುಲ್ ಫಿತನ್).

(ii) ಇಸ್ಲಾಮಿನ ನಾಮ ಮತ್ತು ಖುರ್‌ಆನಿನ ಲಿಪಿ ಮಾತ್ರವೇ ಬಾಕಿಯಾದೀತು. ಮಸೀದಿಗಳು ಜನಬಾಹುಳ್ಯದಿಂದ ಇದ್ದರೂ ಭಕ್ತಿಶೂನ್ಯವಾಗಿದ್ದೀತು. ಅವರ ಮತಪಂಡಿತರು ಆಕಾಶದ ಕೆಳಗೆ ನಿಕೃಷ್ಟಜೀವಿಗಳಾಗುವರು. (ಮಿಶ್ಕಾತ್).

(iii) ಮುಸ್ಲಿಮರು ಪ್ರಾರ್ಥನೆ ತ್ಯಜಿಸುವರು, ಝಕಾತನ್ನು ದಂಡವೆಂಬಂತೆ ಗಣಿಸುವರು. (ಇಬ್ನು ಅಬಾಸಿಯುವರ ವರದಿ, ಪುಟ 298, 927 ಹುಜ್ಜುಲ್ ಕರಾಮ).

(iv) ಹಝ್ರತ್ ಅಲಿ (ರ) ಈ ರೀತಿ ವರದಿ ಮಾಡುತ್ತಾರೆ: ಅರಬಿಗಳು (ಇಸ್ಲಾಂ) ಮತದಿಂದ ಬಹಳ ದೂರವಾಗುವರು.

(v) ಮುಸ್ಲಿಮರು ಯಹೂದರನ್ನೂ ಕ್ರೈಸ್ತರನ್ನೂ ಸಂಪೂರ್ಣವಾಗಿ ಅನುಕರಿಸುವರು. (ಮಿಶ್ಕಾತ್).

### 14. ಸದಾಚಾರ ಸ್ಥಿತಿ

(i) ಆ ಕಾಲದಲ್ಲಿ ಅಶ್ಲೀಲ ಸಾಹಿತ್ಯಗಳೂ ವ್ಯಭಿಚಾರವೂ ವೃದ್ಧಿಗೊಂಡು ವ್ಯಭಿಚಾರ ಸಂತತಿಗಳು ಹೆಚ್ಚುವುವು. (ಇಬ್ನು ಅಬೀಶೀಬ ಅವರ ವರದಿ–ಹುಜ್ಜುಲ್ ಕರಾಮ).

(ii) ಆ ಕಾಲದಲ್ಲಿ ಮದ್ಯವು ಬಹಳ ಹೆಚ್ಚಾಗಿ ಉಪಯೋಗಿಸಲ್ಪಡುವುದೆಂದು ಅನಸಿಬ್ನು ಮಾಲಿಕ್ ಅವರು ವರದಿ ಮಾಡಿದ್ದಾರೆ. (ಮುಸ್ಲಿಂ).

(iii) ಜೂಜಾಟ ವಿಫುಲವಾಗಿ ನಡೆಯುವುದು. (ದೈಲಮಿ).

(iv) ಅಮಾನತ್ (ವಿಶ್ವಸ್ತತೆ) ನಾಸ್ತಿಯಾಗುವುದು. (ದೈಲಮಿ, ಹುಜ್ಜುಲ್ ಕರಾಮ).

(v) ಪುತ್ರನು ಮಾತಾಪಿತರನ್ನು ಅನುಸರಿಸದೆ ಅವರನ್ನು ಅಪಮಾನಿಸುವನು; ಅವರಿಗೆ ಕಷ್ಟ ಕೊಡುವನು. (ಹುದೈಫಾ ಬಿನ್ ಯಮಾನ್ ವರದಿಮಾಡಿದ್ದು).

(vi) ಸಂಪತ್ತು ಮತ್ತು ಪ್ರೌಢಿಮೆಯನ್ನು ಗಣಿಸಿ ಜನರು ಹೊಗಳಲ್ಪಡುವರು. ಜನರು ಧೈರ್ಯವಂತರು, ಬುದ್ಧಿವಂತರು, ಪ್ರತಾಪಶಾಲಿಗಳು ಎಂಬಿತ್ಯಾದಿಯಾಗಿ ಸ್ತುತಿಸಲ್ಪಡುವರು. ಆದರೆ ಅವರ ಹೃದಯದಲ್ಲಿ ತುಸುಮಾತ್ರವಾದರೂ ವಿಶ್ವಾಸ ಇರಲಿಕ್ಕಿಲ್ಲ. (ತಿರ್ಮಿದಿ),

### 15. ವೇಷಭೂಷಣಗಳು

(i) ಆ ಕಾಲದಲ್ಲಿ ಸ್ತ್ರೀಯರು ವಸ್ತ್ರ ಧರಿಸಿದರೂ ನಗ್ನರಾಗಿ ಕಾಣುವರು. (ಮುಸನ್ನದ್ ಅಹ್ಮದ್)

(ii) ಆ ಕಾಲದಲ್ಲಿ ಸ್ತ್ರೀಯರು ಒಂಟೆಯ ಡುಬ್ಬದಂತೆ ತಮ್ಮ ತಲೆಗೂದಲನ್ನು ಅಲಂಕರಿಸುವರು. (ಮುಸ್ನದ್).

(iii) ಸ್ತ್ರೀಯರು ತಮ್ಮ ಪತಿಯರೊಂದಿಗೆ ಸೇರಿ ವ್ಯಾಪಾರ ನಡೆಸುವರು. (ಹುಜ್ಜುಲ್ ಕರಾಮ).

(iv) ಸ್ತ್ರೀಯರು ಪುರುಷ ವೇಷ ಧರಿಸಿ ಸ್ವತಂತ್ರರಾಗಿ ತಿರುಗಾಡುವರು. (ಇಬ್ನು ಅಬ್ಬಾಸ್).

(v) ಪುರುಷರು ಸ್ತ್ರೀಯರಂತೆ ವಸ್ತ್ರ ಧರಿಸಿ ನಡೆಯುವರು. (ಹುದೈಫತುಬ್ನು ಯಮಾನ್).

(vi) ಆ ಕಾಲದಲ್ಲಿ ಆಕಸ್ಮಾತ್ ಮರಣಗಳು (ಹೃದಯಸ್ತಂಭನ ಇತ್ಯಾದಿ) ಹೆಚ್ಚುವುವು. (ಇಬ್ನು ಅಬೀಶೀಬ-ಹುಜ್ಜುಲ್ ಕರಾಮ).

16. ಆಡಳಿತ ರಂಗ

(i) ಬಡ್ಡಿ ವ್ಯವಹಾರ ಅತ್ಯಧಿಕ ವೃದ್ಧಿಗೊಳ್ಳು ವುದು. [ಬ್ಯಾಂಕಿಂಗ್, ಇನ್ಶ್ಯೂರೆನ್ಸ್ ಇತ್ಯಾದಿ] (ದೈಲಮಿ).

(ii) ದರಿದ್ರರೂ ಇಲ್ಲದವರೂ ರಾಜರಾಗು ವರು.

(iii) ಶ್ರಮಜೀವಿಗಳ ಸಂಘಟನೆ ಬಹಳ ಶಕ್ತಿ ಪಡೆಯುವುದು.

(iv) ಆಡಳಿತಾಧಿಕಾರಿಗಳು ಹೆಚ್ಚುವರು. [ಜನ ಪ್ರತಿನಿಧಿಗಳು ಆಡಳಿತಗಾರರಾಗುವರು] (ಹುದೈಫ).

17. ದಜ್ಜಾಲ್

ದಜ್ಜಾಲ್‌ನ ಹೊರಡುವಿಕೆ.

"ದಜ್ಜಾಲಿನ ಬಲಗಣ್ಣು (ಆಧ್ಯಾತ್ಮಿಕ ದೃಷ್ಟಿ) ಕುರುಡಾಗಿರುವುದು. ನಿಮ್ಮಲ್ಲಿ ಯಾರಾದರೂ ಅವ ನನ್ನು ಕಂಡರೆ ಸೂರಾ ಕಹ್‌ಫಿನ ಪ್ರಾರಂಭ ವಚನ ಗಳನ್ನು (ಯೇಸುಕ್ರಿಸ್ತರ ದೈವತ್ವಕ್ಕೆ ವಿರುದ್ಧವಾದ ಪ್ರಸ್ತಾಪನೆಗಳಿಂದ ಕೂಡಿದವು) ಓದಿರಿ. ದಜ್ಜಾಲ್ ಮಳೆ ಸುರಿಸಲು ಆಕಾಶದೊಡನೆ ಆಜ್ಞಾಪಿಸುವಾಗ ಆಕಾಶ ಮಳೆ ಸುರಿಸುವುದು (ಕೃತಕ ಮಳೆ). ಮೊಳೆಸ ಲಿಕ್ಕೆ ಭೂಮಿಯೊಡನೆ ಆಜ್ಞಾಪಿಸುವಾಗ ಭೂಮಿ ಮೊಳೆ ಸುವುದು. ಅವನ ಜೊತೆಯಲ್ಲಿ ರೊಟ್ಟಿಯ ಗುಡ್ಡೆ ಮತ್ತು ನೀರಿನ ಕಾಲುವೆ ಇರುವುವು." (ಮಿಶ್ಕಾತ್).

ಆಧುನಿಕ ಯುಗದಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಆಧಿಪತ್ಯ ಗಳಿಸಿರುವ ಕ್ರೈಸ್ತ ಜನತೆಯಾ ಗಿದೆ ದಜ್ಜಾಲ್ ಎಂಬುದರ ತಾತ್ಪರ್ಯ.

18. ಯಅ್‌ಜೂಜ್ ಮಅ್‌ಜೂಜ್

ಯಅ್‌ಜೂಜ್ ಮಅ್‌ಜೂಜ್ ಪ್ರತ್ಯಕ್ಷಗೊಳ್ಳು ವುವು. (ಸೂರಾ: ಅಂಬಿಯಾ, ಕಹ್‌ಫ್).

ಇವು ರಶ್ಯಾ ಮತ್ತು ಅಮೇರಿಕಾ ಎಂಬೀ ಎರಡು ಶಕ್ತಿಗಳಾಗಿವೆಯೆಂದು ವ್ಯಕ್ತಗೊಂಡಿವೆ.

19. ಕುಸಿಯುವ ಶಿಲುಬೆಗಳು

ಇಮಾಂ ಮಹ್‌ದಿಯ ಪ್ರಧಾನ ಕರ್ತವ್ಯವಾಗಿ ಮುಹಮ್ಮದ್ ಪೈಗಂಬರ್ (ಸ.) ಹೀಗೆ ನುಡಿದಿರುವರು:

ಅವರು ಬಂದು ಶಿಲುಬೆಯನ್ನು ಮುರಿಯುವರು, ಹಂದಿಯನ್ನು ಕೊಲ್ಲುವರು. (ಹಂದಿಯ ಸ್ವಭಾವವುಳ್ಳ ವರನ್ನು ಪರಿವರ್ತಿಸಲು ಪ್ರಯತ್ನಿಸುವರು)-[ಬುಖಾರಿ, ಸಂಪುಟ 2, ಪುಟ 19].

ಶಿಲುಬೆಯನ್ನು ಮುರಿಯುವರು ಎಂಬ ಪೈಗಂಬ ರರ ವಚನಕ್ಕೆ ವ್ಯಾಖ್ಯಾನ ನೀಡುತ್ತಾ ಬಿಹಾರುಲ್ ಅನ್ವಾರ್ ಎಂಬ ಗ್ರಂಥದಲ್ಲಿ ಹೀಗೆ ಹೇಳಲಾಗಿದೆ:

ಶಿಲುಬೆಯನ್ನು ಮುರಿಯಲಾಗುವುದು ಎಂಬುದರ ತಾತ್ಪರ್ಯ ಕ್ರೈಸ್ತ ವಿಶ್ವಾಸದ ಅಬದ್ಧತೆಯನ್ನು ಎತ್ತಿ ತೋರಿಸುವುದು ಹಾಗೂ ಇಸ್ಲಾಮಿಕ ನಿಯಮಾನುಸಾರ ವಿಶ್ವಾಸವಿರಿಸುವುದು ಎಂದಾಗಿದೆ. (ಬಿಹಾರುಲ್ ಅನ್ವಾರ್, ಸಂಪುಟ 13, ಪುಟ 198).

20. ಅರಬಿಯರಿಗೆ ನಾಶನಷ್ಟ

ಹಝ್‌ರತ್ ರಸೂಲ್ ಕರೀಂ (ಸ.) ಹೀಗೆ ನುಡಿ ದಿರುವರು:

ಅರಬಿಯರಿಗೆ ತುಂಬಾ ನಾಶನಷ್ಟಗಳು ಸಂಭವಿಸು ವುವು. ಯಅ್‌ಜೂಜ್ ಮಅ್‌ಜೂಜ್‌ಗಳ ಗೋಡೆಯಲ್ಲಿ ಒಂದು ರಂಧ್ರವಿದ್ದೀತೆಂದು ಹೇಳುತ್ತಾ ತನ್ನ ತೋರು ಬೆರಳು ಮತ್ತು ಹೆಬ್ಬೆರಳನ್ನು ಸೇರಿಸಿ ಒಂದು ರಂಧ್ರ ವನ್ನುಂಟು ಮಾಡಿ ತೋರಿಸಿದರು. (ಬುಖಾರಿ, ಯಅ್ ಜೂಜ್ ಮಅ್‌ಜೂಜ್ ಸಂಬಂಧಿಸಿದ ಅಧ್ಯಾಯ).

ಯಅ್‌ಜೂಜ್ ಮಅ್‌ಜೂಜ್ (ಅಮೇರಿಕನ್-ರಶ್ಯನ್ ರಾಷ್ಟ್ರಗಳು) ಮುಖಾಂತರ ಅರಬಿಯರಿಗೆ ಮಹಾ ನಾಶನಷ್ಟಗಳನ್ನು ಎದುರಿಸಬೇಕಾದೀತು.

1967ರ ಅರಬ್-ಇಸ್ರಾಯಿಲ್ ಯುದ್ಧ ಅರಬ್ ಲೋಕಕ್ಕೆ ಉಂಟುಮಾಡಿದ ನಾಶನಷ್ಟಗಳು ಈ ಭವಿ ಷ್ಯೋಕ್ತಿಯ ನೆರವೇರಿಕೆಯೆಂಬಂತೆ ಸಂಭವಿಸಿತು.

21. ಸೂರ್ಯ ಚಂದ್ರ ಗ್ರಹಣಗಳು

"ನಮ್ಮ ಮಹ್‌ದಿಗೆ ಎರಡು ಕುರುಹುಗಳಿವೆ. ಆಕಾಶ ಭೂಮಿ ಉಂಟಾದ ಮೊದಲ್ಗೊಂಡು ಈ

ರೀತಿಯ ಕುರುಹುಗಳು ಉಂಟಾಗಿಲ್ಲ*. ಎಂದರೆ ರಮಝಾನ್ ಮಾಸದಲ್ಲಿ ಚಂದ್ರ ಗ್ರಹಣಕ್ಕಾಗಿ ನಿರ್ದಿಷ್ಟವಾದ ರಾತ್ರಿಗಳಲ್ಲಿ (13,14,15) ಪ್ರಥಮ ರಾತ್ರಿ 13ನೇ ರಾತ್ರಿ) ಚಂದ್ರನಿಗೂ ಸೂರ್ಯ ಗ್ರಹಣಕ್ಕಾಗಿ ನಿರ್ದಿಷ್ಟವಾದ ದಿನಗಳಲ್ಲಿ (27, 28, 29) ಮಧ್ಯದಿನದಂದು (28ರಂದು) ಸೂರ್ಯ ಗ್ರಹಣವೂ ಉಂಟಾಗುವುದು" (ಮಿಶ್ಕಾತ್).

ಕ್ರಿಸ್ತಶಕ 1894ರಲ್ಲಿ, ಹಿಜಿರ ವರ್ಷ 1311ರಲ್ಲಿ, ರಮಝಾನ್ ಮಾಸದ 13ನೇ ರಾತ್ರಿ ಚಂದ್ರಗ್ರಹಣವೂ 28ರಂದು ಹಗಲು ಸೂರ್ಯಗ್ರಹಣವೂ ಸಂಭವಿಸಿತು.

ಹೀಗೆ, ಇಮಾಂ ಮಹ್‌ದಿಯ ಕುರಿತು ಮುಹಮ್ಮದ್ ಪೈಗಂಬರ್ (ಸ.) ಹೇಳಿದ ಕುರುಹುಗಳು ಅನೇಕ. ಕೆಲವನ್ನು ಮಾತ್ರ ಇಲ್ಲಿ ಉದ್ಧರಿಸಲಾಗಿದೆ. ಈ ಎಲ್ಲಾ ಭವಿಷ್ಯೋಕ್ತಿಗಳು ಸಹ ಪೂರ್ತಿಕರಿಸುತ್ತಾ 1250 ಶವ್ವಾಲ್ 14ರಂದು ಕದ್‌ಅ (ಖಾದಿಯಾನ್) ಎಂಬಲ್ಲಿ ಫಾರ್ಸಿ ವಂಶಜರಾಗಿ ಅಹ್ಮದ್ ಎಂಬ ಹೆಸರಿನೊಂದಿಗೆ ಆ ಮಹಾತ್ಮರು ಜನ್ಮ ತಾಳಿದರು. ಅವರ ಜಮಾಅತು ಅಹ್ಮದಿಯಾ ಜಮಾಅತ್ ಎಂಬ ಹೆಸರಿನಲ್ಲಿ ಇಂದು ವಿಶ್ವ ವಿಖ್ಯಾತವಾಗಿದೆ.

1908 ಮೇ 26ರಂದು ಆ ಮಹಾತ್ಮರು ತನ್ನ ದೌತ್ಯ ನಿರ್ವಹಿಸಿದ ನಂತರ ಇಹಲೋಕ ತ್ಯಜಿಸಿದಾಗ ಅವರ ಪ್ರಥಮ ಖಲೀಫರಾಗಿ ಅರಬಿ ವಂಶಜರಾದ ಹಝ್‌ರತ್ ಮೌಲವಿ ನೂರುದ್ದೀನ್ ಅವರು ಚುನಾಯಿಸಲ್ಪಟ್ಟರು. 1914 ಮಾರ್ಚ್ 13ರಂದು ಅವರು ಮೃತಪಟ್ಟಾಗ ಎರಡನೇ ಖಲೀಫರಾಗಿ ಹಝ್‌ರತ್ ಅಹ್ಮದ್ (ಅ.)ರವರ ಪುತ್ರ ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್ ಚುನಾಯಿತರಾದರು. 1968 ನವೆಂಬರ್ 8ರಂದು ಅವರು ದಿವಂಗತರಾದಾಗ ಇಮಾಂ ಮಹ್‌ದಿಯ ಮೊಮ್ಮಗ ಹಝ್‌ರತ್ ಮಿರ್ಝಾ ನಾಸಿರ್ ಅಹ್ಮದ್‌ರವರು ಮೂರನೆಯ ಖಲೀಫರಾಗಿ ಆರಿಸಲ್ಪಟ್ಟರು. ಅಹ್ಮದಿಯಾ ಜಮಾಅತಿನ ಈಗಿನ ಸಾರಥಿಯ ಕಾಲದಲ್ಲಿ ಇಸ್ಲಾಮಿಗೆ ಲೋಕ ವ್ಯಾಪಕ ವಿಜಯವುಂಟಾದೀತು ಎಂದು ಭವಿಷ್ಯೋಕ್ತಿ ಇದೆ.

ವಾಗ್ದತ್ತ ಮಹ್‌ದೀ ಮಸೀಹರ ವಿಯೋಗದ ನಂತರ ಉಂಟಾಗುವ ಸ್ಥಿತಿಯ ಕುರಿತು ಪೂರ್ವಿಕ ಮಹಾತ್ಮರು ಭವಿಷ್ಯ ನುಡಿದಿರುವರು. ಹಝ್‌ರತ್ ಮೂಸಾ ಪ್ರವಾದಿಯ ಹದೀಸ್ ಗ್ರಂಥ ತಾಲ್ಮೂದ್‌ನಲ್ಲಿ ಹೀಗೆ ಉಲ್ಲೇಖವಿದೆ: –

It is also said that He (The Promised Messiah) shall die and his kingdom descend to his son and grand son. (ತಾಲ್ಮೂದ್, ಅಧ್ಯಾಯ 5, ಪುಟ 37)

—ವಾಗ್ದತ್ತ ಮಸೀಹರ ವಿಯೋಗ ಬಳಿಕ ಅವರ ಖಿಲಾಫತ್ ಮಗನಿಗೂ ಮೊಮ್ಮಗನಿಗೂ ಲಭಿಸುವುದು.

ಎಂಟು ನೂರು ವರ್ಷಗಳ ಮೊದಲು ಜೀವಿಸಿದ್ದ ಓರ್ವ ಸುಪ್ರಸಿದ್ಧ ವಲಿ ಆಗಿದ್ದ ಹಝ್‌ರತ್ ಇಮಾಂ ಯಹ್ಯಾಬಿನ್ ಅಖಿಬ್ ಅವರು ವಾಗ್ದತ್ತ ಮಸೀಹರ ಕಾಲದಲ್ಲುಂಟಾಗುವ ಹಲವು ಕುರುಹುಗಳನ್ನು ವಿವರಿಸಿದ ಬಳಿಕ ತನ್ನ ಕವಿತೆಯಲ್ಲಿ ಈ ರೀತಿ ಬರೆದಿರುತ್ತಾರೆ:

(ಇಮಾಂ ಮಹ್‌ದಿಯ ನಂತರ) ಅರಬಿ ವಂಶಜನಾದ ಓರ್ವ ವ್ಯಕ್ತಿ ಬಂದು ಆ ಮಹಾತ್ಮರ ಕರ್ಮಯೋಜನೆಯನ್ನು ಜಾರಿಗೆ ತರುವರು. ಅದರ ನಂತರ ಮಹ್‌ಮೂದ್ ಆಗಮಿಸಿ ಯುದ್ಧ ಮಾಡದೆಯೆ ಶಾಂ ರಾಜ್ಯವನ್ನು ವಶಪಡಿಸುವರು. ಆ ಕಾಲದಲ್ಲಿ ಒಂದು ಮಹಾಯುದ್ಧ (ಮಹ್‌ಮೂದರ ಖಿಲಾಫತ್ ಆರಂಭಿಸಿದ ವರ್ಷವಾದ 1914ರ ಲೋಕ ಮಹಾಯುದ್ಧವನ್ನು ಸ್ಮರಿಸಬಹುದು) ಸ್ಫೋಟಗೊಂಡು ಅನೇಕ ಯುವಜನರು [ಜವಾನರು] ಕೊಲ್ಲಲ್ಪಡುವರು.

ಹಿಜಿರ ವರ್ಷ 562ರಲ್ಲಿ ದಿವಂಗತರಾದ ಹಝ್‌ರತ್ ನಿಅ್‌ಮತುಲ್ಲಾ ವಲಿ (ರ.) ತನ್ನ ಒಂದು ಫಾರ್ಸಿ ಕವಿತೆಯಲ್ಲಿ ಈ ರೀತಿ ಪ್ರಸ್ತಾವಿಸಿದ್ದಾರೆ:

1200 ವರ್ಷಗಳ ಬಳಿಕ ಲೋಕದಲ್ಲಿ ಅದ್ಭುತಕರ ಘಟನೆಗಳು ನಡೆಯುವುವೆಂದು ನನಗೆ ಈಗ ಕಾಣಲು ಸಾಧ್ಯವಾಗುತ್ತದೆ. ಅಹ್ಮದ್ ಎಂಬ ವ್ಯಕ್ತಿ ಪ್ರತ್ಯಕ್ಷನಾಗಿ ಮಹತ್ತಾದ ಆಧ್ಯಾತ್ಮಿಕ ಕ್ರಾಂತಿ ನಡೆಸುವುದಾಗಿ ನಾನು ದರ್ಶನದಲ್ಲಿ ಕಾಣುತ್ತೇನೆ. ಅವರ ಕಾಲಘಟ್ಟ ವಿಜಯಪ್ರದವಾಗಿ ಕೊನೆಗೊಂಡರೆ ಅದರ ನಂತರ ಅವರ ಪುತ್ರ ಅವರ ಮಹತ್ತಾದ ಸ್ಮರಣೆಯನ್ನು ನೆಲೆನಿಲ್ಲಿಸುವರು.

* ಓರ್ವ ಪ್ರವಾದಿಯ ಸಾಕ್ಷ್ಯವಾಗಿ ಇಂತಹ ಕುರುಹು ಮೊದಲೆಂದೂ ಉಂಟಾಗಿಲ್ಲ ಎಂದು ತಾತ್ಪರ್ಯ.

# ★ ಪೈಗಂಬರ್‌-ಲೋಕದ ಪ್ರಕಾಶ ★

★ ಕೆ. ಪಿ. ಕೇಶವ ಮೇನನ್

ಸಾವಿರದ ನಾನ್ನೂರು ವರ್ಷ ಮೊದಲು ಭೂ ಜಾತನಾದ ಓರ್ವ ಮಹಾಪುರುಷನ – ಮುಹಮ್ಮದ್ ಪೈಗಂಬರರ – ಚರಿತ್ರೆಯನ್ನು, ಅವರ ಗಳಿಕೆಗಳನ್ನೂ ಉಪದೇಶಗಳನ್ನೂ ಅನುಸ್ಮರಿಸುವ ಸಂದರ್ಭ ಲಭಿಸಿದು ದರಿಂದ ನನಗೆ ಸಂತೋಷವಿದೆ. ಲೋಕದ ದೀರ್ಘ ಚರಿತ್ರೆಯಲ್ಲಿ ಮನುಷ್ಯನು ವಿವೇಚಿಸಲು ತೊಡಗಿದ ಕಾಲ ದಿಂದಲೇ ಅವನು ಜೀವಿತದ ಕುರಿತು ವಿವೇಚಿಸಲು ಪ್ರಾರಂಭಿಸಿರುವನು. ಜೀವಿತವೆಂದರೇನು ? ಅದರ ಅರ್ಥವೇನು? ಉದ್ದೇಶವೇನು? ನಾನು ಜೀವಿಸುವುದೂ ಪ್ರವರ್ತಿಸುವುದೂ ಯಾತಕ್ಕಾಗಿ ? ಈ ಲೋಕಕ್ಕೆ ನಾವು ಎಲ್ಲಿಂದ ಬಂದೆವು ? ಎಲ್ಲಿಗೆ ಹೋಗುತ್ತೇವೆ ? ಎಂಬಿ ತ್ಯಾದಿ ಪ್ರಶ್ನೆಗಳು ಪ್ರತಿಯೊಂದು ಕಾಲದಲ್ಲಿಯೂ ಮನುಷ್ಯನು ಸ್ವಯಂ ಪ್ರಶ್ನಿಸುತ್ತಿದ್ದಾನೆ. ಈ ಪ್ರಶ್ನೆಗಳಿಗೆ ಉತ್ತರ ಹೇಳಲು ಸಾಮರ್ಥ್ಯಯುಳ್ಳ ಮಹಾಪುರುಷರು ಪ್ರಪಂಚದಲ್ಲಿ ವಿವಿಧ ಕಾಲಗಳಲ್ಲಿ ಬಂದಿರುವರು. ಆ ಮಹಾಪುರುಷರು ಮನುಷ್ಯರಿಗೆ ಮಾದರಿಯಾಗಿದ್ದರು. ಆಚಾರ್ಯ ಪುರುಷರೂ ಪ್ರವಾದಿಗಳೂ ನೀಡಿದ ಉಪ ದೇಶಗಳು ಯಾವಾಗಲೂ ಒಂದೇ ಪ್ರಕಾರದಲ್ಲಿ ಇರಬೇ ಕೆಂದಿಲ್ಲ. ಅವರ ವೀಕ್ಷಣಗಳಲ್ಲೂ ಉಪದೇಶಗಳಲ್ಲೂ ವ್ಯತ್ಯಾಸವಿರಲೂ ಬಹುದು. ಅದು ಸ್ವಾಭಾವಿಕವೂ ಆಗಿದೆ. ಜನರು ಒಂದು ಪರ್ವತವನ್ನು ನೋಡುವಾಗ ಎಲ್ಲರಿಗೂ ಒಂದೇ ದೃಶ್ಯದ ಅನುಭವವಾಗಲಿಕ್ಕಿಲ್ಲ. ಒಬ್ಬೊಬ್ಬರಿಗೆ ಒಂದೊಂದು ರೀತಿಯಲ್ಲಿ ಕಾಣಿಸುವುದು. ಕೆಲವರು ಪಾರ್ಶ್ವವನ್ನು ಕಾಣುವರು. ಇನ್ನು ಕೆಲವರು ತುದಿಯನ್ನು ಮಾತ್ರ ಕಾಣುವರು. ಕೋಟಾನು ಕೋಟಿ ನಕ್ಷತ್ರಗಳು ಆಕಾಶದಲ್ಲಿವೆ. 'ಟೆಲೆಸ್ಕೋಪ್'ನಲ್ಲಿ ನೋ ಡುವುದಾದರೆ ಬರಿಗಣ್ಣಿನಿಂದ ನೋಡುವುದಕ್ಕಿಂತಲೂ ಅಧಿಕ ಗೋಚರಿಸಬಹುದು. ಟೆಲೆಸ್ಕೋಪಿನ ಶಕ್ತ್ಯಾನು ಸಾರ ಹೆಚ್ಚು ಅಥವಾ ಕಮ್ಮಿ ನಕ್ಷತ್ರಗಳನ್ನು ನೋಡ ಬಹುದು. ಆಧ್ಯಾತ್ಮಿಕ ಕಾರ್ಯಗಳೂ ಸಾಧಾರಣ ಇದೇ ರೀತಿಯಾಗಿದೆ. ಸ್ವಪ್ರಯತ್ನದಿಂದಲೂ ಜನ್ಮತಃ ಗಳಿಸಿದ ಆಸಕ್ತಿಯಿಂದಲೂ ಕೆಲವರಿಗೆ ಅಧಿಕ ಸಂಗತಿಗಳನ್ನು ಅರಿ ಯಲು ಸಾಧ್ಯವಿದೆ. ಈ ಲೋಕಕ್ಕೆ ಸಂಬಂಧಿಸಿದ ನಾವು ಕಾಣದ, ಅರಿಯದ ವಿಚಾರಗಳು ಅವರಿಗೆ ತಿಳಿದಿರುತ್ತವೆ. ಆದ್ದರಿಂದ ನಾವು ಅಂತಹವರನ್ನು ಗೌರವಿಸಿ, ಸ್ಮರಿಸು ತ್ತೇವೆ. ಈ ಸ್ಥಿತಿಯಲ್ಲಿ ನೋಡಿದರೆ ಪೈಗಂಬರರು ಲೋಕಕ್ಕೆ ಇಂದು ಸಹ ಒಂದು ಪ್ರಕಾಶವಾಗಿರುತ್ತಾ ರೆಂದು ಕಾಣಬಹುದು. ಪೈಗಂಬರರ ಚರಿತ್ರೆ ನಿಮಗೆಲ್ಲ ರಿಗೂ ತಿಳಿದಿರುವಂಥದ್ದು. ಆ ಬಗ್ಗೆ ನಾನಿಲ್ಲಿ ಪ್ರಸ್ತಾವಿ ಸುವುದಿಲ್ಲ. ಸಾಮಾನ್ಯ ನೆಲೆಯಲ್ಲಿ ನೋಡಿದರೂ ಪೈಗಂ ಬರರು ಎಲ್ಲಾ ವಿಧದಲ್ಲೂ ಮನುಷ್ಯರಿಗೆ ಮಾದರಿಯಾ ಗಿದ್ದರು. ಅವರ ವಿಶ್ವಾಸಾದರ್ಶಗಳ ಆಧಾರವಾಗಿರುವ ಯಥಾರ್ಥ ಸಂಗತಿಯೇನಾಗಿತ್ತೆಂದು ನಾವು ಪರಿಶೋಧಿ ಸಬೇಕಾಗಿದೆ.

ಪೈಗಂಬರರ ಚರಿತ್ರೆಯನ್ನೂ ಉಪದೇಶಗಳನ್ನೂ ಒಬ್ಬ ಸಾಮಾನ್ಯನ ಮಟ್ಟದಲ್ಲಿ ನೋಡಿದರೆ ಮೂರು ಸಂಗತಿಗಳು ನಮಗೆ ಕಾಣಲು ಸಾಧ್ಯವಿದೆ.

ಒಂದು, ದೇವನೊಡನಿರುವ ದೃಢ ನಂಬಿಕೆ. ಈ ಲೋಕದ ಆಧಿಪತ್ಯ ನಡೆಸುವ ಹಾಗೂ ಪರಿಪಾಲನೆ ಮಾಡುವ ಒಂದು ಶಕ್ತಿ ಅದೃಶ್ಯವಾಗಿ ಸ್ಥಿತಿಗೊಳ್ಳುತ್ತದೆ.

---

### ಇಮಾಂ ಮಹ್‌ದಿಯ ಕುರುಹುಗಳು

(17ನೇ ಪುಟದಿಂದ)

ಯಾವ ವಿಶದೀಕರಣವೂ ಅವಶ್ಯವಿಲ್ಲದ ವಿಧದಲ್ಲಿ ಸೂರ್ಯ ಪ್ರಕಾಶದಂತೆ ಮುಹಮ್ಮದ್ ಪೈಗಂಬರ್ (ಸ.) ನುಡಿದ ಎಲ್ಲಾ ಕುರುಹುಗಳು ಸಹ ನೆರವೇರಿವೆ. ಆ ಮಹಾಪುರುಷರು ಹೇಳಿದ ಅದೇ ರೂಪದಲ್ಲಿ ಎಲ್ಲಾ ಗುಣಗಳ ಸಮೇತ ಇಮಾಂ ಮಹ್‌ದಿ ಪ್ರತ್ಯಕ್ಷರಾಗಿರು ವರು.

"ಶುದ್ಧ ಹೃದಯವುಳ್ಳವರಿಗೆ ಅದ್ಭುತ ದೃಷ್ಟಾಂತ ಗಳು ಅನೇಕ ಅವಶ್ಯವಿಲ್ಲ. ಹೃದಯದಲ್ಲಿ ದೈವ ಭಕ್ತಿ ಯುಳ್ಳವರಿಗೆ ಒಂದೇ ಒಂದು ದೃಷ್ಟಾಂತ ಮಾತ್ರ ಸಾಕು."

●

ಅದೇ ದೈವ. ಅದ್ಭುತಕರವಾದ ರಚನಾ ವೈಭವಗಳಿಂದಲೂ ನಿಯಮಗಳಿಂದಲೂ ಪ್ರವರ್ತಿಸುವ ಈ ಪ್ರಪಂಚಕ್ಕೆ ಖಂಡಿತವಾಗಿಯೂ ಒಬ್ಬ ನಿಯಾಮಕನು ಇರಬೇಕಾಗಿದೆ. ಬುದ್ಧಿಯುಳ್ಳ ಮನುಷ್ಯನು ದೇವನಲ್ಲಿ ನಂಬಿಕೆಯಿರಿಸುತ್ತಾನೆ. ಈ ಮೂಲ ವಿಶ್ವಾಸದಿಂದ ಇತರೆಲ್ಲಾ ಒಳಿತು ಆರಂಭಿಸುತ್ತದೆ.

ಎರಡು, ಮನುಷ್ಯ ಸಹೋದರತೆ. ಮನುಷ್ಯರೆಲ್ಲ ಒಂದೇ ಎಂಬ ಪ್ರಜ್ಞೆ. ಈ ಲೋಕದಲ್ಲಿ ಹಲವು ಬಗೆಯ ನಂಬಿಕೆಯುಳ್ಳವರೂ ಅನೇಕ ವರ್ಗಗಳೂ ಇವೆ. ಆದರೂ ಮನುಷ್ಯರೆಂಬ ನೆಲೆಯಲ್ಲಿ ಅವರೆಲ್ಲ ಒಂದೇ ವರ್ಗದಲ್ಲಿ ಒಳಪಡುತ್ತಾರೆ. ಅವರೊಡನೆ ಸಹೋದರತೆಯಿಂದ ನಾವು ವರ್ತಿಸಬೇಕು. ಅವರನ್ನು ಪ್ರೀತಿಸಬೇಕು. ಈ ಬಗೆಯ ಮನುಷ್ಯ ಭ್ರಾತೃತ್ವವನ್ನು ಪೈಗಂಬರರು ಎರಡನೆಯದಾಗಿ ಘೋಷಿಸಿದರು.

ಮೂರು, ಪ್ರಾರ್ಥನೆ. ದೇವನಿದ್ದರೆ, ದೈವ ವಿಶ್ವಾಸವಿದ್ದರೆ, ಆ ದೇವನೊಡನೆ ಮನುಷ್ಯರಿಗೆ ಸಂಪರ್ಕ ಏರ್ಪಡಿಸಲು ಪ್ರಾರ್ಥನೆಯು ಉಪೇಕ್ಷಿಸಲಾಗದ ಒಂದು ಮಾರ್ಗವಾಗಿದೆ. ಆದ್ದರಿಂದಲೇ, ಇಸ್ಲಾಮಿನಲ್ಲಿ ಪ್ರಾರ್ಥನೆಗೆ ದೊಡ್ಡ ಸ್ಥಾನ ನೀಡಲಾಗಿದೆ. ಪ್ರಾರ್ಥನೆಯೆಂದು ಹೇಳುವಾಗ ಬಾಹ್ಯವಾದ ಕೆಲವು ಕರ್ಮಗಳೆಂದಾಗಲಿ ಆಚಾರಗಳೆಂದಾಗಲಿ ನಾನು ಅರ್ಥ ಮಾಡುವುದಿಲ್ಲ. ಮನಸ್ಸಿನ ಅಗಾಧತೆಯಿಂದ ಹೊರಟು ದೇವನೊಡನೆ ಬಂಧವನ್ನೇರ್ಪಡಿಸುವುದೇ ಸರಿಯಾದ ಪ್ರಾರ್ಥನೆ. ಅಂತಹ ದೈವಸಂಪರ್ಕಕ್ಕಾಗಿ ನಿರಂತರ ಪರಿಶ್ರಮಿಸುವವನು ಧರ್ಮಪಥದಿಂದ ವಿಮುಖನಾಗಲಾರ. ಆದರೆ, ದೇವನೊಡನೆ ಪ್ರಾರ್ಥಿಸಲು ಹೋಗುವವರೇ ಇತರರಿಗೆ ಉಪದ್ರವ ಕೊಡಬಾರದು. ಹಾಗೆಲ್ಲಾ ಮಾಡಿ ಪ್ರಾರ್ಥನೆ ನಡೆಸುವುದಾದರೆ ಅದು ಅರ್ಥ ರಹಿತವಾಗಿದೆ.

ಸಂಕ್ಷಿಪ್ತವಾಗಿ, ದೃಢ ದೈವವಿಶ್ವಾಸ, ಮನುಷ್ಯ ಸಹೋದರತೆ, ಪ್ರಾರ್ಥನೆ—ಈ ಮೂರು ಮೂಲ ತತ್ವಗಳು ಪೈಗಂಬರರ ಜೀವಿತ ಸಂದೇಶದಲ್ಲಿ ನಾವು ಕಾಣುತ್ತೇವೆ.

ಧರ್ಮದ ಉದ್ದೇಶವೇನು? ಆದರ್ಶ ಪುರುಷರು ಹೇಳುವುದನ್ನು ನಾವು ನಂಬುತ್ತೇವೆ. ಹಲವು ವಿಷಮತೆಗಳೂ ಸಮಸ್ಯೆಗಳೂ ಜೀವಿತದಲ್ಲಿ ನಮಗುಂಟಾಗುತ್ತವೆ. ಮನಸ್ಸಿಗೆ ಶಾಂತಿ ಸಿಗಬೇಕು. ಇಂತಹ ಮಾರ್ಗದಲ್ಲಿ ಹೋದರೆ ಮನಃಶಾಂತಿ ಗಳಿಸಬಹುದೆಂದು ಧರ್ಮ ನಮ್ಮೊಡನೆ ಹೇಳುತ್ತದೆ. ಆದರೆ ಮಾರ್ಗದರ್ಶನಗಳಲ್ಲಿ ವ್ಯತ್ಯಾಸವಿರ ಬಹುದು. ಪೈಗಂಬರರ ಜೀವಿತಾದರ್ಶಗಳಲ್ಲಿ ನಮಗೆ ಮನಃಶಾಂತಿಗಾಗಿ ಮೇಲೆ ಹೇಳಿದ ಮೂರು ದಾರಿಗಳನ್ನು ಕಾಣಬಹುದು.

ಒಬ್ಬ ಮನುಷ್ಯನಿಗೆ ಅನೇಕ ಬಾಧ್ಯತೆಗಳೂ ಜವಾಬ್ದಾರಿಕೆಗಳೂ ಇರುತ್ತವೆ. ಏಕಕಾಲದಲ್ಲಿ ಅವೆಲ್ಲವನ್ನೂ ನಿರ್ವಹಿಸ ಬೇಕಾಗುತ್ತದೆ. — ಒಬ್ಬ ಮನುಷ್ಯನೆಂಬ ಸ್ಥಿತಿಯಲ್ಲಿ, ಒಂದು ಕುಟುಂಬದ ಸದಸ್ಯನೆಂಬ ಸ್ಥಿತಿಯಲ್ಲಿ, ಒಂದು ಸಮುದಾಯದ ಸದಸ್ಯನೆಂಬ ಸ್ಥಿತಿಯಲ್ಲಿ, ಒಂದು ರಾಷ್ಟ್ರದ ಪೌರನೆಂಬ ಸ್ಥಿತಿಯಲ್ಲಿ. ಇವೆಲ್ಲದರ ಹೊರತಾಗಿ, ಏನಾದರೊಂದು ಕೆಲಸದಲ್ಲಿ ಮನುಷ್ಯನು ನಿರತನಾಗಿರ ಬಹುದು. ಆ ಕೆಲಸದಲ್ಲಿ ಆತನಿಗೆ ಕೆಲವು ಹೊಣೆಗಳಿರ ಬಹುದು. ಹೀಗೆ ಮನುಷ್ಯನ ಪ್ರವೃತ್ತಿಗಳ ಸ್ಥಿತಿಯನುಸಾರ ನಾನಾ ರೀತಿಯ ಜವಾಬ್ದಾರಿಕೆಗಳು ಅವನ ಮೇಲೆ ಬಂದು ಬೀಳುತ್ತವೆ. ಈ ಹೊಣೆಗಳನ್ನು ನಿಭಾಯಿಸಿಕೊಂಡು ಹೇಗೆ ಜೀವಿಸಬೇಕೆಂಬ ನಿರ್ದೇಶಗಳನ್ನು ಧರ್ಮ ನೀಡುತ್ತದೆ. ಒಂದು ಕುಟುಂಬದಲ್ಲಿ ಸಹೋದರರು, ಮಕ್ಕಳು, ಪತ್ನಿ ಇತ್ಯಾದಿಯಾಗಿ ಹಲವರು ಇರುತ್ತಾರೆ. ಅವರಲ್ಲಿ ಪ್ರತಿಯೊಬ್ಬರ ಕರ್ತವ್ಯವೇನೆಂದು ಅದು ಘೋಷಿಸುತ್ತದೆ. ಅಂಗವಿಕಲರೊಡನೆ, ಬುದ್ಧಿ ಭ್ರಮೆಯಾದವರೊಡನೆ, ರೋಗಿಗಳೊಡನೆ ನಾವು ಹೇಗೆ ವರ್ತಿಸಬೇಕು? ಈ ವಿಷಯಗಳಲ್ಲೆಲ್ಲಾ ಪೈಗಂಬರರು ಆದರ್ಶ ಪುರುಷರಾಗಿದ್ದರು.

ಒಂದು ಕುಟುಂಬದಲ್ಲಿ ನಾವು ಕೈಗೊಳ್ಳಬೇಕಾದ ಕ್ರಮಗಳಲ್ಲದೆ ಒಂದು ಕಾರ್ಯದಲ್ಲಿ ನಾವು ಸ್ವೀಕರಿಸಬೇಕಾದ ನೆಲೆ, ವ್ಯವಹಾರದಲ್ಲಿ ತೋರಿಸಬೇಕಾದ ರೀತಿನೀತಿ ಇತ್ಯಾದಿಗಳನ್ನೆಲ್ಲಾ ನಮಗೆ ಧರ್ಮ ಕಲಿಸುತ್ತದೆ. ವಾಗ್ದಾನ ಮಾಡಿದರೆ ಅದಕ್ಕನುಗುಣವಾಗಿ ವರ್ತಿಸಬೇಕು. ಪ್ರತಿಜ್ಞೆ ಮಾಡಿದರೆ ಅದನ್ನು ಪಾಲಿಸಬೇಕು. ಇತರರಿಗೆ ನಷ್ಟವನ್ನುಂಟು ಮಾಡಿ ಲಾಭಗಳಿಸಬಾರದು.

ಪ್ರವಾದಿಗಳ ಜೀವಿತಮಹತ್ವಕ್ಕೆ ಆಧಾರವಾದ ಸಂಗತಿಗಳನ್ನೂ ಪ್ರವಾದಿಗಳ ಉಪದೇಶ ನಿರ್ದೇಶ

(22ನೇ ಪುಟ ನೋಡಿರಿ)

# ಸ್ಪೇಯಿನ್‌ನಲ್ಲಿ

ಇಸ್ಲಾಂ ಧರ್ಮದ ವಾಗ್ದತ್ತ ಪುನರುತ್ಥಾನದ ಚರಿತ್ರೆಯಲ್ಲಿ 1980 ಅಕ್ಟೋಬರ್ 9ನೇ ದಿನಾಂಕವು ಅಲ್ಲಾಹನ ಅಪರಿಮಿತ ಅನುಗ್ರಹಗಳ ಸ್ಮರಣೀಯ ದಿನವೂ ಯಥಾರ್ಥ ಆನಂದದ ಸ್ಮಾರಕ ಸುದಿನವೂ ಆಗಿದೆ. ಏಕೆಂದರೆ, ಇಸ್ಲಾಂ ಧರ್ಮವನ್ನು ಅಂತ್ಯಕಾಲದ ಆಪತ್ತಿನಿಂದ ಸಂರಕ್ಷಿಸಿ ಅದರ ಆಧ್ಯಾತ್ಮಿಕ ತೇಜಸ್ಸನ್ನು ಪ್ರಪಂಚದಾದ್ಯಂತ ಪುನಸ್ಥಾಪಿಸಲು ಅಲ್ಲಾಹು ನಿಯೋಗಿಸಿದ ಇಮಾಂ ಮಹದಿಯವರ ಮೂರನೆಯ ಖಲೀಫ ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್ ಸಾಹೇಬರು ಆ ದಿವಸ ಸ್ಪೇಯಿನ್‌ನಲ್ಲಿ ಅಹ್ಮದಿಯಾ ಮುಸ್ಲಿಂ ಮಸೀದಿಯೊಂದಕ್ಕೆ ತಳಕಲ್ಲು ಹಾಸಿದರು. (ಸಮಸ್ತ ಸ್ತುತಿಗಳೂ ಸರ್ವಲೋಕಗಳ ಪಾಲಕನಾದ ಅಲ್ಲಾಹನಿಗೆ ಸಲ್ಲುವುವು). ಈ ಕುರಿತು ಭಾರತೀಯ ಅಹ್ಮದಿಯಾ ಕೇಂದ್ರವಾದ ಖಾದಿಯಾನ್‌ನಿಂದ ಲಭಿಸಿದ ಒಂದು ತಂತಿ ಸಂದೇಶದ ಕನ್ನಡಾನುವಾದ ಈ ರೀತಿಯಿದೆ:

> ಏಳುನೂರು ವರ್ಷಗಳ ಅಂತರದ ಬಳಿಕ ಇದೀಗ ಹಿಜರಿ ಶಕ 14ನೇ ಶತಮಾನದ ಕೊನೆಯಲ್ಲಿ, ಈ ಅಕ್ಟೋಬರ್ ಒಂಭತ್ತನೆಯ ದಿನಾಂಕದಂದು, ವಿವಿಧ ರಾಜ್ಯಗಳ ಅಹ್ಮದಿಯಾ ಮಿಶನರಿಗಳ ಹಾಗೂ ಪ್ರಮುಖ ವ್ಯಕ್ತಿಗಳ ಸಮ್ಮುಖದಲ್ಲಿ ಹಝ್ರತ್ ಖಲೀಫತುಲ್ ಮಸೀಹ್, ಸ್ಪೇಯಿನ್‌ನಲ್ಲಿ ಪ್ರಥಮ ಮುಸ್ಲಿಂ ಮಸೀದಿಗೆ ಶಿಲಾನ್ಯಾಸ ಮಾಡಿದರು. ಇಸ್ಲಾಮಿನ ಸಾರ್ವತ್ರಿಕ ವಿಜಯಕ್ಕಾಗಿ ಪ್ರಾರ್ಥನೆಗಳನ್ನೂ ಬಲಿದಾನಗಳನ್ನೂ ದಾನಧರ್ಮಗಳನ್ನೂ ಅರ್ಪಿಸಬೇಕೆಂಬುದಾಗಿ ಆ ವೇಳೆಯಲ್ಲಿ ಪ್ರಪಂಚದ ಎಲ್ಲ ಅಹ್ಮದಿಯಾ ಜಮಾಅತ್ ಘಟಕಗಳಿಗೂ ಹಝ್ರತ್ ಸಾಹೇಬರು ನಿರ್ದೇಶಿಸಿದರು.
>
> —ನಾರಿಝರ್ ಅಲಾ–ಖಾದಿಯಾನ್
> 11-10-80.

ಖುರ್ತುಬಾ (ಕೋರ್ಡೋವಾ)ದಿಂದ 20 ಮೈಲು ದೂರದ ಪೆದ್ರೋ ಆಬಾದ್ (Pedro Abad) ಎಂಬಲ್ಲಿ ಪ್ರಾರ್ಥನಾ ನಿರತ ಆಧ್ಯಾತ್ಮಿಕ ವಾತಾವರಣದಲ್ಲಿ ಅಹ್ಮದಿಯಾ ಖಲೀಫ ಈ ಮಸೀದಿಗೆ ಶಿಲಾನ್ಯಾಸ ಮಾಡಿದರು. ಒಂದು ಕಾಲದಲ್ಲಿ ಇಸ್ಲಾಂ ಧರ್ಮದ ವಿಜಯ ಪತಾಕೆಯನ್ನು ಹಾರಾಡಿಸಿದ ಸ್ಪೇಯಿನ್‌ನ ಭೂಮಿಯಲ್ಲಿ ಇದೀಗ 700 ವರ್ಷಗಳ ಬಳಿಕ ಏಕದೈವಾರಾಧನೆಗಾಗಿ ಒಂದು ಮಸೀದಿಯನ್ನು ನಿರ್ಮಾಣ ಮಾಡುವ ಭಾಗ್ಯವನ್ನು ಅಲ್ಲಾಹು ಅಹ್ಮದಿಯಾ ಸಂಘಟನೆಗೆ ಕರುಣಿಸಿರುವನು.

ಆರುನೂರು ವರ್ಷಗಳ ಕಾಲ ಇಸ್ಲಾಂ ಧರ್ಮದ ವಿಜಯ ಪತಾಕೆಯನ್ನು ಹೊತ್ತ ರಾಷ್ಟ್ರವಾಗಿತ್ತು ಸ್ಪೇಯಿನ್. ಅಲ್ಲಿ ಮುಸ್ಲಿಮರು ದೊಡ್ಡ ದೊಡ್ಡ ವಿಜ್ಞಾನ ಕೇಂದ್ರಗಳನ್ನೂ ಬೃಹತ್ ವಿಶ್ವವಿದ್ಯಾಲಯಗಳನ್ನೂ ಸ್ಥಾಪಿಸಿ ಯುರೋಪಿಪ ಜನರಿಗೆ ಜ್ಞಾನವನ್ನೂ ವಿದ್ಯೆಯನ್ನೂ ಧಾರೆಯೆರೆದರು. ಈ ವಿಜ್ಞಾನ ಪ್ರಜ್ಞೆಯೇ ನಂತರದ ಯುರೋಪಿನ ನವೋತ್ಥಾನಕ್ಕೆ ಕಾರಣವಾಯಿತು. ಅಂದು ಸ್ಪೇಯಿನ್ ಎಂಬುದು ಇಸ್ಲಾಮಿಕ ಸಂಸ್ಕೃತಿಯ ಕೇಂದ್ರ ಸ್ಥಾನವಾಗಿತ್ತು. ಆದರೆ, ನಂತರ ಅಲ್ಲಿಂದ ಮುಸ್ಲಿಮರು ದಯನೀಯವಾಗಿ ಹೊರದೂಡಲ್ಪಟ್ಟರು. ರೋಮಾಂಚಕರವಾದ ಆ ಚಾರಿತ್ರಿಕ ಘಟನೆಗಳನ್ನು ಮನೋವೇದನೆಯೊಂದಿಗಲ್ಲದೆ ಓರ್ವ ಮುಸ್ಲಿಮನಿಗೆ ಸ್ಮರಿಸಲು ಸಾಧ್ಯವಿಲ್ಲ. ಸ್ಪೇಯಿನ್‌ನಲ್ಲಿ ಒಬ್ಬನೇ ಒಬ್ಬ ಮುಸ್ಲಿಂ ಸಹ ಕಾಣಲ್ಪಡದ ಅಂಧಕಾರಮಯವಾದ ಕೆಲವಾರು ಶತಮಾನಗಳು ಸಂದವು. ಈ ಹಿನ್ನೆಲೆಯಲ್ಲಿ ಅಹ್ಮದಿಯಾ ಸಂಘಟನೆಯ ಎರಡನೆಯ ಖಲೀಫ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್ (ರ.) 30 ವರ್ಷಗಳ ಮೊದಲು ಮೌಲಾನಾ ಕರಂ ಇಲಾಹಿ ಝಫರ್ ಎಂಬವರನ್ನು ಸ್ಪೇಯಿನಿಗೆ ಪ್ರಥಮ ಅಹ್ಮದಿಯಾ ಮುಸ್ಲಿಂ ಮಿಶನರಿ

ಯಾಗಿ ಕಳುಹಿಸಿದರು. ಅವರು ಅಲ್ಲಿಗೆ ಹೋಗಿ ಇಸ್ಲಾಂ ಧರ್ಮ ಪ್ರಚಾರ ಕಾರ್ಯವನ್ನು ಆರಂಭಿಸಿದರು. ಕೆಥೋಲಿಕರ ಆಡಳಿತ ನಡೆಯುತ್ತಿರುವ ಆ ರಾಜ್ಯದಲ್ಲಿ ರಝಫರ್ ಸಾಹೇಬರಿಗೆ ಹಲವಾರು ತರದ ಅಡಚಣೆಗಳನ್ನು ಎದುರಿಸಬೇಕಾಗಿ ಬಂತು. ಆದರೂ ಅವರು ಮನೋದಾರ್ಢ್ಯತೆಯಿಂದ ಮುಂದುವರಿದರು. ಹಝ್ರತ್ ಖಲೀಫರವರ ಹಾಗೂ ಇತರ ಅಹ್ಮದೀಯರ ಪ್ರಾರ್ಥನೆಗಳು ಅವರಿಗೆ ಉತ್ತಮ ಪ್ರೋತ್ಸಾಹವನ್ನು ನೀಡಿತು. ಅವರು ಸ್ಪಾನಿಶ್ ಭಾಷೆಯನ್ನು ಕಲಿತರು. ಕೆಲವು ಇಸ್ಲಾಮಿಕ-ಅಹ್ಮದಿಯಾ ಕಿರು ಕೃತಿಗಳನ್ನು ಅವರು ಆ ಭಾಷೆಗೆ ಭಾಷಾಂತರಿಸಿ ಪ್ರಕಟಿಸಿದರು. ಈ ಪ್ರಯತ್ನಗಳಿಗೆಲ್ಲಾ ಅಲ್ಲಾಹನ ಅನುಗ್ರಹೀತ ಸಹಾಯವೂ ಲಭಿಸಿತು. ಸ್ಪೆಯಿನ್‌ನ ಹಲವರು ಕುಟುಂಬ ಸಮೇತ ಇಸ್ಲಾಂ

# ಮಸೀದಿ!

ಧರ್ಮವನ್ನು ಸ್ವೀಕರಿಸಿದರು. ಈ ನವ ಮುಸ್ಲಿಮರ ಸಂಖ್ಯೆ ಹೆಚ್ಚುತ್ತಾ ಬರುತ್ತಿದೆ. ಆದರೆ, ಅವರಿಗೆ ಇದುವರೆಗೆ ಒಂದು ಸ್ಥಿರವಾದ ಪ್ರಚಾರ ಕೇಂದ್ರವನ್ನೂ ಮಸೀದಿಯನ್ನೂ ಸ್ಥಾಪಿಸಲು ಸಾಧ್ಯವಾಗಿರಲಿಲ್ಲ. ಅಲ್ಲಾಹನ ಅನುಗ್ರಹದಿಂದ ಈಗ ಅದು ಸಾಧ್ಯವಾಗಿದೆ–ಅಲ್‌ಹಮ್ದು ಲಿಲ್ಲಾಹ್.

1970ರಲ್ಲಿ ಹಝ್ರತ್ ಖಲೀಫತುಲ್ ಮಸೀಹ್ III ಸ್ಪೆಯಿನ್ ಸಂದರ್ಶಿಸಿದಾಗ ಪುರಾತನ ಮುಸ್ಲಿಂ ಪ್ರತಾಪ ಕಾಲದಲ್ಲಿ ನಿರ್ಮಿಸಲ್ಪಟ್ಟ ಈಗ ಉಪಯೋಗ ಶೂನ್ಯವಾಗಿ ಪಾಳು ಬಿದ್ದಿದ್ದ ಒಂದು ಮಸೀದಿಯು ಅಹ್ಮದೀಯರಿಗೆ ಲಭಿಸುವಂತಾಗಲು ಪರಿಶ್ರಮಿಸಿ ನೋಡಿದ್ದರು. ಮೊದಲು ಸರಕಾರವು ಸಮ್ಮತಿಸಿದರೂ ಕ್ರೈಸ್ತ ಪಾದ್ರಿಗಳ ಕಠಿಣ ವಿರೋಧದಿಂದಾಗಿ ಅದನ್ನು ಅಹ್ಮದಿಯಾ ಮುಸ್ಲಿಮರಿಗೆ ಬಿಟ್ಟು ಕೊಡಲು ಸರಕಾರಕ್ಕೆ ಸಾಧ್ಯವಾಗಲಿಲ್ಲ. ಈಗ 10 ವರ್ಷಗಳ ಬಳಿಕ ಅಲ್ಲಿ ಬಹಳಷ್ಟು ಮಾರ್ಪಾಟುಗಳು ಉಂಟಾಗಿವೆ. ಖರ್ತುಬಾ (ಕೋಡೋರ್ವಾ) ಪಟ್ಟಣಕ್ಕೆ ಸಮೀಪ ಸುಮಾರು 1½ ಎಕ್ರೆ ವಿಸ್ತೀರ್ಣಯುಳ್ಳ ನಿವೇಶನವನ್ನು ಅಹ್ಮದಿಯಾ ಸಂಘಟನೆ ಕ್ರಯಕ್ಕೆ ಪಡಕೊಂಡಿದೆ. ಇದೀಗ ಮಸೀದಿಯ ನಿರ್ಮಾಣಕ್ಕಾಗಿ ಅದೇ ಜಾಗದಲ್ಲಿ ಹಝ್ರತ್ ಖಲೀಫರವರು ಶಿಲಾನ್ಯಾಸ ಮಾಡಿರುವರು. ಇದು ಇತಿಹಾಸ ಪ್ರಸಿದ್ಧವಾದ ಒಂದು ಘಟನೆಯಾಗಿದೆ. ಶಿಲಾನ್ಯಾಸ ಕರ್ಮವನ್ನು ನೆರವೇರಿಸುತ್ತಾ ಹಝ್ರತ್ ಖಲೀಫರವರು "ಇಂದು ನಮಗೆ ಈದ್ ಹಬ್ಬದ ದಿನವಾಗಿದೆ" ಎಂದು ಹೇಳಿದರು. ದೈವನಾಮ ಕೀರ್ತನೆಯೊಂದಿಗೂ ಪ್ರಾರ್ಥನೆಗಳೊಂದಿಗೂ ಅಹ್ಮದಿಯಾ ಖಲೀಫರು ಆ ಮಹತ್ಕಾರ್ಯವನ್ನು ನೆರವೇರಿಸುತ್ತಿದ್ದ ವೇಳೆ ಅಲ್ಲಿ ಟೆಲಿವಿಶನ್, ರೇಡಿಯೋ ಹಾಗೂ ಪತ್ರಿಕಾ ಬಾತ್ಮೀದಾರರು ಹಾಜರಿದ್ದರು. ಸ್ಪೆಯಿನ್ ರಾಜ್ಯದ ಈ ಮಸೀದಿಯ ಶಿಲಾನ್ಯಾಸದ ಕುರಿತು ಪ್ರಪಂಚದ ಸಾಮಾನ್ಯ ಎಲ್ಲಾ ಪತ್ರಿಕೆಗಳಲ್ಲೂ ವಿಶೇಷಃ ತಮಿಳ್ಕ ಎಲ್ಲಾ ಮುಸ್ಲಿಂ ಪತ್ರಿಕೆಗಳಲ್ಲೂ ವಾರ್ತೆಯು ಪ್ರಕಟಿಸಲ್ಪಟ್ಟಿದೆ.*

ಹೀಗೆ ಸ್ಪೆಯಿನ್‌ನಲ್ಲಿ 700 ವರ್ಷಗಳ ಅಂತರದ ಬಳಿಕ ಇದೀಗ ಇಸ್ಲಾಂ ಧರ್ಮದ ಪುನರುತ್ಥಾನದ ಉದ್ಘಾಟನೆಯಾಗಿದೆ. ಇದು ಇಸ್ಲಾಮಿನ ನವೋತ್ಥಾನಕ್ಕಾಗಿ ಅಲ್ಲಾಹನಿಂದ ನಿಯುಕ್ತರಾದ ವಾಗ್ದತ್ತ ಮಹದಿಯವರ ಜಮಾಅತಿಗೆ ಅರ್ಹವಾದ ಭಾಗ್ಯವೇ ಆಗಿರುತ್ತದೆ. ಈ ಶುಭ ವೇಳೆಯಲ್ಲಿ ಪ್ರತಿಯೋರ್ವ ಸತ್ಯ ವಿಶ್ವಾಸಿಯ ಹೃದಯವು ತನ್ನ ಸೃಷ್ಟಿಕರ್ತನ ಮುಂದೆ ಕೃತಜ್ಞತೆಯಿಂದ ಸಾಷ್ಟಾಂಗವೆರಗುವುದು. ಸರ್ವಸ್ತುತಿ ಸ್ತೋತ್ರಗಳೂ ಆ ಸರ್ವವಲ್ಲಭನಾದ ಸರ್ವಲೋಕಗಳ ಪಾಲಕನಾದ ಅಲ್ಲಾಹನಿಗೇ ಸಲ್ಲುವುವು.

—M. P. I.

* ಮೌದೂದಿ ಪಂಥದ ಆಶ್ರಯದಲ್ಲಿ ಮಂಗಳೂರಿನಿಂದ ಹೊರಡುವ 'ಸನ್ಮಾರ್ಗ' ವಾರ ಪತ್ರಿಕೆಯ 14-11-80ರ ಸಂಚಿಕೆಯಲ್ಲಿ ಸಹ ಈ ವಾರ್ತೆಯನ್ನು ಪ್ರಕಟಿಸಲಾಗಿತ್ತು. ಆದರೆ ಇದು ಅಹ್ಮದಿಯಾ ಜಮಾಅತಿನ ವತಿಯಿಂದ ಎಂಬುದನ್ನು ಬಹಿರಂಗ ಪಡಿಸಲಾಗಿಲ್ಲ. ಅದು ತಿಳಿಯದ ಕಾರಣದಿಂದಾಗಿರಬಹುದೇ? ಅಥವಾ ಉದ್ದೇಶಪೂರ್ವಕವಾಗಿರಬಹುದೇ? —ಸಂ.

 [19ನೇ ಪುಟದಿಂದ]

ಗಳನ್ನೂ ಆಯಾಯ ಕಾಲಕ್ಕೆ ಅನುಯೋಜ್ಯವಾದ ರೀತಿಯಲ್ಲಿ ಉಪಯೋಗ ಪಡಿಸಲು ನಾವು ಶ್ರಮಿಸಬೇಕು. ಮನುಷ್ಯರೊಡನೆ ಹೇಗೆ ವರ್ತಿಸಬೇಕೆಂದು ಅವರು ಉಪದೇಶಿಸಿ, ಜೀವಿಸಿ ತೋರಿಸಿ ಕೊಟ್ಟರು. ಇಂದು ನಮಗೆ ಕಲಬೆರಕೆ ಮಾಡದ ವಸ್ತುಗಳು ಎಲ್ಲಿಯೂ ಸಿಗುವುದಿಲ್ಲ. ಖಾದ್ಯ ಪದಾರ್ಥಗಳಲ್ಲಿ ವಿಷವನ್ನು ಸಹ ಬೆರೆಸಲು ಹಿಂಜರಿಯುವುದಿಲ್ಲ. ಕರಾರು ಪ್ರಕಾರ ವರ್ತಿಸುವುದಿಲ್ಲ. ಇತರರನ್ನು ಮೋಸಗೊಳಿಸಲು ದೊಡ್ಡ ಸಾಮರ್ಥ್ಯ ಪ್ರದರ್ಶಿಸಲ್ಪಡುತ್ತದೆ. ಈ ದೋಷಗಳನ್ನೆಲ್ಲಾ ಮನುಷ್ಯನಿಂದ ನೀಗಿಸಲು ಧರ್ಮದ ಅವಶ್ಯವಿದೆ. ಧರ್ಮಗ್ರಂಥಗಳನ್ನು ಪಾರಾಯಣ ಮಾಡಿದುದರಿಂದಾಗಲಿ ಧರ್ಮಾನುಯಾಯಿಗಳೆಂದು ನಟಿಸುವುದರಿಂದಾಗಲಿ ಈ ದೋಷಗಳು ನಿವಾರಿಸಲ್ಪಡಲಾರವು. ಬದಲಾಗಿ, ಧರ್ಮದ ನಿರ್ದೇಶಗಳು ಜೀವಿತ ನಡೆವಳಿಕೆಗಳಲ್ಲಿ ಪ್ರತಿಬಿಂಬಿಸಬೇಕು. ಪ್ರವಾದಿಗಳ ಜೀವಿತ ಪಥದಲ್ಲಿ ಚಲಿಸಬೇಕು.

ವಿಭಿನ್ನ ಆಚಾರ ವಿಚಾರಗಳನ್ನು ಸ್ವೀಕರಿಸಿದ ವಿವಿಧ ಸಮುದಾಯಗಳು ನಮ್ಮ ದೇಶದಲ್ಲಿವೆ. ವಿಭಿನ್ನ ಪ್ರಾರ್ಥನಾ ರೀತಿಗಳು, ಉತ್ಸವಗಳು, ಧರ್ಮಾಚಾರ ಎಲ್ಲಾ ಇವೆ. ಒಂದು ಪಂಗಡದವರು ಮೌಢ್ಯವೆಂದು ಭಾವಿಸುವ ವಿಚಾರವನ್ನು ಇನ್ನೊಂದು ಪಂಗಡದವರು ಮಹಾ ಕಾರ್ಯವೆಂದು ಕೊಂಡಾಡುತ್ತಾರೆ. ವಿವಿಧ ಸಮುದಾಯಗಳಲ್ಲಿ ವಿವಿಧ ಆಚಾರ ಪದ್ಧತಿಗಳಿರಬಹುದು. ಹಲವು ಸಮುದಾಯಗಳು ಒಟ್ಟಿಗೆ ವಾಸಿಸುವಾಗ ನಾವು ಸಹಿಷ್ಣುತೆ ಪಾಲಿಸದೆ ನಿರ್ವಾಹವಿಲ್ಲ.

ಒಂದು ರಾಷ್ಟ್ರದಲ್ಲಿ ಜೀವನ ನಡೆಸುವಾಗ ನಮಗೆ ಆ ರಾಷ್ಟ್ರದೊಡನೆ ಕೆಲವು ಹೊಣೆಗಳಿವೆ. ಪೈಗಂಬರರ ಜೀವಿತದಲ್ಲಿ ನಮಗೆ ಈ ಸಂಗತಿಗಳನ್ನೆಲ್ಲಾ ಕಾಣಬಹುದಾಗಿದೆ. ಪೈಗಂಬರರು ತನ್ನ ವೈರಿಗಳೊಡನೆ, ತನ್ನನ್ನು ಹಲ ವಿಧದಲ್ಲಿ ದ್ರೋಹಿಸಿ ಕಷ್ಟಕೊಟ್ಟ ಶತ್ರುಗಳೊಡನೆ ವರ್ತಿಸಿದ ರೀತಿ ಆದರ್ಶನೀಯವಾಗಿದೆ. ಒಂದು ರಾಷ್ಟ್ರ ಗೆಲ್ಲಬೇಕಾದರೆ ಅದಕ್ಕೆ ಶಕ್ತಿಯಿರಬೇಕಾಗಿದೆ. ಆಡಳಿತಗಾರ ಎಂಬ ಸ್ಥಿತಿಯಲ್ಲೂ ಪೈಗಂಬರರು ಓರ್ವ ಉತ್ತಮ ಮಾದರಿಯಾಗಿದ್ದರೆಂದು ನಾವು ಕಾಣುತ್ತೇವೆ. ಅವರು ಸ್ಥಾಪಿಸಿದ ಆ ಸರಕಾರ ಹೆಚ್ಚು ಕಾಲ ಬಾಳಿತು. ಪೈಗಂಬರರು ಪ್ರಪಂಚಕ್ಕೆ ಪ್ರಕಾಶವನ್ನೂ ಜ್ಞಾನವನ್ನೂ ನೀಡಿದ ಓರ್ವ ಮಹಾ ಪುರುಷರಾಗಿದ್ದರು. ಆ ಮಹಾತ್ಮರ ಮಹಾ ಕೀರ್ತನೆಗೆ ಒಂದು ಸುಸಂದರ್ಭ ಲಭಿಸಿದುದರಿಂದ ನಾನು ಸಂತುಷ್ಟನಾಗಿದ್ದೇನೆ.

(ಕಲ್ಲಿಕೋಟೆ ಅಹ್ಮದಿಯಾ ಘಟಕದ ಆಶ್ರಯದಲ್ಲಿ ಟೌನ್‌ಹಾಲ್‌ನಲ್ಲಿ ಜರಗಿದ "ಪೈಗಂಬರ ದಿನಾಚರಣೆ" ಸಭೆಯೊಂದನ್ನು ಉದ್ಘಾಟಿಸುತ್ತಾ ಮಾಡಿದ ಭಾಷಣ).

Read

THE HOLY PROPHET MUHAMMAD

Being a short sketch of the Life, Teachings and character of the Holy Prophet Muhammad.

By: Hazrat Mirza Bashiruddin Mahmud Ahmad.

Write to: Nazir Dawat-o-Tabligh, Qadian-143516 (Punjab)


# ಅಹ್ಮದಿಯಾ ವಾರ್ತೆಗಳು

## ನೊಬೆಲ್ ಪ್ರಶಸ್ತಿ ವಿಜೇತ ಡಾ। ಅಬ್ದುಸ್ಸಲಾಮರ ಭಾರತ ಸಂದರ್ಶನ

1979ರ ನೊಬೆಲ್ ಪ್ರಶಸ್ತಿ ವಿಜೇತ ಭೌತಶಾಸ್ತ್ರ ವಿಜ್ಞಾನಿ ಡಾ। ಅಬ್ದುಸ್ಸಲಾಂ ಅವರು ಜನವರಿ ಎರಡನೇ ವಾರದಲ್ಲಿ ಭಾರತವನ್ನು ಸಂದರ್ಶಿಸುವರು. ತಿಂಗಳ ಕೊನೆಯ ತನಕ ಅವರು ಇಲ್ಲಿ ಕಾರ್ಯಕ್ರಮವನ್ನು ಇರಿಸಿಕೊಂಡಿದ್ದಾರೆ. ಅದು ಇಂತಿದೆ:

| | | |
|---|---|---|
| ಜನವರಿ | 8: | ಬೊಂಬಾಯಿಗೆ ಆಗಮನ. |
| ,, | 8–11: | ಬೊಂಬಾಯಿ |
| ,, | 12: | ಮದ್ರಾಸು |
| ,, | 13-14: | ಬೆಂಗಳೂರು |
| ,, | 15: | ಹೈದರಾಬಾದ್ |
| ,, | 16: | ಡೆಲ್ಲಿ |
| ,, | 17, 18: | ಡಾಕ್ಕಾ |
| ,, | 19, 20: | ಭುವನೇಶ್ವರ |
| ,, | 21: | ಕಲ್ಕತ್ತಾ |
| ,, | 22: | ಪಾಟ್ನಾ |
| ,, | 23: | ಲಕ್ನೋ |
| ,, | 24: | ಕಾನ್ಪುರ |
| ,, | 25, 26: | ಖಾದಿಯಾನ್ |
| ,, | 27: | ಡೆಲ್ಲಿ |
| ,, | 28: | ದೇವ್‌ಬಂದ್ |
| ,, | 29: | ರಾಂಪುರ |
| ,, | 30: | ಆಲಿಘಡ. |

—೦—೦—



## ಲಂಡನ್ ಮಸೀದಿಗೆ ಸಚಿವರ ಸಂದರ್ಶನ

ಜುಲೈ 8ರಂದು ಬ್ರಿಟಿಷ್ ಸರಕಾರದ ಗೃಹ ಸಚಿವ ತಿಮೋಥಿ ರೈಸನ್‌ರವರು ಲಂಡನಿನ ಅಹ್ಮದಿಯಾ ಮಸೀದಿಯನ್ನೂ ಮಿಶನ್ ಹೌಸನ್ನೂ ಸಂದರ್ಶಿಸಿದರು.

ಮಸೀದಿಯ ಇಮಾಂ ಮೌಲಾನ ಶೈಕ್ ಮುಬಾರಕ್ ಅಹ್ಮದ್, ಸರ್ ಮುಹಮ್ಮದ್ ಝಫರುಲ್ಲಾ ಖಾನ್, ಡಾ। ಅಬ್ದುಸ್ಸಲಾಂ ಹಾಗೂ ಸ್ಥಳೀಯ ಅಹ್ಮ

ದಿಯಾ ಘಟಕದ ಇತರ ಗಣ್ಯರು ಅವರನ್ನು ಸ್ವಾಗತಿಸಿದರು. ಅಹ್ಮದಿಯಾ ಸಂಘಟನೆಯ ವಿಶ್ವಾಸ ಮತ್ತು ಚಟುವಟಿಕೆಗಳ ಬಗ್ಗೆ ಅವರಿಗೆ ವಿವರಿಸಲಾಯಿತು ಹಾಗೂ ಖುರ್‌ಆನಿನ (ಇಂಗ್ಲಿಷ್ ಭಾಷಾಂತರ ಸಹಿತವುಳ್ಳ) ಒಂದು ಪ್ರತಿಯನ್ನು ಅವರಿಗೆ ನೀಡಲಾಯಿತು.

## ಲಂಡನ್ ಮಸೀದಿಯಲ್ಲಿ ಈದ್ ಪ್ರಾರ್ಥನೆ 3000 ಅಹ್ಮದಿಯರು ಭಾಗವಹಿಸಿದರು

ಅಗೋಸ್ತು 12ರಂದು ಬ್ರಿಟನಿನ ಅಹ್ಮದಿಯಾ ಕೇಂದ್ರವಾದ ಲಂಡನಿನ ಅಹ್ಮದಿಯಾ ಮಸೀದಿಯಲ್ಲಿ (ಮಸ್ಜಿದ್‌ಫಝ್‌ಲ್) ವಿದೇಶ ಸಂಚಾರದಲ್ಲಿರುವ ಜಮಾಅತಿನ ಖಲೀಫರಾದ ಹಝ್‌ರತ್ ಹಾಫಿಝ್ ಮಿರ್ಝಾ ನಾಸಿರ್ ಅಹ್ಮದ್ ಸಾಹೇಬರ ನೇತೃತ್ವದಲ್ಲಿ ಮೂರು ಸಾವಿರಕ್ಕಿಂತ ಮಿಕ್ಕಿ ಅಹ್ಮದಿಯರು ಈದ್ ಪ್ರಾರ್ಥನೆ ಸಲ್ಲಿಸಿದರು. ಪ್ರಾರ್ಥನೆಯ ನಂತರದ ಖುತ್‌ಬಾ ಭಾಷಣದಲ್ಲಿ ಖಲೀಫರು ಎಲ್ಲರಿಗೂ ಈದ್ ಶುಭಾಶಯಗಳನ್ನು ನೀಡಿ ಅವರಿಗೆ ಅಲ್ಲಾಹನ ಅನುಗ್ರಹಗಳೂ ಕರುಣೆಯೂ ಉಂಟಾಗಲೆಂದು ಪ್ರಾರ್ಥಿಸಿದರು.

## ಜರ್ಮನ್ ಭಾಷೆಯಲ್ಲಿ ಪವಿತ್ರ ಖುರ್‌ಆನ್

ಇತ್ತೀಚೆಗೆ ಜರ್ಮನ್ ಅಹ್ಮದಿಯಾ ಮಿಶನಿನ ವತಿಯಿಂದ ಪವಿತ್ರ ಖುರ್‌ಆನಿನ ಜರ್ಮನ್ ಭಾಷಾಂತರ ಪ್ರಕಟವಾಗಿದೆ. ಆಹ್ಮದಿಯಾ ಖಲೀಫರು ಜುಲೈ 1ರಂದು ಫ್ರಾಂಕ್‌ಫರ್ಟ್ ಸಂದರ್ಶಿಸಿದಾಗ ಅದನ್ನು ಪರಿಶೀಲಿಸಿ ಸಂತೋಷ ವ್ಯಕ್ತಪಡಿಸಿದರಲ್ಲದೆ ಸೂಕ್ತ ಸಲಹೆಗಳನ್ನೂ ನೀಡಿದರು.

## ಫ್ರಾನ್ಸ್‌ನಲ್ಲಿ ಮಸೀದಿ ನಿರ್ಮಾಣ

ಫ್ರಾನ್ಸ್‌ನಲ್ಲಿ ಮಸೀದಿ ಹಾಗೂ ಮಿಶನ್ ಹೌಸಿಗೆ ಸುಮಾರು ಒಂದು ಎಕ್ರೆ ವಿಸ್ತೀರ್ಣದ ಸ್ಥಳ ಲಭಿಸಿರುವುದಾಗಿ ಅಹ್ಮದಿಯಾ ಖಲೀಫರು ಜುಲೈ 2ರಂದು ಫ್ರಾಂಕ್‌ಫರ್ಟ್‌ನಲ್ಲಿ ಹೇಳಿದರು.

## ಅಬಾದಾನ್ ಮತ್ತು ಲಾಗೋಸ್‌ನಲ್ಲಿ ಮಸೀದಿಗಳ ಉದ್ಘಾಟನೆ

ಅಗೋಸ್ತು 18ರಂದು ಅಹ್ಮದಿಯಾ ಖಲೀಫರು ಪಶ್ಚಿಮ ಆಫ್ರಿಕದ ಅತಿ ದೊಡ್ಡ ದೇಶವಾದ ನೈಜೀರಿಯಾದಲ್ಲಿ ಒಂದು ವಾರದ ಪರ್ಯಟನೆಗಾಗಿ ಆಗಮಿಸಿದರು. ಲಾಗೋಸ್ ವಿಮಾನ ನಿಲ್ದಾಣದಲ್ಲಿ ಸಾವಿರಾರು ಅಹ್ಮದಿಯರೂ ಇತರರೂ ಸೇರಿ ಸ್ಫೂರ್ತಿದಾಯಕ ಘೋಷಣೆಗಳಿಂದಲೂ ತಕ್‌ಬೀರ್ ಧ್ವನಿಗಳಿಂದಲೂ ಖಲೀಫರನ್ನು ಸ್ವಾಗತಿಸಿದರು.

ಅಗೋಸ್ತು 20ರಂದು ಖಲೀಫರು ಅಬಾದಾನಿನಲ್ಲಿ ಒಂದು ಮಸೀದಿಯ ಉದ್ಘಾಟನೆ ಮಾಡಿದರು. ಆ ಸಂದರ್ಭದಲ್ಲಿ ಸುಮಾರು ಮೂರು ಸಾವಿರ ಅಹ್ಮದಿಯರು ಸೇರಿದ್ದರು.

ಅಗೋಸ್ತು 21ರಂದು ಖಲೀಫರು ಲಾಗೋಸ್ ಅಹ್ಮದಿಯಾ ಪ್ರಚಾರ ಕೇಂದ್ರವನ್ನೂ ಮುದ್ರಣಾಲಯವನ್ನೂ ಸಂದರ್ಶಿಸಿದರು. ಅದೇ ದಿನ ಲಾಗೋಸ್‌ನಲ್ಲಿ ಹೊಸ ಒಂದು ಮಸೀದಿಯನ್ನು ಉದ್ಘಾಟಿಸಿದರು. ಸಾವಿರದ ಐನೂರು ಅಹ್ಮದಿಯರು ಆ ಸಂದರ್ಭದಲ್ಲಿ ಕೂಡಿದ್ದರು.

ಲಾಗೋಸ್‌ನ ರೇಡಿಯೋ ಮತ್ತು ಟೆಲಿವಿಶನ್ ಈ ಕಾರ್ಯಕ್ರಮಗಳನ್ನು ಬಿತ್ತರಿಸಿವೆ; ಅಲ್ಲದೆ ಪತ್ರಿಕೆಗಳು ಈ ವಾರ್ತೆಗಳನ್ನು ಪ್ರಕಟಿಸಿವೆ.

## ಘಾನಾದಲ್ಲಿ ಖಲೀಫರಿಗೆ ಸರಕಾರದ ಆತಿಥ್ಯ–ಅಕ್ರಾದಲ್ಲಿ ಮಸೀದಿ ಮತ್ತು ಪ್ರಚಾರ ಕೇಂದ್ರ

ಅಗೋಸ್ತು 24ರಂದು ಹಝ್‌ರತ್ ಖಲೀಫರು ನೈಜೀರಿಯಾದಿಂದ ಘಾನಾದ ರಾಜಧಾನಿಯಾದ ಅಕ್ರಾಕ್ಕೆ ಆಗಮಿಸಿದರು. ವಿಮಾನ ಬಂದಿಳಿದಾಗ ನಿಲ್ದಾಣದಲ್ಲಿ ಗುಂಪು ಸೇರಿದ್ದ ಸುಮಾರು ಹದಿನೈದು ಸಾವಿರ ಜನರು ಕೈಬೀಸುತ್ತಲೂ ಕರವಸ್ತ್ರಗಳನ್ನು ಬೀಸಿಕೊಂಡೂ ಘೋಷಣೆ ಮತ್ತು ತಕ್‌ಬೀರ್ ಧ್ವನಿಗಳನ್ನು ಮೊಳಗಿಸುತ್ತಾ ತಮ್ಮ ಹರ್ಷಾತಿರೇಕವನ್ನು ಪ್ರದರ್ಶಿಸುತ್ತಾ ಬಹು ದೊಡ್ಡ ಸ್ವಾಗತ ನೀಡಿದರು.

ಅಲ್ಲಿನ ಸರಕಾರ ಖಲೀಫರಿಗೆ ಸಿದ್ಧಗೊಳಿಸಿದ್ದ ಅತಿಥಿ ಗೃಹದಲ್ಲಿ ಅವರು ಪರಿವಾರ ಸಮೇತ ಉಳ ಕೊಂಡರು. ಖಲೀಫರಿಗೆ ರಾಜ್ಯದೊಳಗೆ ಸಂಚರಿಸಲಿ ಕ್ಕಾಗಿ ಸರಕಾರದ ಪರವಾಗಿ ಡ್ರೈವರ್ ಸಮೇತ ಒಂದು ಕಾರು ಮತ್ತು ಒಂದು ವಿಮಾನವನ್ನು ನೀಡಲಾಗಿತ್ತು. ಆದರೆ ಖಲೀಫರು ಕಾರನ್ನು ಮಾತ್ರ ಸ್ವೀಕರಿಸಿ ವಿಮಾನ ಬೇಡವೆಂದು ಹೇಳಿದರು.

ಅಕ್ರಾದ ಒಸುಕೇಸಿಲ್ ಎಂಬಲ್ಲಿ ಖಲೀಫರು ಅದೇ ದಿನ ಒಂದು ದೊಡ್ಡ ಅಹ್ಮದಿಯಾ ಮಸೀದಿಯನ್ನು ಉದ್ಘಾಟಿಸಿದರು. ಅಲ್ಲದೆ, ನಾಲ್ಕು ಮಹಡಿಗಳುಳ್ಳ ಅಹ್ಮದಿಯಾ ಪ್ರಚಾರ ಕೇಂದ್ರದ ಸ್ಮಾರಕ ಫಲಕವನ್ನು ಅನಾವರಣ ಗೊಳಿಸಿದರು. ಖಲೀಫರ ಇಂಗ್ಲಿಷ್ ಭಾಷಣವನ್ನು ಘಾನಾದ ಪ್ರಾದೇಶಿಕ ಭಾಷೆಯಾದ ಅಕಾನ್ (Akan)ನಲ್ಲಿ ಇತಿಯೋಪಿಯಾದ ಘಾನಾ ರಾಯಭಾರಿಯಾದ ಇಸ್ಮಾಯಿಲ್ ಕೆ. ಅಧು ಅವರು ಭಾಷಾಂತರಿಸಿದರು.

## ಸಾಲ್ಟ್‌ಪೋಂಡ್‌ನಲ್ಲಿ ಜುಮಾ ಪ್ರಾರ್ಥನೆಗೆ 25 ಸಾವಿರ ಅಹ್ಮದಿಯರು

ಆಗೋಸ್ತು 29ರಂದು ಅಕ್ರಾ ಸ್ಟೇಟ್ ಗೆಸ್ಟ್ ಹೌಸಿನಿಂದ ಖಲೀಫರೂ ಪರಿವಾರವೂ ಹೊರಟು ಮಧ್ಯಾಹ್ನ ಹೊತ್ತಿಗೆ ಸಾಲ್ಟ್‌ಪೋಂಡ್ ತಲಪಿದರು. ಜುಮಾ ಪ್ರಾರ್ಥನೆಗೆ ಏರ್ಪಾಟು ಮಾಡಿದ ಸ್ಥಳದಲ್ಲಿ ಖಲೀಫರ ನೇತೃತ್ವದಲ್ಲಿ ಪ್ರಾರ್ಥನೆ ಸಲ್ಲಿಸಲ್ಪಟ್ಟಿತು. ಅದರಲ್ಲಿ ಇಪ್ಪತ್ತೈದು ಸಾವಿರಕ್ಕಿಂತ ಮಿಕ್ಕ ಅಹ್ಮದಿ ಯರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ, ಒಬ್ಬಂ ಟಿಗನಾಗಿ ಅಲ್ಲಿಗೆ ಬಂದು ಹಲವಿಧ ಕಷ್ಟನಷ್ಟಗಳನ್ನು ಸಹಿಸಿ ಮತಪ್ರಚಾರ ಮಾಡಿದ ಮೌಲಾನಾ ಅಬ್ದುರ್ರಹೀಂ ನಯ್ಯರ್ ಸಾಹೇಬರನ್ನು ಸ್ಮರಿಸಲಾಯಿತು.

## ಇಂಗ್ಲೆಂಡಿನಲ್ಲಿ 5 ಅಹ್ಮದಿಯಾ ಹೊಸ ಪ್ರಚಾರ ಕೇಂದ್ರಗಳು

ವಿದೇಶ ಸಂಚಾರದಲ್ಲಿರುವ ಅಹ್ಮದಿಯಾ ಖಲೀಫ ರಾದ ಹಜ್ರತ್ ಮಿರ್ಝಾ ನಾಸಿರ್ ಅಹ್ಮದ್ ಸಾಹೇ ಬರು ಇಂಗ್ಲೆಂಡಿನ ಪೂರ್ವ ಪ್ರದೇಶಗಳಲ್ಲಿ ನಿರ್ಮಿಸ ಲ್ಪಟ್ಟ ಹೊಸ ಐದು ಅಹ್ಮದಿಯಾ ಪ್ರಚಾರ ಕೇಂದ್ರ ಗಳನ್ನು ಉದ್ಘಾಟಿಸಲಿಕ್ಕಾಗಿ ಸಪ್ಟೆಂಬರ್ 30ರಂದು ಪರಿವಾರ ಸಮೇತ ಲಂಡನ್ ಮಸೀದಿಯಿಂದ ಹೊರ ಟರು.

### ದಾರುಲ್ ಅಮಾನ್ – ಮಾಂಚೆಸ್ಟರ್

ಖಲೀಫರು ಸಂಜೆ 7 ಗಂಟೆಗೆ ಮಾಂಚೆಸ್ಟರ್ ತಲ ಪಿದರು. ಪ್ರೆಸಿಡೆಂಟ್ ಅನ್ವರುಲ್ ಹಕ್ ಮತ್ತು ಮಸೀದಿ ಸಮಿತಿಯ ನಾಸಿರ್ ಮುಬಾಶಿರ್, ಅಬ್ದುಲ್ ಹಕ್ ಮತ್ತು ಮಕ್ಸೂದ್ ಅಹ್ಮದ್ ಇವರು ಖಲೀಫ ರನ್ನು ಸ್ವಾಗತಿಸಿದರು.

ಮಗ್‌ರಿಬ್ ಪ್ರಾರ್ಥನೆಯನ್ನು ಅನುಷ್ಠಿಸಿಕೊಂಡು ಖಲೀಫರು ಮಿಶನ್ ಕೇಂದ್ರವನ್ನು ಉದ್ಘಾಟಿಸಿದರು. ಆ ಬಳಿಕ ಸಭಿಕರನ್ನು ಉದ್ದೇಶಿಸಿ ಮಾತನಾಡಿದರು. ಏಕ ದೈವೋಪಾಸನೆಗಾಗಿ ಮಸೀದಿಯು ಎಲ್ಲರಿಗೂ ತೆರೆ ದಿರಿಸಲ್ಪಟ್ಟಿದೆಯೆಂದು ಅವರು ಸಾರಿದರು.

ಕೊನೆಗೆ ಚಹಾ ಸತ್ಕಾರ ನೀಡಲಾಯಿತು.

### ನಾಸಿರ್ ಮಸೀದಿ – ಹಡ್ಡರ್ಸ್‌ಫೀಲ್ಡ್

ಮಾಂಚೆಸ್ಟರ್ ಮಿಶನ್ ಕೇಂದ್ರದಿಂದ ಹಡ್ಡರ್ಸ್‌ ಫೀಲ್ಡ್‌ಗೆ ಖಲೀಫರು ಆಗಮಿಸಿದರು.

ಒಂದು ಮಾಳಿಗೆಯ ವಿಶಾಲವಾದ ಕಟ್ಟಡವನ್ನು ಅಲ್ಲಿ ಪ್ರಾರ್ಥನೆಗಾಗಿಯೂ ಇತರ ಆವಶ್ಯಕತೆಗಳಿಗಾಗಿ ಯೂ ನಿರ್ಮಿಸಲಾಗಿದೆ. ಮೌಲಾನ ಶೈಕ್ ಮುಬಾ ರಕ್ ಅಹ್ಮದ್ ಅವರು ಖಲೀಫರನ್ನು ಸ್ವಾಗತಿಸಲು ಸಾಲಾಗಿ ನಿಂತಿದ್ದ ಅಹ್ಮದೀಯರ ಪರಿಚಯ ಮಾಡಿ ಕೊಟ್ಟರು.

ಇಶಾ ಪ್ರಾರ್ಥನೆಯನ್ನು ಸಲ್ಲಿಸಿಕೊಂಡು ಖಲೀ ಫರು ಮಿಶನ್ ಕೇಂದ್ರದ ಉದ್ಘಾಟನೆ ಮಾಡಿದರು. ಆದರ ನಂತರ ಭಾಷಣ ಮಾಡಿದರು. ಸದಸ್ಯರ ಹಲವು ಪ್ರಶ್ನೆಗಳನ್ನು ಅವರು ಉತ್ತರಿಸಿದರು.

### ಬೈತುಲ್ ಹಮ್ದ್ – ಬ್ರಾಡ್‌ಫೋರ್ಡ್

ಒಕ್ಟೋಬರ್ 2ರಂದು ಖಲೀಫರು ಡಾ! ಹಮೀ ದುಲ್ಲಾ ಅವರ ನಿವಾಸದಿಂದ 30 ಕಾರುಗಳ ಅಂಗರಕ್ಷೆ ಯಲ್ಲಿ ಬ್ರಾಡ್‌ಫೋರ್ಡ್ ಅಹ್ಮದಿಯಾ ಕೇಂದ್ರವನ್ನು ತಲುಪಿದರು. ಡೆಪ್ಯುಟಿ ಮೇಯರ್, ನ್ಯಾಶನಲ್ ಪ್ರೆಸಿ ಡೆಂಟ್ ಎ. ಎ. ದೀನ್, ಸ್ಥಳೀಯ ಜಮಾಅತ್ ಪ್ರೆಸಿ

ಡೆಂಟ್ ಮುಶ್ತಾಕ್ ಅಹ್ಮದ್, ನ್ಯಾಶನಲ್ ಖಾಯಿದ್ ಅಸ್ಲಂ ಜಾವೇದ್ ಎಂಬಿವರು ಖಲೀಫರನ್ನು ಇದಿರುಗೊಂಡರು. ಖಲೀಫರು ಕಟ್ಟಡದ ಮುಖ್ಯ ದ್ವಾರದ ಸಮೀಪವಿರಿಸಿದ ಸ್ಮಾರಕ ಫಲಕವನ್ನು ಅನಾವರಣ ಗೈದು ಉದ್ಘಾಟನೆಯನ್ನು ನೆರವೇರಿಸಿದರು.

ಮೌಲಾನಾ ಶೈಕ್ ಮುಬಾರಕ್ ಅಹ್ಮದ್ ಸಾಹೇಬರು ಸ್ವಾಗತ ಭಾಷಣ ಮಾಡಿದರು. ಡೆಪ್ಯುಟಿ ಮೇಯರರು ತನ್ನ ಭಾಷಣದಲ್ಲಿ ಖಲೀಫರವರನ್ನು "ಶಾಂತಿದೂತ" ಎಂದು ಕರೆದರು. ಖಲೀಫರು ಉದ್ಘಾಟನೆಯ ಬಳಿಕ ಪತ್ರಕರ್ತರನ್ನು ಉದ್ದೇಶಿಸಿ ಮಾತನಾಡಿದರು. ಯೋರ್ಕ್ ಶೈರ್‌ನ ಟಿ. ವಿ. ಪ್ರತಿನಿಧಿಯೂ ಅಲ್ಲಿ ಹಾಜರಿದ್ದರು. ಪತ್ರಕರ್ತರ ಅನೇಕ ಪ್ರಶ್ನೆಗಳನ್ನು ಖಲೀಫರು ಉತ್ತರಿಸಿದರು.

### ದಾರುಸ್ಸಲಾಂ – ಸೌತ್‌ಹಾಲ್

ಅಕ್ಟೋಬರ್ 18ರಂದು ಖಲೀಫರು ಸೌತ್ ಹಾಲ್ ಮಿಶನ್ ಸೆಂಟರನ್ನು ಉದ್ಘಾಟಿಸಿದರು. ಆ ಸಂದರ್ಭದಲ್ಲಿ ಅನೇಕ ಅಹ್ಮದೀಯೇತರ ಅತಿಥಿಗಳೂ ಪತ್ರ ಪ್ರತಿನಿಧಿಗಳೂ ಹಾಜರಿದ್ದರು. ಅಹ್ಮದಿಯಾ ಚಟುವಟಿಕೆಗಳ ಬಗ್ಗೆ ಹಾಗೂ ಸಾಮಾಜಿಕ ಮತ್ತು ರಾಜಕೀಯ ಸಮಸ್ಯೆಗಳ ಕುರಿತು ಪತ್ರಿಕೋದ್ಯಮಿಗಳು ಕೇಳಿದ ಅನೇಕ ಪ್ರಶ್ನೆಗಳಿಗೆ ಖಲೀಫರು ಸಮಂಜಸವಾಗಿ ಉತ್ತರ ನೀಡಿದರು.

### ದಾರುಲ್ ಬರಕಾತ್ – ಬರ್ಮಿಂಗಾಮ್

ಅನಿವಾರ್ಯ ಕಾರಣದಿಂದಾಗಿ ಬರ್ಮಿಂಗಾಮ್ ಮಿಶನ್ ಕೇಂದ್ರವನ್ನು ಉದ್ಘಾಟಿಸುವರೆ ಖಲೀಫರಿಗೆ ಹೋಗಲಿಕ್ಕಾಗಲಿಲ್ಲ. ಆದ್ದರಿಂದ ಸೌತ್‌ಹಾಲ್ ಮಿಶನ್ ಕೇಂದ್ರವನ್ನು ಉದ್ಘಾಟಿಸಿದ ದಿನವೇ ಬರ್ಮಿಂಗ್‌ಹಾಮಿನ ಮಿಶನ್ ಕೇಂದ್ರದ ಉದ್ಘಾಟನೆಯನ್ನು ಸಹ ಖಲೀಫರು ಘೋಷಿಸಿದರು.

## ಗಾಂಬಿಯಾದಲ್ಲಿ ಅಹ್ಮದಿಯಾ ಆಸ್ಪತ್ರೆ

ಅಕ್ಟೋಬರ್ ತಾರೀಕು 3ರಂದು ಗಾಂಬಿಯಾದ ಅಧ್ಯಕ್ಷ ಮೂಸಾ ಕಮಾರಾ ಅವರು ಅಹ್ಮದಿಯಾ ವತಿಯಿಂದ ನಿರ್ಮಿಸಲ್ಪಡುವ ಒಂದು ಆಸ್ಪತ್ರೆಗೆ ಶಿಲಾನ್ಯಾಸ ಮಾಡಿದರು. ಈ ಸಂದರ್ಭದಲ್ಲಿ ಆಗಮಿಸಿದ ಅತಿಥಿಗಳನ್ನು ಗಾಂಬಿಯಾದ ಅಹ್ಮದಿಯಾ ಘಟಕದ ಅಮೀರ್ ಸ್ವಾಗತಿಸಿದರು. ಅಹ್ಮದಿಯರು ಮಾಡುವ ಜನಸೇವೆಗಾಗಿ ಅಧ್ಯಕ್ಷರು ಅವರನ್ನು ಅಭಿನಂದಿಸಿದರು.

## ಜಪಾನಿನಲ್ಲಿ "ವಾಯ್ಸ್ ಓಫ್ ಇಸ್ಲಾಂ"

ಜಪಾನಿನ ಅಹ್ಮದಿಯಾ ಘಟಕದ ವತಿಯಿಂದ "ವಾಯ್ಸ್ ಓಫ್ ಇಸ್ಲಾಂ" ಎಂಬ ಒಂದು ಹೊಸ ತ್ರೈಮಾಸ ಪತ್ರಿಕೆ ಪ್ರಾರಂಭಗೊಂಡಿದೆ. ಅದರ ಪ್ರಥಮ ಸಂಚಿಕೆ ಜುಲಾಯಿ ತಿಂಗಳಲ್ಲಿ ಹೊರಬಂದಿದೆ. ಜಪಾನಿನ ಅಹ್ಮದಿಯಾ ಮಿಶನರಿ ಅತಾವುಲ್ ಮುಜೀಬ್ ರಾಶಿದ್ ಸಾಹೇಬರು ಅದರ ಸಂಪಾದಕರಾಗಿದ್ದಾರೆ. ಈ ಪತ್ರಿಕೆ ಇಂಗ್ಲಿಷ್ ಮತ್ತು ಜಪಾನಿ ಭಾಷೆಗಳಲ್ಲಿ ಪ್ರಕಟಗೊಳ್ಳುತ್ತಿದೆ.

## ಕೆನಡಾದ ಗವರ್ನರ್ ಜನರಲ್‌ಗೆ ಖುರ್‌ಆನ್ ಪಾರಿತೋಷಕ

ಕೆನಡಾದ ಗವರ್ನರ್ ಜನರಲ್ ಎಡ್ವಡ್ ಶ್ರಾಯೆರ್ ಅವರಿಗೆ ಇತ್ತೀಚೆಗೆ ಕೆನಡಾ ಅಹ್ಮದಿಯಾ ಘಟಕದ ಅಧ್ಯಕ್ಷ ಡಾಕ್ಟರ್ ಏಜಾಝ್ ಅಹ್ಮದ್ ಕಮರ್ ಅವರು ಖುರ್‌ಆನಿನ ಇಂಗ್ಲಿಷ್ ಭಾಷಾಂತರವನ್ನೂ ಕೆಲವು ಸಾಹಿತ್ಯಗಳನ್ನೂ ಕೊಡುಗೆಯಿತ್ತಿರುವರೆಂದು ತಿಳಿದುಬಂದಿದೆ.

## ಫಾರೂಕ್ ಅಹ್ಮದ್‌ರಿಗೆ ಪಿ. ಎಚ್. ಡಿ.

ಸಿಕಂದರಾಬಾದ್ ಅಹ್ಮದಿಯಾ ಘಟಕದ ಸದಸ್ಯರಾದ ಫಾರೂಕ್ ಅಹ್ಮದ್‌ರವರು ಉಸ್ಮಾನಿಯಾ ಯುನಿವರ್ಸಿಟಿ (ಹೈದರಾಬಾದ್)ಯಿಂದ "ಎಸ್ಟ್ರೊನಮಿ ಎಂಡ್ ಎಸ್ಟ್ರೊಫಿಸಿಕ್ಸ್" ಎಂಬ ವಿಷಯದಲ್ಲಿ ಪಿ. ಎಚ್. ಡಿ. ಪದವಿ ಪಡೆದಿರುವರೆಂದು ತಿಳಿದು ಬಂದಿದೆ.

## ಪೂಂಛ್‌ನಲ್ಲಿ ಸಮ್ಮೇಳನ

ಸಪ್ಟೆಂಬರ್ 6, 7 ತಾರೀಕುಗಳಲ್ಲಿ ಪೂಂಛ್‌ನ ಅಹ್ಮದಿಯಾ ಮಸೀದಿ ಮಠಾರದಲ್ಲಿ ದ್ವಿದಿನ ಸಮ್ಮೇಳನ ಜರಗಿತು. ಪ್ರಥಮ ದಿನದ ಸಭೆ ಮೀರ್ ಗುಲಾಂ ಮುಹಮ್ಮದ್ ಸಾಹೇಬರ ಅಧ್ಯಕ್ಷತೆಯಲ್ಲಿ ನಡೆಯಿತು.

ದ್ವಿತೀಯ ದಿನ ಮೌಲಾನ ಬಶೀರ್ ಅಹ್ಮದ್ ಸಾಹೇಬರ ಅಧ್ಯಕ್ಷತೆಯಲ್ಲಿ ಸರ್ವಧರ್ಮ ಸಮ್ಮೇಳನ

ಜರಗಿತು. ಮೌಲಾನ ಶರೀಫ್ ಅಹ್ಮದ್ ಅಮೀನಿ, ಮೌಲವಿ ಮುಹಮ್ಮದ್ ಅಯೂಬ್, ಸರ್ದಾರ್ ಸಾಧೂ ಸಿಂಘ್, ಶ್ರೀ ಜಗದೀಶ್, ಡಾ। ಗುರುದಯಾಲ್ ಸಿಂಘ್ ಮೊದಲಾದವರು ಭಾಷಣ ಮಾಡಿದರು.

## ಶ್ರೀನಗರದಲ್ಲಿ ಸಮ್ಮೇಳನ ಮತ್ತು ಮಸೀದಿ ಉದ್ಘಾಟನೆ

ಸಪ್ಟೆಂಬರ್ 21, 22 ತಾರೀಕುಗಳಲ್ಲಿ ಶ್ರೀನಗರದಲ್ಲಿ ಅಖಿಲ ಕಾಶ್ಮೀರ ಅಹ್ಮದಿಯಾ ಮುಸ್ಲಿಂ 7ನೇ ವಾರ್ಷಿಕ ಸಮ್ಮೇಳನ ಮಿರ್ಝಾ ವಸೀಂ ಅಹ್ಮದ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿತು.

ಮೌಲಾನ ಶರೀಫ್ ಅಹ್ಮದ್ ಅಮೀನಿ, ಪ್ರೊಫೆಸರ್ ಮುಬಾರಕ್ ಅಹ್ಮದ್, ಮೌಲವಿ ಅಬ್ದುರ್ರಹೀಂ, ಬಾಬೂ ಮುಹಮ್ಮದ್ ಯೂಸುಫ್, ಮುಹಮ್ಮದ್ ಹಮೀದ್, ಮೌಲವಿ ಮುಹಮ್ಮದ್ ಯೂಸುಫ್, ಮೌಲಾನ ಬಶೀರ್ ಅಹ್ಮದ್ ಮೊದಲಾದವರು ಮಾತನಾಡಿದರು.

ಮೂರು ಲಕ್ಷ ರೂಪಾಯಿ ವೆಚ್ಚದಲ್ಲಿ ಶ್ರೀನಗರದಲ್ಲಿ ನಿರ್ಮಿಸಲಾದ ಅಹ್ಮದಿಯಾ ಮಸೀದಿಯನ್ನು 21ನೇ ತಾರೀಕಿನಂದು ಪೂರ್ವಾಹ್ನ 11–30ಕ್ಕೆ ಭಾರತದ ಅಹ್ಮದಿಯಾ ಕೇಂದ್ರದ ಪ್ರಧಾನಾಧಿಕಾರಿಯಾದ ಹಝ್ರತ್ ಮಿರ್ಝಾ ವಸೀಂ ಅಹ್ಮದ್ ಸಾಹೇಬರು ಉದ್ಘಾಟನೆ ಗೈಯ್ದರು.

## ಮುಝಫರ್‌ಪುರದಲ್ಲಿ ಸಮ್ಮೇಳನ

ಅಖಿಲ ಬಿಹಾರ್ ಅಹ್ಮದಿಯಾ ಮುಸ್ಲಿಂ 3ನೇ ವಾರ್ಷಿಕ ಸಮ್ಮೇಳನವು ಅಕ್ಟೋಬರ್ 29, 30 ತಾರೀಕುಗಳಲ್ಲಿ ಸಮಾವೇಶಗೊಂಡಿತು.

ಪ್ರಥಮ ದಿನದಂದು ಸರ್ವಧರ್ಮ ಸಭೆಯು ಮೌಲಾನ ಬಶೀರ್ ಅಹ್ಮದ್ ದೆಹಲವಿ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಬಿಹಾರಿನ ಕೈಗಾರಿಕ ಸಚಿವ ಶ್ರೀ ರಾಮ್ ಆಶ್ರೇ ಪ್ರಸಾದ್ ಸಿನ್ಹಾ ಮುಖ್ಯ ಅತಿಥಿಯಾಗಿ ಆಗಮಿಸಿದ್ದರು. ಮೌಲವಿ ಅಬ್ದುರ್ರಶೀದ್, ರೆವರೆಂಡ್ ಎಚ್. ಬಿ. ರಾಂ, ಸೈಯ್ಯದ್ ಫಝ್ಲುಲ್ ಅಹ್ಮದ್, ಸರ್ದಾರ್ ಗೋಪಾಲ್ ಸಿಂಘ್, ಆರ್. ಆರ್. ಟಂಡನ್ ಮೊದಲಾದವರು ವಿವಿಧ ಧರ್ಮಗಳ ಕುರಿತು ಮಾತನಾಡಿದರು.

ಎರಡನೆಯ ದಿನದ ಸಭೆಯ ಅಧ್ಯಕ್ಷತೆಯನ್ನು ಹಝ್ರತ್ ಮಿರ್ಝಾ ವಸೀಂ ಅಹ್ಮದ್ ಸಾಹೇಬರು ವಹಿಸಿದರು. ಸಯ್ಯದ್ ರಫೀ ಅಹ್ಮದ್, ಮೌಲಾನ ಶರೀಫ್ ಅಹ್ಮದ್ ಮೊದಲಾದವರು ಭಾಷಣವಿತ್ತರು.

## ಕಲ್ಕತ್ತದಲ್ಲಿ ಸಮ್ಮೇಳನ

ಅಖಿಲ ಬಂಗಾಳ ಅಹ್ಮದಿಯಾ ಮುಸ್ಲಿಂ ಚತುರ್ಥ ವಾರ್ಷಿಕ ಸಮ್ಮೇಳನವು ನವೆಂಬರ್ 15, 16 ತಾರೀಕುಗಳಲ್ಲಿ ಕಲ್ಕತ್ತದಲ್ಲಿ ಜರಗಿತು.

15ರಂದು ಸಂಜೆ ರಾಮಕೃಷ್ಣ ಮಿಶನ್‌ನ ಶಿವಾನಂದ ಹಾಲ್‌ನಲ್ಲಿ ಸರ್ವಧರ್ಮ ಸಮ್ಮೇಳನ ನಡೆಯಿತು. ರಾಮಕೃಷ್ಣ ಮಿಶನಿನ ಕಾರ್ಯದರ್ಶಿ ಸ್ವಾಮಿ ಲೋಕೇಶ್ವರಾನಂದ ಅಧ್ಯಕ್ಷತೆ ವಹಿಸಿದರು. ಮೌಲವಿ ಸುಲ್ತಾನ್ ಅಹ್ಮದ್ ಝಫರ್, ರೆವರೆಂಡ್ ಅಂಡ್ರೂಸ್, ಮೋಹನ್ ಸಿಂಘ್, ಡಾ। ಹೀರಾಲಾಲ್ ಛೋಪ್ರಾ, ಅಲ್ ಹಾಜ್ ಅಹ್ಮದ್ ತೌಫೀಕ್ ಚೌಧರಿ (ಬಂಗ್ಲಾದೇಶ್) ಮೊದಲಾದವರು ಮಾತನಾಡಿದರು.

ದ್ವಿತೀಯ ದಿನದ ಸಭೆ ಹಝ್ರತ್ ಮಿರ್ಝಾ ವಸೀಂ ಅಹ್ಮದ್ ಸಾಹೇಬರ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರೊಫೆಸರ್ ಅಮೀರ್ ಹುಸೇನ್ (ಬಂಗ್ಲಾದೇಶ್), ಅಲ್‌ಹಾಜ್ ಅಹ್ಮದ್ ತೌಫೀಕ್, ಸೈಯ್ಯದ್ ಮುಹಮ್ಮದ್ ನೂರ್ ಆಲಂ ಮೊದಲಾದವರು ಮಾತನಾಡಿದರು.

## ಶಹಜಾನ್‌ಪುರದಲ್ಲಿ ಸಮ್ಮೇಳನ

ನವೆಂಬರ್ 19, 20 ತಾರೀಕುಗಳಲ್ಲಿ ಉತ್ತರ ಪ್ರದೇಶ ಅಹ್ಮದಿಯಾ ಮುಸ್ಲಿಂ ಸಂಘಟನೆಯ ವತಿಯಿಂದ 14ನೇ ವಾರ್ಷಿಕ ಸಮ್ಮೇಳನ ಸಮಾವೇಶಗೊಂಡಿತು.

ಪ್ರಥಮ ದಿನ ಸರ್ವಧರ್ಮ ಸಮ್ಮೇಳನ ಜರಗಿತು. ಅಹ್ಮದಿಯಾ ಪಂಡಿತರಲ್ಲದೆ, ಆರ್. ಎಸ್. ದವರ್ಾಜಿ, ಸರ್ದಾರ್ ರೋಶನ್ ಸಿಂಘ್, ರೆವರೆಂಡ್ ಎಸ್. ಡೇಂಟಲ್ ಭಾಷಣ ಮಾಡಿದರು.

ದ್ವಿತೀಯ ದಿನ ಮೌಲವಿ ಮುಝಫರ್ ಅಹ್ಮದ್ ಝಫರ್, ಮುಹಮ್ಮದ್ ಕರೀಮುದ್ದೀನ್ ಶಾಹಿದ್,

ಮೌಲವಿ ಅಬ್ದುಲ್ ಹಕ್ ಫರ್ಖಲ್, ಮೌಲಾನಾ ಶರೀಫ್ ಅಹ್ಮದ್, ಮೌಲಾನಾ ಬಶೀರ್ ಅಹ್ಮದ್ ಮೊದಲಾದವರು ಮಾತನಾಡಿದರು.

## ಕೊಡಾಳಿಯಲ್ಲಿ ಯುವಜನ ಸಭೆ

ಸಪ್ಟೆಂಬರ್ 28ರಂದು ಕೊಡಾಳಿಯಲ್ಲಿ ಅಹ್ಮದಿಯಾ ಯುವಜನ ಸಭೆಯೊಂದು ಜರಗಿತು. ತಲಚೇರಿ, ಕಣ್ಣಾನೂರು, ಪಯ್ಯಂಗಾಡಿ, ಮೊಗ್ರಾಲ್, ಕುಂಬಳೆ, ಮಂಜೇಶ್ವರ, ಮಂಗಳೂರು, ಮಡಿಕೇರಿ ಮೊದಲಾದ ಕಡೆಗಳಿಂದ ಪ್ರತಿನಿಧಿಗಳು ಭಾಗವಹಿಸಿದ್ದರು.

ಪೂರ್ವಾಹ್ನ 10 ಗಂಟೆಗೆ ಕೇರಳ ಅಹ್ಮದಿಯಾ ಮಿಶನರಿ ಮೌಲವಿ ಅಬುಲ್ ವಫಾ ಸಾಹೇಬರು ಸಭೆಯನ್ನು ಉದ್ಘಾಟಿಸಿದರು. ಕೇರಳ ಅಹ್ಮದಿಯಾ ಕೇಂದ್ರ ಸಮಿತಿಯ ಕಾರ್ಯದರ್ಶಿ ಇ. ತಾಹಿರ್ ಸಾಹೇಬರು ಅಧ್ಯಕ್ಷತೆ ವಹಿಸಿದರು. ಎಡ್ವಕೇಟ್ ನಿಸಾರ್ ಅಹ್ಮದ್ ಮತ್ತು ಬಿ. ಮಹ್‌ಮೂದ್ ಅಹ್ಮದ್ ಎಂ.ಎ. ಭಾಷಣ ಮಾಡಿದರು.

ಅಪರಾಹ್ನ 2-30ಕ್ಕೆ ಎರಡನೆ ಅಧಿವೇಶನವು ಸದರ್ ಅಂಜುಮನ್ ಅಹ್ಮದಿಯಾ ಸದಸ್ಯ ಸಿದ್ದೀಖ್ ಅಮೀರಲಿ ಸಾಹೇಬರ ಅಧ್ಯಕ್ಷತೆಯಲ್ಲಿ ಸೇರಿತು. ಡಾ। ಮನ್ಸೂರ್ ಅಹ್ಮದ್, ಪ್ರೊಫೆಸರ್ ಎಂ. ಮುಹಮ್ಮದ್ ಮತ್ತು ಮೌಲವಿ ಮುಹಮ್ಮದ್ ಯೂಸುಫ್ ಭಾಷಣ ಮಾಡಿದರು.

ನಂತರ ಖುದ್ದಾಮುಲ್ ಅಹ್ಮದಿಯಾ ಖಾಯಿದ್‌ಗಳಾದ ಟಿ. ಅಬ್ದುಲ್ ರಶೀದ್ (ಕಣ್ಣಾನ್ನೂರು), ಸಿ. ಎಚ್. ಅಬ್ದುಲ್ ಶುಕೂರ್ (ಪಯ್ಯಂಗಾಡಿ), ಎಂ. ಪಿ. ಇಬ್ರಾಹಿಂ (ಮೊಗ್ರಾಲ್), ತಮೀಂ ಅಬ್ಬಾಸ್ (ಮಡಿಕೇರಿ), ಎನ್. ಅಬ್ದುಲ್ ಬಶೀರ್ (ತಲಚೇರಿ), ಎ. ಪಿ. ಅಬ್ದುಲ್ ಜಬ್ಬಾರ್ (ಕೊಡಾಳಿ) ಮೊದಲಾದವರು ಮಾತನಾಡಿದರು.

ಅಹ್ಮದಿ ಯುವಜನರ ಧಾರ್ಮಿಕ ಜ್ಞಾನ ಮತ್ತು ನೈತಿಕ ಸ್ಥಿತಿಗತಿಗಳು ಎಷ್ಟರ ಮಟ್ಟಗಿವೆಯೆಂಬುದನ್ನು ಅಂದಾಜು ಮಾಡಲಿಕ್ಕಾಗಿ ಒಂದು ಪರೀಕ್ಷೆ ನಡೆಸಲಾಯಿತು.

## ಮಡಿಕೇರಿಯಲ್ಲಿ ಯುವಜನ ಸಭೆ

ನವೆಂಬರ್ 16ರಂದು ಮಡಿಕೇರಿಯಲ್ಲಿ ಅಹ್ಮದಿಯಾ ಯುವಜನ ಸಭೆಯೊಂದು ಜರಗಿತು. ಮಂಗಳೂರು, ಮಂಜೇಶ್ವರ, ಕುಂಬಳೆ, ಮೊಗ್ರಾಲ್, ಕಣ್ಣಾನ್ನೂರು, ಪಯ್ಯಂಗಾಡಿ, ಕೊಡಾಳಿ ಮೊದಲಾದ ಕಡೆಗಳಿಂದ ಯುವಜನರು ಅದರಲ್ಲಿ ಭಾಗವಹಿಸಿದರು.

ಜನಾಬ್ ಇ. ತಾಹಿರ್ ಸಾಹೇಬರ ಅಧ್ಯಕ್ಷತೆಯಲ್ಲಿ ಮಧ್ಯಾಹ್ನ ವೇಳೆ ಸಭೆ ಸಮಾವೇಶಗೊಂಡಿತು. ಸಿ. ಎಚ್. ಅಬ್ದುಶ್ಶುಕೂರ್ ಅವರ ಖುರ್‌ಆನ್ ಪಾರಾಯಣದೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಪಿ. ಕೆ. ಶರೀಫ್ ಅಹ್ಮದ್ ಪ್ರತಿಜ್ಞೆ ಹೇಳಿಕೊಟ್ಟರು. ಮಡಿಕೇರಿಯ ಖಾಯಿದ್ ತಮೀಂ ಅಬ್ಬಾಸ್ ಸ್ವಾಗತ ಭಾಷಣ ಮಾಡಿದರು. ಮುಸ್ತಾಕ್ ಅಹ್ಮದ್ (ಮಡಿಕೇರಿ) ಉರ್ದು ಪದ್ಯ ಹಾಡಿದರು. ಖುರ್‌ಆನಿನ ಒಂದು ಭಾಗದ ಕನ್ನಡ ಭಾಷಾಂತರವನ್ನು ಬಶೀರ್ ಅಹ್ಮದ್ (ಮಂಜೇಶ್ವರ) ಓದಿ ಹೇಳಿದರು. ಹದೀಸಿನ ಮಲೆಯಾಳ ಭಾಷಾಂತರವನ್ನು ಮದಾರ್ ಅಬ್ದುಶ್ಶುಕೂರ್ (ಪಯ್ಯಂಗಾಡಿ) ಓದಿ ಹೇಳಿದರು.

ನಂತರ ಖಾಯಿದ್‌ಗಳಾದ ತಮೀಂ ಅಬ್ಬಾಸ್, ಎಂ. ಪಿ. ಇಬ್ರಾಹಿಂ, ಟಿ. ಅಬ್ದುಲ್ ರಶೀದ್, ಸಿ. ಎಚ್. ಅಬ್ದುಲ್ ಶುಕೂರ್, ಎ. ಪಿ. ಅಬ್ದುಲ್ ಜಬ್ಬಾರ್ ಭಾಷಣ ಮಾಡಿದರು.

ಖಾದಿಂಗಳಾದ ಹನೀಫ್ (ಮಡಿಕೇರಿ), ಕೆ. ಜೈನುದ್ದೀನ್ (ಪಯ್ಯಂಗಾಡಿ), ಇ. ಎಂ. ಅಶ್ರಫ್ (ಕಣ್ಣಾನ್ನೂರು), ಯು. ಮನ್ಸೂರ್ ಅಹ್ಮದ್ (ಕೊಡಾಳಿ), ಮೊಯ್ದೀನ್ ಕೋಯ (ಕೊಡಾಳಿ), ಬಶೀರ್ ಅಹ್ಮದ್ (ಮೊಗ್ರಾಲ್), ಜಮೀಲ್ ಅಹ್ಮದ್ (ಪಯ್ಯಂಗಾಡಿ), ಪಿ. ಅಬ್ದುಲ್ ರಹೀಂ (ಕಣ್ಣಾನ್ನೂರು), ಬಶೀರ್ ಅಹ್ಮದ್ (ಕೋಯನಾಡು), ಕೆ. ಕೆ. ಬದ್ರುದ್ದೀನ್ (ಮಂಗಳೂರು), ಬಿ. ಅಬ್ದುನ್ನಾಸಿರ್ (ಪಯ್ಯಂಗಾಡಿ), ಸಲೀಂ ಅಹ್ಮದ್ (ಮಡಿಕೇರಿ), ಸಿ. ಎಚ್. ಅಬ್ದುಲ್ ರಹಿಮಾನ್ (ಕೊಡಾಳಿ), ನಾಸಿರ್ ಅಹ್ಮದ್ (ಕೋಯನಾಡು), ಕೆ. ಪಿ. ಬಶೀರ್ ಅಹ್ಮದ್ (ಕಣ್ಣಾನ್ನೂರು), ಮುಹಮ್ಮದ್(ಮಟ್ಟನ್ನೂರು) ಎಂಬಿವರು ಕನ್ನಡ, ಮಲೆಯಾಳಂ, ಉರ್ದು, ಇಂಗ್ಲಿಷ್ ಇತ್ಯಾದಿ ಭಾಷೆಗಳಲ್ಲಿ ಮಾತನಾಡಿದರು.

ತದನಂತರ ಮೌಲವಿ ಮುಹಮ್ಮದ್ ಯೂಸುಫ್ ಸಾಹೇಬರು ಇಮಾಂ ಮಹದಿ, ದಜ್ಜಾಲ್, ಯಅಜೂಜ್ ಮಅಜೂಜ್ ಎಂಬೀ ವಿಷಯದಲ್ಲಿ ಭಾಷಣ

ಮಾಡಿದರು. ಯುವಕರು ಆಧ್ಯಾತ್ಮಿಕದೆಡೆಗೆ ಹೆಚ್ಚಿನ ಗಮನ ಕೊಡಬೇಕೆಂದು ಮೌಲವಿ ಯು. ಅಬೂಬಕ್ಕರ್ ಸಾಹೇಬ್ ತನ್ನ ಭಾಷಣದಲ್ಲಿ ಹೇಳಿದರು.

ಪಿ. ಅಬ್ದುಲ್ ರಹೀಂ ಕೊನೆಗೆ ಕೃತಜ್ಞತೆ ಸಲ್ಲಿಸಿದರು. ರಾತ್ರಿ 8-30ಕ್ಕೆ ಸಭೆ ಕೊನೆಗೊಂಡಿತು.

## ಕಡಲಾಯಿಯಲ್ಲಿ ಯುವಜನ ವಿಚಾರ ಸಂಕಿರಣ

ಡಿಸೆಂಬರ್ 28ರಂದು ಕಣ್ಣಾನ್ನೂರಿನಿಂದ ಸುಮಾರು 8 ಕಿ. ಮಿ. ದೂರವಿರುವ ಕಡಲಾಯಿಯಲ್ಲಿ "ದೈವ ವಿಶ್ವಾಸ ಮತ್ತು ಮನುಷ್ಯ ಜೀವಿತ" ಎಂಬ ವಿಷಯದಲ್ಲಿ ವಿಚಾರ ಸಂಕಿರಣವೊಂದನ್ನು ಸ್ಥಳೀಯ ಅಹ್ಮದಿಯಾ ಘಟಕದ ವತಿಯಿಂದ ಏರ್ಪಡಿಸಲಾಗಿತ್ತು. ಕಣ್ಣಾನ್ನೂರು, ಕೂಡಾಳಿ, ಪಯಂಗಾಡಿ, ತಲಚೇರಿ, ಕುಂಬಳೆ, ಮೊಗ್ರಾಲ್, ಮಂಜೇಶ್ವರ, ಮಂಗಳೂರು ಮುಂತಾದ ಕಡೆಗಳಿಂದ ಯುವಜನರು ಭಾಗವಹಿಸಿದರು.

ಪೂರ್ವಾಹ್ನ 11 ಗಂಟೆಗೆ ಸಿದ್ದೀಖ್ ಅಮೀರಲಿ ಸಾಹೇಬರ ಅಧ್ಯಕ್ಷತೆಯಲ್ಲಿ ಪ್ರಥಮ ಅಧಿವೇಶನ ಜರಗಿತು. ಸಾಲಿಹ್ ಸಾಹೇಬರು ಸ್ವಾಗತಿಸಿದರು. ಎನ್. ಕುಞ್ಞಿ ಅಹ್ಮದ್ (ಹೆಡ್ ಮಾಸ್ಟರ್) ಅವರು ಹಝ್ರತ್ ಅಹ್ಮದರು ಮುಹಮ್ಮದ್ ರಸೂಲ್ (ಸ.)ರನ್ನು ಶ್ಲಾಘಿಸಿ ಬರೆದ ಅರಬಿ ಕವಿತೆಯನ್ನು ಸುಶ್ರಾವ್ಯವಾಗಿ ಹಾಡಿದರು. ಪ್ರೊಫೆಸರ್ ಎಂ. ಮುಹಮ್ಮದ್ ಸಾಹೇಬರು ಉದ್ಘಾಟನಾ ಭಾಷಣ ಮಾಡಿದರು. ಅಧ್ಯಕ್ಷರ ಭಾಷಣದ ಬಳಿಕ ಇ. ತಾಹಿರ್ ಮಾತನಾಡಿದರು.

ಅಪರಾಹ್ನ 2-30ಕ್ಕೆ ಇ. ತಾಹಿರ್ ಸಾಹೇಬರ ಅಧ್ಯಕ್ಷತೆಯಲ್ಲಿ ಸೇರಿದ ಎರಡನೆ ಅಧಿವೇಶನದಲ್ಲಿ ಎನ್. ಅಬ್ದುಲ್ ಬಶೀರ್ (ತಲಚೇರಿ), ವಿ. ಪಿ. ಅಬ್ದುಲ್ ಜಬ್ಬಾರ್ (ಕೂಡಾಳಿ), ಕೆ. ಕೆ. ಬದ್ರುದ್ದೀನ್ (ಮಂಗಳೂರು), ಸಿ. ಎಚ್. ಅಬ್ದುಲ್ ಶುಕೂರ್ (ಪಯಂಗಾಡಿ), ಬಶೀರ್ ಅಹ್ಮದ್ ಸಿದ್ದೀಖ್ (ಮೊಗ್ರಾಲ್), ಇ. ಎಂ. ಅಶ್ರಫ್, ಮೌಲವಿ ಎನ್. ಮೊಯ್ದಿನ್ ಸಾಹೇಬ್ ಮೊದಲಾದವರು ಮಾತನಾಡಿದರು.

---

# ★ ಸಂಪಾದಕರಿಗೆ ಪತ್ರ ★

ನಾನು ನಿಮ್ಮ "ಯುಗರಶ್ಮಿ" ಪತ್ರಿಕೆಯನ್ನು ಆಗಿಂದಾಗ್ಗೆ ಓದುತ್ತಿರುತ್ತೇನೆ. ನಿಮ್ಮ ಪತ್ರಿಕೆ ಚೆನ್ನಾಗಿದೆ. ಅಂದವಾದ, ತಪ್ಪಿಲ್ಲದ ಮುದ್ರಣಗಳಿಂದ ಕೂಡಿ, ಸುಲಭ ಶೈಲಿಯಲ್ಲಿ, ಅದರಲ್ಲಿ ಇಸ್ಲಾಂ ತತ್ವಗಳು ಎಲ್ಲರಿಗೂ ಅರ್ಥವಾಗುವಂತೆ ಸರಳವಾಗಿ ಬರುತ್ತಿದ್ದು ನಮಗೆ ಸುಲಭವಾಗಿ ತಿಳಿಯುವಂತಾಯಿತು.........

ಚಿಕ್ಕಮಗಳೂರು.

—ಎ. ಎನ್. ಸ್ವಾಮಿ
ಸಾಹಿತಿ, ಪತ್ರಕರ್ತ.

●

ತಾವು ಇಸ್ಲಾಂ ಧರ್ಮದ ಬಗ್ಗೆ ಹಲವಾರು ವಿಷಯಗಳನ್ನು ಕನ್ನಡದಲ್ಲಿ "ಯುಗರಶ್ಮಿ" ಪತ್ರಿಕೆಯ ಮುಖಾಂತರ ಪ್ರಚಾರ ಪಡಿಸಿ, ಉರ್ದು ಹಾಗೂ ಅರಬಿಯಲ್ಲಿರುವ ಇಸ್ಲಾಂ ಧರ್ಮದ ವಿಷಯಗಳನ್ನು ತಿಳಿಯದಿರುವ ಜನಾಂಗಕ್ಕೆಲ್ಲಾ ಉಪಕಾರ ಮಾಡಿದ್ದೀರಿ. ಜನರ ಮೂಢನಂಬಿಕೆ, ಅನ್ಯಾಯ, ಅತ್ಯಾಚಾರ, ನೀಚ ಪ್ರವೃತ್ತಿಗಳನ್ನು ತೊಡೆದು ಹಾಕಿ ನಿಜ ಮಾನವ ಜೀವನ ಸಾಗಿಸಲು ಸಹಾಯ ಮಾಡುತ್ತಿರುವ ನಿಮ್ಮ ಕಾರ್ಯವನ್ನು ಮನಸಾರೆ ಮೆಚ್ಚಿದ್ದೇನೆ.........

ಬೆಣ್ಣೆಹಳ್ಳಿ.

ಡಾ। ಬಿ. ಪಿ. ಯಮುನೂರ್ ಸಾಹೇಬ್

ಮುಹಮ್ಮದ್ ಪೈಗಂಬರರ ಪವಿತ್ರ ತತ್ವಗಳನ್ನು ಹೊತ್ತು ತಂದ "ಯುಗರಶ್ಮಿ" ಧಾರ್ಮಿಕ ಪತ್ರಿಕೆಯನ್ನು ನೋಡಿ ನನಗೆ ಬಹಳ ಆನಂದವಾಯಿತು. ಕೇವಲ ಮತೀಯರ ಬಂಧನದಲ್ಲಿ ಸಿಲುಕಿದ ಪವಿತ್ರ ಗ್ರಂಥಗಳಲ್ಲಿಯ ತಿರುಳು ಸಾರ್ವಜನಿಕರಿಗೆ ತಿಳಿಯಪಡಿಸುವ ಮಹೋನ್ನತ ಕಾರ್ಯವನ್ನು ತಾವು ಕೈಗೊಂಡಿರುವುದು ನಿಜಕ್ಕೂ ಸಂತೋಷದ ಸಂಗತಿ.........

ಬಳ್ಳಾರಿ. —ಕೆ. ಬಿ. ಸಿದ್ದಲಿಂಗಪ್ಪ

●

"ಯುಗರಶ್ಮಿ" ತ್ರೈಮಾಸಿಕ ಓದುಗರಲ್ಲಿ ನಾನೂ ಒಬ್ಬ. ನಿಮ್ಮ ಪತ್ರಿಕೆಯ ಅಕ್ಟೋಬರ್ ಸಂಚಿಕೆಯಲ್ಲಿ ಮೂಡಿ ಬಂದ ಮುಕ್ತಿಮಾರ್ಗ, ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು, ಪ್ರವಾದಿತ್ವದ ಬಗ್ಗೆ ಅಲ್ಲಾಹನ ಕರಾರು ಮತ್ತು ಮೌದೂದಿ ವ್ಯಾಖ್ಯಾನ ಚೆನ್ನಾಗಿದೆ.

ಇಂಡಿ. —ರಜನಿಕಾಂತ

●

ನಿಮ್ಮ "ಯುಗರಶ್ಮಿ" ಪತ್ರಿಕೆಯನ್ನು ಓದಿ ನನಗೆ ಬಹಳ ಸಂತೋಷವಾಗಿದೆ. ಅದರಲ್ಲಿ ಬರುವಂತಹ ಲೇಖನಗಳು ಜ್ಞಾನಪೂರ್ಣವಾಗಿವೆ.

ಬಿಜಾಪುರ. —ಎಂ. ಐ. ಸುಲ್ತಾನ್‌ಪುರ್

●

ತಮ್ಮ ಯುಗರಶ್ಮಿ ತ್ರೈಮಾಸಿಕವನ್ನು ನೋಡಿ ನಮಗೆ ತುಂಬಾ ಸಂತೋಷವಾಯಿತು. ಮಿರ್ಝಾ ಗುಲಾಂ ಅಹ್ಮದ್ ಅವರ ಜೀವನ ಚರಿತ್ರೆಯನ್ನು, ಅವರಿಗೆ ನುಬುವ್ವತ್ ಲಭಿಸಿದ ವಿವರವನ್ನು ಸಂಪೂರ್ಣವಾಗಿ ಪ್ರಕಟಿಸುವಿರೆಂದು ಆಶಿಸೋಣವೇ ?

ಊರು ಸೂಚಿಸಿಲ್ಲ. —ಉಸ್ಮಾನ್ ಮತ್ತು ಹನ್ನೆರಡು ಸಹೋದರರು

●

ತಮ್ಮ ಯುಗರಶ್ಮಿ ತ್ರೈಮಾಸಿಕದಲ್ಲಿನ ಪ್ರತಿಯೊಂದು ಲೇಖನವೂ ನನ್ನನ್ನು ಸಂತೋಷಗೊಳಿಸಿತು. ಅಹ್ಮದಿಯಾ ಸಂಘಟನೆಯ ಬಗ್ಗೆ ಧಾರ್ಮಿಕ ಸಂದೇಶವನ್ನು ಕನ್ನಡಿಗರಿಗೆ ಮುಟ್ಟಿಸುವ ಈ ಪುಣ್ಯಕಾರ್ಯದಲ್ಲಿ ತೊಡಗಿದ ತಮಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳು. ಹಝ್‌ರತ್ ಮಿರ್ಝಾ ಗುಲಾಂ ಅಹ್ಮದ್ ಅವರ ಜೀವನ ಚರಿತ್ರೆಯನ್ನೂ ಅವರು ಹುಟ್ಟಿದ ಊರು, ಅವರ ಬಾಲ್ಯದ ಸ್ಥಿತಿಗತಿ, ವಿದ್ಯಾಭ್ಯಾಸ, ಇಂಬಿತ್ಯಾದಿ ವಿಷಯಗಳನ್ನು ಮಾತ್ರವಲ್ಲ ಅವರಿಗೆ ಪ್ರವಾದಿತ್ವ ಲಭಿಸಿದ್ದು ಎಷ್ಟು ವಯಸ್ಸಿನಲ್ಲಿ ಎಂದೂ ಸಂಪೂರ್ಣವಾಗಿ ಯುಗರಶ್ಮಿಯಲ್ಲಿ ಪ್ರಕಟಿಸಬೇಕಾಗಿ ಕೇಳಿಕೊಳ್ಳುತ್ತೇವೆ.

ಊರು ಸೂಚಿಸಿಲ್ಲ. —ಅಬೂಬಕ್ಕರ್

●

ಇತ್ತೀಚೆಗೆ ಹೊರ ಬರಲು ತೊಡಗಿದ ನಿಮ್ಮ "ಯುಗರಶ್ಮಿ" ಸಂಚಿಕೆಯು ನನ್ನನ್ನು ಅತ್ಯಂತ ಸಂತೋಷಗೊಳಿಸಿತು. ಅಹ್ಮದಿಯಾ ಸಂದೇಶವನ್ನು ಲೋಕದ ಜನತೆಗೆ ಮುಟ್ಟಿಸುವಲ್ಲಿ ಕನ್ನಡವಲ್ಲದ ಇತರ ಭಾಷೆಗಳಲ್ಲಿ ಎಷ್ಟೋ ಪತ್ರಿಕೆಗಳು ಹುಟ್ಟಿ ವರ್ಷಗಳು ಕಳೆದುವು. ಕನ್ನಡದಲ್ಲಿಯೂ ಅದು ಹುಟ್ಟಬೇಕಾಗಿದ್ದ ಕಾಲವು ಮೀರಿಹೋಗಿತ್ತು. ಆದರೆ ಆ ಕೊರತೆಯನ್ನು ನೀಗಿಸಲು ಹೊರಟ ಯುಗರಶ್ಮಿಗೆ ನನ್ನ ಮತ್ತು ನನ್ನ ಹಲವಾರು ಸ್ನೇಹಿತರ ಕೃತಜ್ಞತೆಗಳು. ಹಝ್‌ರತ್ ಮಿರ್ಝಾ ಗುಲಾಂ ಅಹ್ಮದ್ ಅವರ ಹೆಸರನ್ನು ಮಾತ್ರ ಕೇಳಿದ್ದಲ್ಲದೆ, ಅವರು ಎಲ್ಲಿ ಹುಟ್ಟಿದರು, ಎಲ್ಲಿ ಬೆಳೆದರು, ಅವರ ಆಗಮನದ ಉದ್ದೇಶವೇನು? ಎಂದು ತಿಳಿಯದ ಎಷ್ಟೋ ಕನ್ನಡ ಮುಸಲ್ಮಾನರಿದ್ದಾರೆ. ಅವರಿಗೆ ಅವರ ಸಂಪೂರ್ಣ ವಿವರವನ್ನೂ ಸಂದೇಶವನ್ನೂ ಮುಟ್ಟಿಸುವುದರಲ್ಲಿ "ಯುಗರಶ್ಮಿ"ಯು ಸಫಲವಾಗಲೆಂದು ಪ್ರಾರ್ಥಿಸುತ್ತೇವೆ.

ಪೊಡಿಕೆತ್ತೂರು. —ಬಿ. ಎಂ. ಇಬ್ರಾಹಿಂ

---

(ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್‌ರತ್ ಮಿರ್ಝಾ ಗುಲಾಂ ಅಹ್ಮದ್ ಅವರ ಜೀವನಕ್ಕೆ ಸಂಬಂಧಿಸಿದ ವಿಷಯಗಳು ಹಿಂದಿನ ಸಂಚಿಕೆಗಳಲ್ಲಿ ಪ್ರಕಟವಾಗಿವೆ. ಸಂದರ್ಭಾನುಸಾರ ಮುಂದೆಯೂ ಪ್ರಕಟಿಸಲಾಗುವುದು. ಇನ್‌ಶಾಅ್ ಅಲ್ಲಾಹ್. —ಸಂ.)

# ಹಿಜರಿ ಹದಿನೈದನೇ ಶತಕದ ಆರಂಭ

ಈ ಕಳೆದ ಮೊಹರ್ರಂ ತಿಂಗಳ ಹುಟ್ಟಿನಿಂದ (ನವೆಂಬರ್ 10) ಹಿಜರಿ 15ನೇ ಶತಮಾನ ಆರಂಭಿಸಿದೆ. ಮುಸ್ಲಿಂ ಲೋಕ ಹೊಸ ಶತಮಾನೋತ್ಸವಾಚರಣ ಕಾರ್ಯಕ್ರಮಗಳನ್ನು ತೊಡಗಿ ಒಂದು ವರ್ಷ ಕಾಲ ವಾಯಿತು. ಹಿಜರಿ 1400ನೇ ವರ್ಷ ಮುಹರ್ರಂ ಮಾಸ ಆರಂಭಿಸಿದಾಗಲೇ 15ನೇ ಶತಮಾನ ಆರಂಭಿಸಿ ತೆಂದು ಘೋಷಿಸುತ್ತಾ, ಕೆಲವು ಮುಸ್ಲಿಂ ಪತ್ರಿಕೆಗಳು ಕಳೆದ ವರ್ಷ ಲೇಖನಗಳನ್ನೂ ವಿಶೇಷಾಂಕಗಳನ್ನೂ ಪ್ರಕಟಿಸಿದವು. ಹಲವು ಸಂಘ-ಸಂಸ್ಥೆಗಳು ಸಭೆಗಳನ್ನೂ ಏರ್ಪಡಿಸಿದವು. ಅಹ್ಮದಿಯಾ ಮುಸ್ಲಿಮರು ಆಗಲೇ ಅವರ ತಪ್ಪನ್ನು ತೋರಿಸಿಕೊಟ್ಟು 15ನೇ ಶತಮಾನ ಆರಂಭಿಸಿಲ್ಲ, ಈಗ 14ನೇ ಶತಮಾನದ ಕೊನೆಯ ವರ್ಷವಷ್ಟೆ ಪ್ರಾರಂಭವಾಗಿದೆಯೆಂದು ಹೇಳಿಕೊಟ್ಟಿದ್ದರು. ತದನಂತರ ಹಲವರು ತಮ್ಮ ತಪ್ಪನ್ನು ತಿದ್ದಿಕೊಂಡದ್ದು ಸಂತೋಷಕರವೇ ಆಗಿದೆ. ಆದರೆ ಈ ಶತಮಾನದ ವೈಶಿಷ್ಟ್ಯವೇನು? ಇದು ಮುಸ್ಲಿಮರು ತಿಳಿದುಕೊಳ್ಳಬೇಕಾದ ಮುಖ್ಯ ಸಂಗತಿಯಾಗಿದೆ.

ಪವಿತ್ರ ಖುರ್ಆನ್ ಮತ್ತು ನಬಿವಚನಗಳಲ್ಲಿ ಪ್ರಸ್ತಾವಿಸಲಾದ ಹಲವು ಪ್ರಧಾನ ಭವಿಷ್ಯೋಕ್ತಿಗಳು 14ನೇ ಶತಮಾನದಲ್ಲಿ ನೆರವೇರಿವೆಯೆಂಬುದಾಗಿದೆ ಆ ಶತಮಾನದ ಸವಿಶೇಷತೆ. ಕೊನೆಗಾಲದ ಕುರುಹುಗಳೆಂದು ಹೇಳಲಾದ ಆ ಘಟನೆಗಳು ಸಂಭವಿಸಿವೆಯೆಂಬ ವಿಚಾರ ವಿವೇಚಿಸುವ ಪ್ರತಿಯೊಬ್ಬ ಸತ್ಯ ವಿಶ್ವಾಸಿಯ ವಿಶ್ವಾಸವನ್ನು ಬಲಪಡಿಸುತ್ತದೆ. ಉದಾಹರಣೆಗಾಗಿ, 'ದಜ್ಜಾಲ್'ನ ಹೊರಡುವಿಕೆ, ಇಮಾಂ ಮಹದಿಯು ಆಗಮನ ಅಥವಾ ವಾಗ್ದತ್ತ ಮಸೀಹರ ನಿಯೋಗ, 'ಯಅ್‌ಜೂಜ್ ಮಅ್‌ಜೂಜ'ರ ಚಟುವಟಿಕೆ, ಅವರ ಪರಾಕ್ರಮ, ಆಕಾಶದೆಡೆಗೆ ಅವರ ಅಸ್ತ್ರವಿಕ್ಷೇಪಣೆಯ ಪೈಪೋಟಿ, ಯಹೂದರ ಮರಳಿಕೆ, ದಜ್ಜಾಲಿನ ಸಹಾಯದಿಂದ ಅವರು ಮುಸ್ಲಿಮರೊಡನೆ ಮಾಡುವ ಯುದ್ಧ ಎಂಬೀ ಕುರುಹುಗಳೆಲ್ಲಾ 14ನೇ ಶತಕದಲ್ಲೇ ಸಂಭವಿಸಿವೆ.

ಆದರೆ, ಈ ವಿಚಾರಗಳನ್ನು ಮನಗಾಣಲಿಕ್ಕೂ ಇಸ್ಲಾಮಿನ ಸಂರಕ್ಷನೂ ಲೋಕೋದ್ಧಾರಕನೂ ಆಗಿ ಅಲ್ಲಾಹನಿಂದ ನಿಯುಕ್ತರಾದ ವಾಗ್ದತ್ತ ಮಹ್‌ದೀ ಮಸೀಹರನ್ನು ಅಂಗೀಕರಿಸಲಿಕ್ಕೂ ಬಹು ಸಂಖ್ಯಾತ ಮುಸ್ಲಿಮರಿಗೆ ಸಾಧ್ಯವಾಗಿಲ್ಲವೆಂಬುದು ಖೇದಕರ. ಮೇಲೆ ಹೇಳಿದ ಎಲ್ಲಾ ಭವಿಷ್ಯೋಕ್ತಿಗಳ ನೆರವೇರಿಕೆಯ ವಿಶದೀಕರಣದ ಕುರಿತು ಅಹ್ಮದಿಯಾ ಸಾಹಿತ್ಯಗಳನ್ನು ಓದಿದರೆ ತಿಳಿದುಕೊಳ್ಳಬಹುದು. ಆದರೆ ದೈವಿಕ ಭವಿಷ್ಯ ನುಡಿಗಳು ಅಕ್ಷರಾರ್ಥದಲ್ಲೇ ಪೂರ್ತಿಯಾಗಬೇಕೆಂದು ಮೊಂಡು ಹಿಡಿಯುವ ಇತರ ಮುಸ್ಲಿಮರು, ಭವಿಷ್ಯೋಕ್ತಿಗಳು ನೆರವೇರಿ ಹಲವಾರು ವರ್ಷಗಳು ಸಂದರೂ ಈಗಲೂ ಪ್ರತೀಕ್ಷೆಯಲ್ಲೇ ಕಾಲಕಳೆಯುತ್ತಿದ್ದಾರೆ.

ಹಿಜರಿ 14ನೇ ಶತಕದ ಆರಂಭದಲ್ಲಿ ( ಕ್ರಿ. ಶ. 1889) ಹಜ್ರತ್ ಮಿರ್ಝಾ ಗುಲಾಂ ಅಹ್ಮದ್ ಅವರು ತನ್ನನ್ನು ಅಲ್ಲಾಹು ವಾಗ್ದತ್ತ ಮಹ್‌ದಿಯಾಗಿ ನಿಯೋಗಿಸಿರುವನೆಂದು ವಾದಿಸಿದರು. ದೈವ ನಿಯುಕ್ತರಾದ ಸತ್ಯಾತ್ಮರ ಲಕ್ಷಣಗಳೆಂದು ಖುರ್ಆನಿನಲ್ಲಿ ಹೇಳಲಾದ ಎಲ್ಲಾ ಸಾಕ್ಷ್ಯಗಳು ಅವರಲ್ಲಿ ನೆರವೇರಿವೆ. ನಿಷ್ಪಕ್ಷಪಾತದಿಂದ ಅಧ್ಯಯನ ಮಾಡುವವರಿಗೆ ಅದನ್ನು ಮನಗಾಣಬಹುದು.

ಅಹ್ಮದಿಗಳಲ್ಲದ ಇತರ ಮುಸ್ಲಿಮರು 14ನೇ ಶತಕದ ಸವಿಶೇಷತೆಗಳನ್ನು ಅವಗಣಿಸುವರಾದರೂ 15ನೇ ಶತಮಾನೋತ್ಸವವನ್ನು ಆಚರಿಸುವುದರಲ್ಲಿ ಉತ್ಸುಕರಾಗಿರುವುದು ಸೋಜಿಗಕರವೇ ಸರಿ.

ಹದಿನೈದನೆಯ ಶತಮಾನ ಇಸ್ಲಾಮಿನ ವಿಜಯದ ಶತಮಾನವಾಗಿದೆ. ಹಜ್ರತ್ ಅಹ್ಮದರ ಭವಿಷ್ಯೋಕ್ತಿಗಳಲ್ಲಿ ಇದು ಕಂಡುಬರುತ್ತದೆ. ಇನ್ನು ಎಂಟು ವರ್ಷಗಳಲ್ಲಿ, ಎಂದರೆ 15ನೇ ಶತಮಾನದ ಪ್ರಥಮ ದಶಕದಲ್ಲಿ, ಅಹ್ಮದಿಯಾ ಜಮಾಅತು ಅದರ ಪ್ರಥಮ ಶತಮಾನೋತ್ಸವವನ್ನು ಆಚರಿಸಲಿದೆ. ಅಹ್ಮದಿಯಾಜಮಾಅತಿನ ದ್ವಿತೀಯ ಶತಕದಲ್ಲಿ, ಅಮೇರಿಕಾ ಮತ್ತು ರಶ್ಯಾದಲ್ಲಿ, ಎಂದೇಕೆ, ಲೋಕದಲ್ಲೆಲ್ಲೂ ಯಥಾರ್ಥ ಇಸ್ಲಾಮ್ ವಿಫುಲವಾಗಿ ವ್ಯಾಪಿಸುವುದೆಂದು ಅಹ್ಮದಿಯಾ ಜಮಾಅತಿನ ಈಗಿನ ಖಲೀಫರಾದ ಹಜ್ರತ್ ಮಿರ್ಝಾ ನಾಸಿರ್ ಅಹ್ಮದ್ ಸಾಹೇಬರು ಅನೇಕ ವರ್ಷಗಳ ಮೊದಲೇ ಶುಭ

ವಾರ್ತೆ ಅರುಹಿದ್ದಾರೆ. ಅದರ ಲಕ್ಷಣಗಳು ಈಗಾಗಲೇ ಕಂಡು ಬರಲು ತೊಡಗಿದೆ. ಪ್ರಪಂಚದಾದ್ಯಂತ್ಯ ಇರುವ ಅಹ್ಮದಿಯರು ಇಂದು ಇಸ್ಲಾಮಿನ ನೈಜ ಸುಂದರ ರೂಪವನ್ನು ಲೋಕದ ಮುಂದೆ, ಮೂಲೆ ಮೂಲೆಗಳಲ್ಲಿ, ತೋರಿಸುವ ಮಹೋದ್ಯಮದಲ್ಲಿ ಉದ್ಯುಕ್ತರಾಗಿದ್ದಾರೆ.

ಹಿಜರಿ 15ನೇ ಶತಕದ ಆರಂಭ ಕಾಲವಾದ ಈ ಸಂದರ್ಭದಲ್ಲಿ "ಲಾ ಇಲ್ಲಾಹ ಇಲ್ಲಲ್ಲಾಹ್" ಎಂಬ ಪವಿತ್ರ ವಚನವನ್ನು ಪದೇ ಪದೇ ಉಚ್ಚರಿಸುತ್ತಿರಬೇಕೆಂದು ಹಝ್‌ರತ್ ಖಲೀಫರವರು ಅಹ್ಮದಿಯರಿಗೆ ಆದೇಶಿಸಿದ್ದಾರೆ. ಒಂದು ಕಡೆಯಲ್ಲಿ ನಾಸ್ತಿಕವಾದವೂ ಇನ್ನೊಂದು ಕಡೆಯಲ್ಲಿ ಬಹುದೈವಾರಾಧನೆಯೂ ಪ್ರಬಲಗೊಂಡಿರುವ ಈ ಕಾಲಘಟ್ಟದಲ್ಲಿ "ಏಕದೇವನ ಹೊರತು ಆರಾಧ್ಯನಿಲ್ಲ" ಎಂಬ ಈ ವಾಕ್ಯವು ಬಹಳ ಅರ್ಥಗರ್ಭಿತವಾಗಿದೆ. ಏಕದೇವ ಸಿದ್ಧಾಂತದ ಪ್ರಾಧಾನ್ಯತೆಯನ್ನು ಅದು ಸಾರುತ್ತದೆ, ಈ ಹೊಸ ಶತಕದಲ್ಲಿ ಏಕದೇವ ಸಿದ್ಧಾಂತ ಲೋಕದಲ್ಲಿಡೀ ವಿರಾಜಿಸುವುದೆಂದು ಸಹ ಅವರು ಶುಭ ಸೂಚನೆ ನೀಡಿದ್ದಾರೆ. ದೈವನಿಯುಕ್ತ ಮಹ್‌ದಿ ಸ್ಥಾಪಿಸಿದ ಅಹ್ಮದಿಯಾ ಜಮಾಅತಿನ ಮೂಲಕ ಅದು ಸಿದ್ಧಿಸುವುದು ಖಂಡಿತ. (ಇನ್‌ಷಾಅ್ ಅಲ್ಲಾಹ್)

—ಸಂಪಾದಕ

——

# ಪುಸ್ತಕ ಸಮೀಕ್ಷೆ

**ಇಸ್ಲಾಂ ಬುದ್ಧಿಜೀವಿಗಳುಡೆ ಮತಂ** (ಮಳೆಯಾಳಂ)

ಲೇಖಕರು: ಎನ್. ಅಬ್ದುರ್ರಹೀಂ

ಪ್ರಕಾಶಕರು: ಕ್ರಸೆಂಟ್ ಬುಕ್ ಸೆಂಟರ್, ಕಣ್ಣಾನ್ನೂರ್-670003

ಬೆಲೆ: 4-00 ಪುಟಗಳು: 132

ಕೇರಳ ರಾಜ್ಯ ವಿಚಾರವಾದಿ ಸಂಘದ ಕಾರ್ಯದರ್ಶಿ ಶ್ರೀ ಯು. ಕಲಾನಾಥನ್ ಅವರು ಇಸ್ಲಾಂ ಧರ್ಮದ ಎದುರಾಗಿ ಎತ್ತಿದ 12 ಪ್ರಧಾನ ಆಕ್ಷೇಪಣೆಗಳಿಗೆ ಉತ್ತರವಾಗಿದೆ ಈ ಕೃತಿ.

ಪರಲೋಕ, ವಿವಾಹ ವಿಚ್ಛೇದ, ವಿಕಾಸವಾದ, ಸಾಂಪತ್ತಿಕ ಸಮೀಕರಣ. ಸಾಮೂಹಿಕನೀತಿಗಳು, ಪ್ರಪಂಚ ಸೃಷ್ಟಿ, ಸ್ತ್ರೀ ಪುರುಷ ಸಂಬಂಧ, ಶಿಕ್ಷಾಕ್ರಮ ಇತ್ಯಾದಿಗಳ ಸಂಬಂಧಿಸಿ ಇಸ್ಲಾಂ ಧರ್ಮದ ಅಧ್ಯಾಪನಗಳು ವಿಚಾರ ರಹಿತವಾಗಿವೆಯೆಂದಾಗಿದೆ ಶ್ರೀ ಕಲಾನಾಥನ್‌ರವರ ಆರೋಪಣೆ.

ನುರಿತ ಸಾಹಿತಿಯೂ ಪತ್ರಕರ್ತನೂ ವಾಗ್ಮಿಯೂ ಆಗಿರುವ ಜನಾಬ್ ಎನ್. ಅಬ್ದುರ್ರಹೀಂ ಅವರು ಈ ಆಕ್ಷೇಪಣೆಗಳಿಗೆಲ್ಲಾ ಬಹಳ ಸಮಂಜಸವಾದ ಉತ್ತರಗಳನ್ನು ಈ ಹೊತ್ತಗೆಯಲ್ಲಿ ನೀಡಿದ್ದಾರೆ. ಇಸ್ಲಾಂ ಹೇಗೆ ಬುದ್ಧಿಜೀವಿಗಳ, ವಿವೇಕಶಾಲಿಗಳ ಧರ್ಮವೆಂಬುದನ್ನು ಲೇಖಕರು ಚಲೋದಾಗಿ ನಿರೂಪಿಸಿದ್ದಾರೆ. ಗ್ರಂಥಕರ್ತರ ಸಮರ್ಥ ವಾಚಾಳಿತನವೂ ಅಪಾರ ಜ್ಞಾನವೂ ಓದುಗರನ್ನು ಆಕರ್ಷಿಸುತ್ತದೆ.

ಇಸ್ಲಾಂ ಧರ್ಮದ ಕುರಿತು ತಿಳಿಯಲಪೇಕ್ಷಿಸುವ ಜಿಜ್ಞಾಸುಗಳಿಗೂ ಇಸ್ಲಾಂ ಧರ್ಮ ವಿಶ್ವಾಸಿಗಳಿಗೂ ಈ ಕೃತಿ ಅತ್ಯಂತ ಉಪಯುಕ್ತ ಎಂಬುದರಲ್ಲಿ ಸಂಶಯವಿಲ್ಲ.

—ಅ. ಝು. ಅ.

**ಪುಸ್ತಕ ವಿಭಾಗ**

# ಇಸ್ಲಾಂ ಮತ ತತ್ತ್ವಜ್ಞಾನ

## ( 10 )

ಗ್ರಂಥಕರ್ತ: ಹಝ್‌ರತ್ ಮಿರ್ಝಾ ಗುಲಾಮ್ ಅಹ್ಮದ್

ಅನುವಾದಕ: ಮುಹಮ್ಮದ್ ಯೂಸುಫ್

### ಮಾನವ ಜೀವಿತದ ಮೂರು ಲೋಕಗಳು

ಮನುಷ್ಯ ಜೀವಿತಕ್ಕೆ ಮೂರು ಲೋಕಗಳು ಅಥವಾ ಮೂರು ವಿಭಿನ್ನ ಘಟ್ಟಗಳಿವೆಯೆಂದು ಪವಿತ್ರ ಖುರ್‌ಆನ್ ಕಲಿಸುವುದು ಇಲ್ಲಿ ಗಮನಾರ್ಹ. ಒಂದನೆಯ ಲೋಕ ಪರಿಶ್ರಮಾರಂಗವಾದ ಐಹಿಕವೇ ಆಗಿದೆ. ಯಾರಾದರೂ ತನ್ನ ಕರ್ಮಗಳ ಮುಖೇನ ಪುಣ್ಯವನ್ನೋ ಪಾಪವನ್ನೋ ಸಂಪಾದಿಸುವುದು ಇಲ್ಲಿಯಾಗಿದೆ. ಪುನರುತ್ಥಾನ ಲೋಕದಲ್ಲಿ ಸಜ್ಜನರಿಗೆ ಅಭಿವೃದ್ಧಿ ಸಿದ್ಧಿಸುವುದಾದರೂ ಅದು ಕೇವಲ ದೇವನ ಕೃಪಾಕಟಾಕ್ಷದ ಫಲವಾಗಿದೆ ಹೊರತು ಅವರ ಪ್ರಯತ್ನದ ಬಲದಿಂದಲ್ಲ.

ಎರಡನೆಯ ಲೋಕದ ಹೆಸರು 'ಬರ್‌ಝಖ್' ಎಂದಾಗಿದೆ. 'ಬರ್‌ಝಖ್' ಅರಬಿ ಭಾಷೆಯಲ್ಲಿ ಎರಡು ವಸ್ತುಗಳ ಮಧ್ಯದಲ್ಲಿರುವ ವಸ್ತುವನ್ನು ಸೂಚಿಸುವ ಪದವಾಗಿದೆ. ಆದ್ದರಿಂದ ಐಹಿಕ ಜೀವಿತ ಮತ್ತು ಪುನರುತ್ಥಾನ ಘಟ್ಟಗಳ ಮಧ್ಯದ ಸ್ಥಿತಿಗೆ ಬರ್‌ಝಖ್ ಎಂದು ಹೇಳಲಾಗಿದೆ. ಅತಿ ಪ್ರಾಚೀನ ಕಾಲದಿಂದಲೇ ಮಧ್ಯ ಘಟ್ಟವನ್ನು ಸೂಚಿಸಲಿಕ್ಕಾಗಿ ಈ ಪದ ಬಳಸಲ್ಪಡುತ್ತಾ ಇದೆ. ಹೀಗೆ ಪ್ರಸ್ತುತ ಪದವೇ ಐಹಿಕ ಚೀವಿತಕ್ಕೂ ಪುನರುತ್ಥಾನಕ್ಕೂ ಮಧ್ಯೆ ಮನುಷ್ಯಾತ್ಮಕ್ಕೆ ಒಂದು ಜೀವಿತಘಟ್ಟ ಉಂಟೆಂಬುದಕ್ಕೆ ಸಾಕ್ಷ್ಯವಹಿಸುತ್ತದೆ. ಅರಬಿ ಮಾತುಗಳು ದೈವ ಮುಖದಿಂದ ಹೊರಟ ನುಡಿಗಳೆಂದೂ ದೈವಿಕವೆಂದು ಹೇಳಲ್ಪಡುವ ಏಕ ಭಾಷೆ ಅದು ಮಾತ್ರವೆಂದೂ ಸರ್ವಜ್ಞಾನಗಳ ಉಗಮವೂ ಸಕಲ ಭಾಷೆಗಳ ಜನನಿಯೂ ದೈವವಚನ ಪ್ರಕಟನೆಯ ಮೊದಲಿನ ಹಾಗೂ ಕೊನೆಯ ವಾಹಕ ಸಹ ಅದೇ ಆಗಿದೆಯೆಂದೂ ನಾನು 'ಮಿನನುರ್‍ರಹ್ಮಾನ್' ಎಂಬ ಗ್ರಂಥದಲ್ಲಿ ಸಾಬೀತು ಪಡಿಸಿದ್ದೇನೆ. ಪ್ರಾಚೀನ ಕಾಲದಿಂದಲೇ ಅರಬಿ ಭಾಷೆಯ ಮೂಲಕ ದೈವೋಪದೇಶಗಳು ಲಭಿಸಿರುವುದರಿಂದ ಅರಬಿ ಭಾಷೆ ದೈವವಚನ ಪ್ರಕಟನೆಯ ಮೊದಲಿನ ವಾಹಕವೆಂದು ಹೇಳಲಾಗಿದೆ. ಅದು ಇತರ ಭಾಷೆಗಳ ಮೂಲವೂ ಆಗಿದೆ. ದೇವನ ಅಂತಿಮ ಮತಗ್ರಂಥವಾದ ಪವಿತ್ರ ಖುರ್‌ಆನ್ ಅರಬಿ ಭಾಷೆಯಲ್ಲಿ ಅವತೀರ್ಣವಾದುದರಿಂದ ಆ ಭಾಷೆ ದೈವವಚನ ಪ್ರಕಟನೆಯ ಕೊನೆಯ ವಾಹಕವೆಂದು ಹೇಳಲಾಗಿದೆ. ಮೇಲೆ ಪ್ರಸ್ತಾಪಿಸಲಾದ 'ಬರ್‌ಝಖ್' ಎಂಬ ಅರಬಿ ಶಬ್ದ 'ಬರ್' ಮತ್ತು 'ಝಖ್' ಎಂಬೆರಡು ಶಬ್ದಗಳು ಸೇರಿದ ಸಂಯುಕ್ತ ಪದವಾಗಿದೆ. ಕರ್ಮರೂಪದಲ್ಲಿ ಪುಣ್ಯ – ಪಾಪಗಳನ್ನು ಸಂಪಾದಿಸುವ ಹಂತ ಕೊನೆಗೊಂಡಿತು ಎಂದಾಗಿದೆ ಈ ಪದದ ಅರ್ಥ. ಆತ್ಮವು ದೇಹದಿಂದ ಬೇರ್ಪಟ್ಟು, ನಶ್ವರ ಶರೀರ ನಾಶ ಹೊಂದುವ ಸ್ಥಿತಿ 'ಬರ್‌ಝಖ್' ಅಥವಾ "ಮಧ್ಯಂತರ ಘಟ್ಟ" ಆಗಿದೆ. ಮರಣಾನಂತರ ಶರೀರ ಗುಂಡಿಗೆ ತಳ್ಳಲ್ಪಡುವ ಪ್ರಕಾರ ಆತ್ಮ ಸಹ ಒಂದು ಬಗೆಯ ಗುಂಡಿಯಲ್ಲಿ ಇರಿಸಲ್ಪಡುತ್ತದೆಯೆಂದು ಹೇಳಬಹುದು. 'ಬರ್‌ಝಖ್' ಶಬ್ದ ಇದನ್ನೇ ಸೂಚಿಸುತ್ತದೆ. ಈ ಸ್ಥಿತಿಯಲ್ಲಿ ಆತ್ಮಕ್ಕೆ ಶರೀರದ ಮೇಲಿನ ನಿಯಂತ್ರಣ ಶಕ್ತಿ ನಷ್ಟವಾಗುವುದರಿಂದ ಸತ್ಕರ್ಮ-ದುಷ್ಕರ್ಮಗೈಯಲು ಅದು ಸಮರ್ಥವಲ್ಲ. ನಮ್ಮ ಆತ್ಮದ ಉತ್ತಮ ಸ್ಥಿತಿ ಶರೀರದ

ಆರೋಗ್ಯವನ್ನು ಆಶ್ರಯಿಸಿಕೊಂಡಿದೆಯೆಂಬುದು ಸ್ಪಷ್ಟವಷ್ಟೆ. ಮಸ್ತಿಷ್ಕದ ಒಂದು ನಿರ್ದಿಷ್ಟ ಭಾಗಕ್ಕೆ ಏಟು ತಾಗಿದರೆ ಜ್ಞಾಪಕ ಶಕ್ತಿ ನಷ್ಟವಾಗುತ್ತದೆ. ಇನ್ನೊಂದು ಭಾಗಕ್ಕೆ ಅಪಾಯ ಸಂಭವಿಸಿದರೆ ಬುದ್ಧಿಶಕ್ತಿ ನಷ್ಟವಾಗುತ್ತದೆ ಅಥವಾ ಪ್ರಜ್ಞಾಹೀನತೆ ಉಂಟಾಗುತ್ತದೆ. ಇದೇ ಪ್ರಕಾರ ಮಿದುಳಿನ ಸ್ನಾಯುಗಳಲ್ಲಿ ಸೆಳೆತ, ಬೀಗುವಿಕೆ, ರಕ್ತ ಹೆಪ್ಪುಗಟ್ಟುವುದು ಮುಂತಾದುವು ಉಂಟಾದರೆ ಪ್ರಜ್ಞಾಶೂನ್ಯತೆ, ಅಪಸ್ಮಾರ, ಕ್ಷಿಪ್ರಸನ್ನಿ ಮೊದಲಾದ ರೋಗಗಳು ಭಾಧಿಸುವುವು. ಶರೀರದ ಸಂಬಂಧ ಬೇರ್ಪಡುವ ಪಕ್ಷದಲ್ಲಿ ಆತ್ಮವು ಯಾವುದಕ್ಕೂ ಸಮರ್ಥವಲ್ಲವೆಂದು ಈ ಬಗೆಯ ಅನುಭವಗಳು ನಮಗೆ ತಿಳಿಸಿಕೊಡುತ್ತವೆ. ದೇಹದ ಬಂಧವನ್ನು ಬಿಟ್ಟು ಕೇವಲ ಆತ್ಮಕ್ಕೆ ಆನಂದವನ್ನು ಅನುಭವಿಸುವರೆ ಸಾಧ್ಯವಾಗುವುದೆಂದು ಭಾವಿಸುವುದು ಅರ್ಥರಹಿತವಾಗಿದೆ. ಆ ವಿಚಾರವನ್ನು ಒಂದು ಕಥೆಯ ರೀತಿಯಲ್ಲಿ ಆನಂದಿಸಬಹುದು ಹೊರತು ವಿವೇಕವು ಅದನ್ನು ಸರಿಯೆಂದು ಸಮ್ಮತಿಸಲಾರದು. ಶರೀರಕ್ಕೆ ಅಲ್ಪ ಮಾತ್ರವೇ ಅಸ್ವಸ್ಥತೆಯುಂಟಾದರೆ ಆತ್ಮದ ಕರ್ಮಗಳಿಗೆ ಭಂಗವುಂಟಾಗುವುದನ್ನು ನಾವು ಕಾಣುತ್ತೇವಷ್ಟೆ. ಹಾಗಿರುವಾಗ, ಶರೀರದಿಂದ ಸಂಪೂರ್ಣ ಬೇರ್ಪಟ್ಟಿರುವ ಆತ್ಮ ಪರಿಪೂರ್ಣ ಹಾಗೂ ಸ್ವಸ್ಥ ಸ್ಥಿತಿಯಲ್ಲಿ ಇರುವುದೆಂದು ಭಾವಿಸುವುದು ಹೇಗೆ? ಆತ್ಮದ ಆರೋಗ್ಯಸ್ಥಿತಿಗೆ ಶರೀರದ ಆರೋಗ್ಯ ಅತ್ಯಗತ್ಯವೆಂಬುದು ನಮ್ಮ ಅನುಭವವಲ್ಲವೇ? ಮನುಷ್ಯನು ವೃದ್ಧಾಪ್ಯವನ್ನು ಪಡೆಯುವಾಗ ಅವನ ಆತ್ಮಕ್ಕೆ ಸಹ ಮುದಿತನ ಮತ್ತು ಬಲಹೀನತೆ ಬಾಧಿಸುತ್ತದೆ. ಈ ವೃದ್ಧಾಪ್ಯವು ಅವನ ಜ್ಞಾನ ಸಂಪತ್ತನ್ನು ಅಪಹರಿಸುತ್ತದೆ. ಈ ಸ್ಥಿತಿಯ ಕುರಿತು ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

"ಅಕೈಲಾ ಯಅ್‌ಲಮ ಮಿನ್‌ಬಅ್‌ದಿ ಇಲ್ಮಿನ್ ಶೈಯನ್" (22:6)

ಮನುಷ್ಯನು ಅತಿ ವೃದ್ಧಾಪ್ಯವನ್ನು ಪಡೆಯುವಾಗ ಕಲಿತದ್ದೆಲ್ಲಾ ಮರೆತು ಏನೂ ತಿಳಿಯದವನ ಹಾಗೆ ಆಗುತ್ತಾನೆ.

ಈ ದೃಷ್ಟಾಂತಗಳಿಂದ, ದೇಹದಿಂದ ಬೇರ್ಪಟ್ಟು ಹೋಗುವ ಆತ್ಮ ಯಾವುದಕ್ಕೂ ಶಕ್ತವಾಗುವುದಿಲ್ಲವೆಂದು ಸಾಬೀತಾಗುತ್ತದೆ. ಆತ್ಮಕ್ಕೆ ದೇಹದ ಹೊರತಾಗಿಯೇ ಶಕ್ತಿಯುಂಟೆಂದಾದರೆ, ಅದನ್ನು ಕ್ಷಣಭಂಗುರವಾದ ಶರೀರದೊಡನೆ ಬಂಧವನ್ನೇರ್ಪಡಿಸಿದ ದೇವನ ಪ್ರವರ್ತನೆ ನಿರರ್ಥಕವಾಗುವುದು. ಈ ವಿಷಯದ ಕುರಿತಾದ ಚಿಂತೆ ಪರಮಾರ್ಥ ತತ್ವವನ್ನು ಗ್ರಹಿಸುವುದಕ್ಕೆ ಸಹಾಯಕವಾಗುವುದು. ಮನುಷ್ಯನು ಅಪರಿಮಿತವಾದ ಔನ್ನತ್ಯಕ್ಕೆ ಏರಿ ಹೋಗಲಿಕ್ಕಿರುವ ಸೃಷ್ಟಿಯಾಗಿದ್ದಾನೆ. ಅವನಿಗೆ ಹ್ರಸ್ವವಾದ ಐಹಿಕ ಜೀವಿತದ ಅಭಿವೃದ್ಧಿಗಳನ್ನು ಶರೀರದ ಸಹಾಯವಿಲ್ಲದೆ ಗಳಿಸಲು ಅಸಾಧ್ಯವಾದ ಸ್ಥಿತಿಯಲ್ಲಿ ಪರಲೋಕದ ಅನಂತವೂ ಅಪಾರವೂ ಆದ ಅಭಿವೃದ್ಧಿಯನ್ನು ಒಂದು ದೇಹದ ಬಂಧವಿಲ್ಲದೆಯೇ ಗಳಿಸಬಹುದೆಂದು ಭಾವಿಸುವುದು ಹೇಗೆ?

ಸಂಕ್ಷಿಪ್ತವಾಗಿ, ಇಸ್ಲಾಂ ಧರ್ಮ ತತ್ವ ಪ್ರಕಾರ ಆತ್ಮಕ್ಕೆ ಅದರ ಪರಿಪೂರ್ಣತೆಯನ್ನು ಪಡೆಯಲು ದೇಹದ ಸಂಬಂಧ ಅನಿವಾರ್ಯವೆಂದು ಮೇಲಿನ ವಿವರಣೆಗಳಿಂದ ಸ್ಪಷ್ಟವಾಗುತ್ತದೆ. ಮರಣದೊಂದಿಗೆ ನಶ್ವರವಾದ ಈ ಶರೀರ ಆತ್ಮದಿಂದ ಬೇರ್ಪಡುವುದಷ್ಟೆ. ಆದರೆ ಪ್ರತಿಯೊಂದು ಆತ್ಮಕ್ಕೂ ಅದರ ಕರ್ಮಫಲವನ್ನು ಅನುಭವಿಸಲಿಕ್ಕೋಸ್ಕರ ಮಧ್ಯಘಟ್ಟವಾದ 'ಬರ್‌ಸಖ್'ನಲ್ಲಿ ಒಂದು ತಾತ್ಕಾಲಿಕ ದೇಹ ನೀಡಲಾಗುವುದು. ಆ ಶರೀರ ಈ ಶರೀರದಂತೆ ಇರಲಾರದು. ಅದು ಕರ್ಮಗಳ ಸ್ಥಿತಿಗನುಸಾರವಾಗಿ ರೂಪುಗೊಳ್ಳುವ ಪ್ರಕಾಶ ಅಥವಾ ಅಂಧಕಾರಪೂರ್ಣವಾದ ದೇಹವಾಗಿರಬಹುದು. ಹೀಗೆ ಮನುಷ್ಯನ ಕರ್ಮ ಈ ಘಟ್ಟದಲ್ಲಿ ಆತ್ಮಕ್ಕೆ ದೇಹವಾಗುತ್ತದೆ. ಅದು ಸತ್ಕರ್ಮ ಪ್ರಕಾಶದಿಂದ ಅಥವಾ ದುಷ್ಕರ್ಮಾಂಧಕಾರದಿಂದ ರೂಪುಗೊಳ್ಳುತ್ತದೆ. ಇದು ಅತೀವ ಗಹನವಾದ ತತ್ವರಹಸ್ಯವಾಗಿದ್ದರೂ ಯುಕ್ತಿ ವಿರುದ್ಧವಲ್ಲ. ಪರಿಪೂರ್ಣತೆಯನ್ನು ಪಡೆದ ಭಕ್ತನಿಗೆ ತನ್ನ ಸ್ಥೂಲ ಶರೀರದಿಂದ ಭಿನ್ನವಾದ ಪ್ರಕಾಶಮಾನವಾದ ಒಂದು ಶರೀರ ರೂಪುಗೊಳ್ಳುವುದಾಗಿ ಐಹಿಕ ಜೀವಿತದಲ್ಲೇ ಅನುಭವವಾಗುತ್ತದೆ. ಕರ್ಮಗಳ ಫಲವಾಗಿ ಮರಣಾನಂತರ ಮನುಷ್ಯಾತ್ಮಕ್ಕೆ ಲಭಿಸುವ ತೇಜೋಮಯವಾದ ಅಥವಾ ಅಂಧಕಾರಮಯವಾದ ದೇಹಕ್ಕೆ ಸಂಬಂಧಿಸಿದ ಅನೇಕ ದೃಷ್ಟಾಂತಗಳು ಭಕ್ತರ ಆತ್ಮದರ್ಶನಗಳಲ್ಲಿ ಗೋಚರವಾಗುತ್ತವೆ. ಸಾಮಾನ್ಯ ಬುದ್ಧಿಯುಳ್ಳವನಿಗೆ ಈ ವಿಷಯವನ್ನು ಗ್ರಹಿಸುವುದು

ಪ್ರಯೋಜನಕರವಾಗಿದೆ. ಆದರೆ ಅಧ್ಯಾತ್ಮ ದರ್ಶನಸಿದ್ಧಿಯ ಭಾಗ್ಯ ಗಳಿಸಿದವರು ಕರ್ಮಸಂಜಾತವಾಗುವ ಸೂಕ್ಷ್ಮ ದೇಹದ ಸತ್ಯೆಯನ್ನು ಅಸಂಭವವೆಂದು ಭಾವಿಸಲಾರರು; ಹಾಗೆಯೇ ಅದರ ಕುರಿತಾದ ವಿವರಣೆಯ ಸಂಬಂಧಿಸಿ ಔದಾಸೀನ್ಯ ತೋರ್ಪಡಿಸಲಾರರು. ಬದಲಾಗಿ, ಅವರು ಈ ವಿವರಣೆಯ ಬಗ್ಗೆ ಆನಂದತುಂದಿಲರಾಗುವರು.

ಒಟ್ಟಾರೆ, ಕರ್ಮಗತಿಯನುಸರಿಸಿ ಲಭಿಸುವ ಈ ಸೂಕ್ಷ್ಮದೇಹ 'ಬರ್‌ಜಖ್' ಘಟ್ಟದಲ್ಲಿ ಒಳಿತು-ಕೆಡುಕುಗಳ ಪ್ರತಿಫಲಾನುಭವಕ್ಕೆ ಪಾತ್ರವಾಗುತ್ತದೆ. ಈ ವಿಷಯದಲ್ಲಿ ನಾನು ಅನುಭವಸಿದ್ಧಿಯನ್ನು ಪಡೆದವನಾಗಿದ್ದೇನೆ. ಜಾಗ್ರುದವಸ್ಥೆಯಲ್ಲಿ ನನಗುಂಟಾದ ಆತ್ಮಿಕ ದರ್ಶನಗಳಲ್ಲಿ ಮೃತಪಟ್ಟವರ ಆತ್ಮಗಳನ್ನು ಹಲವು ಬಾರಿ ಕಂಡಿದ್ದೇನೆ. ಅಧರ್ಮಿಗಳೂ ದುರ್ಮಾರ್ಗಿಗಳೂ ಆದ ಕೆಲವರನ್ನು ಧೂಮನಿರ್ಮಿತವೆಂದು ತೋರುವ ಅಂಧಕಾರಮಯವಾದ ಶರೀರದಿಂದ ಕೂಡಿದವರಾಗಿ ಕಂಡಿದ್ದೇನೆ. ಸಂಕ್ಷಿಪ್ತವಾಗಿ, ಈ ಅಧ್ಯಾತ್ಮ ವಿಚಾರ ನನಗೆ ಸುಪರಿಚಿತ. ಹಾಗೆ, ಸರ್ವಜ್ಞನಾದ ದೇವನು ನುಡಿದಂತೆ, ಮರಣಾನಂತರ ಪ್ರತಿಯೊಂದು ಆತ್ಮಕ್ಕೆ ತೇಜಪೂರ್ಣ ಯಾ ಅಂಧಕಾರಮಯವಾದ ದೇಹ ನೀಡಲಾಗುವುದು ಎಂಬ ವಿಚಾರವನ್ನು ನಾನು ಉಚ್ಚಸ್ವರದಲ್ಲಿ ಹೇಳುತ್ತೇನೆ. ಅತಿ ಗಹನವಾದ ಈ ಗೂಢಾರ್ಥಕ ತತ್ವವನ್ನು ಕೇವಲ ಬುದ್ಧಿಯಿಂದ ಮಾತ್ರ ರುಜುಪಡಿಸಲು ಪ್ರಯತ್ನಿಸುವುದು ಸಮಂಜಸವಲ್ಲ. ಒಂದು ವಸ್ತುವನ್ನು ನೋಡುವ ಕಣ್ಣಿನಿಂದ ಅದರ ರುಚಿ ತಿಳಿಯಲು ಅಸಾಧ್ಯವಾದ ರೀತಿಯಲ್ಲೇ ರುಚಿ ತಿಳಿಯುವ ನಾಲಗೆಯಿಂದ ವಸ್ತುವನ್ನು ಕಾಣಲು ಸಹ ಅಸಾಧ್ಯವಷ್ಟೆ. ಅದೇ ಪ್ರಕಾರ ಅಧ್ಯಾತ್ಮ ದರ್ಶನದಿಂದ ಸಿದ್ಧಿಸುವ ಪರಲೋಕ ಜ್ಞಾನ ಕೇವಲ ಬುದ್ಧಿಯಿಂದ ಸಿದ್ಧಿಸಲಿಕ್ಕಿಲ್ಲ. ಈ ಲೋಕದಲ್ಲಿ ಅಜ್ಞಾತ ಸಂಗತಿಗಳನ್ನು ತಿಳಿಯಲಿಕ್ಕೆ ವಿಭಿನ್ನ ಮಾರ್ಗಗಳನ್ನು ದೇವನು ನಿರ್ದೇಶಿಸಿದ್ದಾನೆ. ನಿಶ್ಚಿತ ಮಾರ್ಗದಲ್ಲಿ ಅನ್ವೇಷಿಸಿದರೆ ಮಾತ್ರವೇ ಯಾವುದೇ ಕಾರ್ಯ ಪ್ರಾಪ್ತವಾಗುವುದು.

ದೇವನು ತನ್ನ ಪವಿತ್ರ ಗ್ರಂಥದಲ್ಲಿ, ದುಷ್ಕರ್ಮಿಗಳನ್ನು ಮತ್ತು ದುರ್ಮಾರ್ಗಿಗಳನ್ನು ಮೃತಪ್ರಾಯರೆಂದೂ ಸದ್ಧರ್ಮಿಗಳನ್ನು ಜೀವಂತರೆಂದೂ ಬಣ್ಣಿಸಿರುವುದನ್ನು ಕಾಣಬಹುದು. ಈ ವರ್ಣನೆಯಲ್ಲಿ ಒಂದು ರಹಸ್ಯ ತತ್ವ ಅಂತರ್ಲೀನವಾಗಿದೆ. ದೈವಿಕ ಕಾರ್ಯದಲ್ಲಿ ಅಲಕ್ಷ್ಯರಾಗಿದ್ದುಕೊಂಡು ಜೀವಿಸುವವರ ಪ್ರಧಾನ ಆವಶ್ಯಕತೆಗಳಾದ ತಿನ್ನುವುದು, ಕುಡಿಯುವುದು, ಭೋಗಿಸುವುದು ಎಂಬಿವುಗಳು ಅವರ ಮರಣದೊಂದಿಗೆ ಅಂತ್ಯಗೊಳ್ಳುತ್ತವೆ. ಆಧ್ಯಾತ್ಮಿಕ ಆಹಾರ ವೈಭವಗಳಲ್ಲಿ ಅವರಿಗೆ ಯಾವುದೇ ಪಾಲು ಇರುವುದಿಲ್ಲ. ಆದ್ದರಿಂದ ಅವರು ಯಥಾರ್ಥದಲ್ಲಿ ಮೃತಪ್ರಾಯರೇ ಆಗಿದ್ದಾರೆ. ಅವರನ್ನು ಪುನರುಜ್ಜೀವನಗೊಳಿಸುವುದು ಶಿಕ್ಷೆಯನ್ನು ಅನುಭವಿಸಲಿಕ್ಕೆ ಮಾತ್ರವಾಗಿದೆ. ಈ ವಿಷಯವನ್ನು ಸೂಚಿಸುತ್ತಾ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

> "ಇನ್ನಹೂ ಮನ್‌ಯ್ಯಅ್‌ತಿ ರಬ್ಬಹೂ ಮುಜ್‌ರಿಮನ್ ಫಇನ್ನಲಹೂ ಜಹನ್ನಮ ಲಾ ಯಮೂತು ಫೀಹಾ ವಲಾ ಯಹ್‌ಯಾ" (20:75).

ಯಾವೊಬ್ಬನು ತನ್ನ ದೇವನ ಬಳಿಗೆ ಪಾಪಿಯಾಗಿ ಬರುವನೋ ಅವನ ವಾಸಸ್ಥಾನ ನರಕವಾಗಿದೆ. ಅವನು ಅದರಲ್ಲಿ ಸಾಯಲೂ ಆರನು ಬದುಕಲೂ ಆರನು.

ಆದರೆ ದೇವನ ಪ್ರಿಯಜನರು ಶಾರೀರಿಕ ಮರಣದಿಂದ ಯಥಾರ್ಥದಲ್ಲಿ ಮೃತಪಡುವುದಿಲ್ಲ. ಏಕೆಂದರೆ, ಅವರ ಜೀವನಾವಶ್ಯಕಗಳಾದ ಆಹಾರ ಪಾನೀಯಗಳು ಅವರ ಜೊತೆಗಿರುತ್ತವೆ.

ಮೂರನೆಯ ಲೋಕ 'ಪುನರುತ್ಥಾನ ಲೋಕ' ಎಂದು ಕರೆಯಲ್ಪಡುವ ಸ್ಥಾನವಾಗಿದೆ. ಈ ಘಟ್ಟದಲ್ಲಿ ಪರಿಶುದ್ಧ ಯಾ ಅಶುದ್ಧ, ಧಾರ್ಮಿಕ ಯಾ ಅಧಾರ್ಮಿಕವಾದ ಪ್ರತಿಯೊಂದು ಆತ್ಮಕ್ಕೆ ಪ್ರತ್ಯಕ್ಷ ದೇಹ ನೀಡಲ್ಪಡುವುದು. ಇದು ದೈವಮಹಾತ್ಮೆಯ ಸಂಪೂರ್ಣವಾದ ಪ್ರತ್ಯಕ್ಷತೆಗೆ ನಿರ್ಣಯಿಸಲ್ಪಟ್ಟ ಘಟ್ಟವಾಗಿದೆ. ಆ ದಿನದಲ್ಲಿ ಪ್ರತಿಯೊಬ್ಬ ಮನುಷ್ಯನು ದೈವಸತ್ತೆಯ ಕುರಿತು ಪೂರ್ಣವಾಗಿ ತಿಳಿಯುತ್ತಾನೆ. ಮತ್ತು ಅವನ ಕರ್ಮಗಳಿಗೆ ತಕ್ಕ ಪೂರ್ಣವಾದ ಪ್ರತಿಫಲವನ್ನು ಪ್ರತ್ಯಕ್ಷ ನೆಲೆಯಲ್ಲಿ ಅನುಭವಿಸುತ್ತಾನೆ. ಇದು ಹೇಗೆ ಸಂಭವಿಸುವುದೆಂದು ಯಾರೂ ವಿಸ್ಮಯ ಪಡಬೇಕಾಗಿಲ್ಲ. ಸರ್ವಶಕ್ತನಾದ

ದೇವನಿಗೆ ಅಸಾಧ್ಯವಾದುದು ಏನೂ ಇಲ್ಲ. ಅವನು ಇಚ್ಛಿಸುವುದನ್ನೆಲ್ಲಾ ಮಾಡುವರೆ ಶಕ್ತನು. ಅವನು ಪವಿತ್ರ ಖುರ್ಆನಿನಲ್ಲಿ ಹೀಗೆ ಹೇಳುತ್ತಾನೆ:

"ಅವಲಮ್ ಯರಲ್ ಇನ್ಸಾನು ಅನ್ನಾ ಖಲಕ್ನಾಹು ಮಿನ್‌ನ್ನುತ್ಫತಿನ್ ಫಇದಾಹುವ ಖಸೀಮುನ್ ಮುಬೀನ್ – ವ ಲರಬಲನಾ ಮಸ ಲನ್ ವ್ವನಸಿಯ ಖಲ್ಕಹೂ ಕಾಲ ಮನ್‌ಯ್ಯು ಹ್ಯಿಲ್ ಇಲಾಮ ವಹಿಯ ರಮೀಮ್ – ಕುಲ್ ಯುಹ್‌ಯೀಹಲ್ಲದೀ ಅನ್‌ಷಅಹಾ ಅವ್ವಲ ಮ ರ್‍ರ ತಿ ನ್ ವಹುವ ಬಿಕುಲ್ಲಿ ಖಲ್ಕಿನ್ ಅಲೀಮ್" (36:78-80).

"ಅವಲಯ್ಸಲ್ಲದೀ ಖಲಕಸ್ಸಮಾವಾತಿ ವಲ್ ಅರ್‌ಲ ಬಿಕಾದಿರಿನ್ ಅಲಾ ಅನ್‌ಯ್ಯಖ್‌ಲುಕ ಮಿಸ್ಲಹುಂ ಬಲಾ ವಹುವಲ್ ಖಲ್ಲಾಕುಲ್ ಅಲೀಂ – ಇನ್ನಮಾ ಅಮ್ರುಹೂ ಇದಾ ಅರಾದ ಶೈಅನ್ ಅನ್‌ಯ್ಯಕೂಲ ಲಹೂ ಕುನ್‌ಫಯ ಕೂನ್ – ಫಸುಬ್‌ಹಾನಲ್ಲದೀ ಬಿಯದಿಹೀ ಮಲ ಕೂತು ಕುಲ್ಲಿ ಶೈಇನ್ ವ್ವ ಇಲೈಹಿ ತುರ್ಜ ಊನ್" (36:82-84).

ಮನುಷ್ಯನು ನೋಡುವುದಿಲ್ಲವೇ ? ನಾವು ಅವನನ್ನು ಒಂದು ಬಿಂದು ವೀರ್ಯಾಣುವಿನಿಂದ ಸೃಷ್ಟಿಸಿದೆವು; ಅದೋ ಅವನು ಒಬ್ಬ ವಿವಾದಿ ಯಾಗಿರುವನು. ಅವನು ನಮ್ಮ ಸಂಬಂಧಿಸಿ ಮಿಥ್ಯಾ ಸಂವಾದ ನಡೆಸಿ ತನ್ನ ಸ್ವಂತ ಉದ್ಭವ ವನ್ನು ಮರೆತು ಬಿಟ್ಟಿರುವನು. ಅಸ್ಥಿಗಳು ಕೂಡ ಜೀರ್ಣಿಸಿ ನಶಿಸಿರುವಾಗ ಮನುಷ್ಯನನ್ನು ಪುನರು ಜ್ಜೀವನಗೊಳಿಸಲು ಯಾರಿಗೆ ಶಕ್ತಿಯಿದೆಯೆಂದು ಅವನು ಕೇಳುತ್ತಾನೆ. ಅವನೊಡನೆ ಹೇಳು: ಅವುಗಳನ್ನು ಮೊದಲು ಯಾರು ಉಂಟುಮಾಡಿ ದನೋ ಅವನೇ ಅವುಗಳಿಗೆ ಜೀವ ನೀಡುವನು. ಅವನು ಎಲ್ಲಾ ವಿಧಾನದಲ್ಲಿ ಸೃಷ್ಟಿಸ ಬಲ್ಲವ ನಾಗಿದ್ದಾನೆ. ಆಕಾಶ ಮಂಡಲಗಳನ್ನೂ ಭೂಮಿ ಯನ್ನೂ ಸೃಷ್ಟಿಸಿದವನು ಅವುಗಳಂಥ ಸೃಷ್ಟಿ ಗಳನ್ನು ಸೃಜಿಸಲು ಶಕ್ತನಲ್ಲವೇ ? ಹೌದು, ದಿಟ ವಾಗಿಯೂ ಅವನು ಸರ್ವಜ್ಞನಾದ ಸೃಷ್ಟಿಕರ್ತ ನಾಗಿದ್ದಾನೆ. ಒಂದು ವಸ್ತು ಉಂಟಾಗಬೇಕೆಂದು ಅವನು ಇಚ್ಛಿಸುವಾಗ 'ಉಂಟಾಗು' ಎಂದು ಮಾತ್ರ ಹೇಳುತ್ತಾನೆ; ಆಗ ಅದು ಹುಟ್ಟುತ್ತದೆ– ಇದು ಅವನ ಆಜ್ಞಾವೈಭವ. ಒಟ್ಟಾರೆ, ಸರ್ವ ಚರಾಚರಗಳ ಮೇಲೆ ಅಧಿಕಾರಸ್ಥನೂ ಸಕಲರೂ ಹಿಂತೆರಳಬೇಕಾದ ಕೇಂದ್ರ ಸ್ಥಾನವೂ ಆದ ಅವನಿಗೆ ಸರ್ವ ಮಹತ್ವವಿದೆ.

ಈ ದೈವವಾಕ್ಯಗಳು ನಮಗೆ ಬೋಧಿಸುವುದೇ ನೆಂದರೆ, ದೇವನಿಗೆ ಅಸಾಧ್ಯವಾದುದು ಏನೂ ಇಲ್ಲ. ಕ್ಷುಲ್ಲಕವಾದ ಬೀಜದಿಂದ ಒಮ್ಮೆ ಮನುಷ್ಯನನ್ನು ಹುಟ್ಟಿ ಸಲು ಶಕ್ತನಾದವನಿಗೆ ಮತ್ತೊಮ್ಮೆ ಅವನನ್ನು ಪುನರು ಜ್ಜೀವನಗೊಳಿಸಲು ಸಾಧ್ಯವಿಲ್ಲವೇ ?

ಇಲ್ಲಿ ಒಂದು ಪ್ರಶ್ನೆ ಉದ್ಭವಿಸಬಹುದು– ಮೂರ ನೆಯ ಘಟ್ಟವಾದ ಪುನರುತ್ಥಾನ ಆರಂಭಿಸುವರೆ ಒಂದು ದೀರ್ಘಕಾಲ ಕಳೆಯಬೇಕಾಗಿರುವುದರಿಂದ ಅಷ್ಟರ ವರೆಗೆ ಇರುವ 'ಬರ್‌ಸಖ್' ಘಟ್ಟ ಧರ್ಮಾತ್ಮರಿಗೂ ದುರಾ ತ್ಮರಿಗೂ ಸಮಾನ ರೀತಿಯಲ್ಲಿ ನಿರುಪಯೋಗದ ಒಂದು ಬಂಧನ ಕೊಠಡಿಯಾಗುವುದಿಲ್ಲವೇ ? ಎಂದು. ಇದಕ್ಕೆ ಸಂಕ್ಷಿಪ್ತವಾಗಿ ಉತ್ತರ ಹೇಳಬಹುದು. ಬರ್‌ಸಖ್ ಘಟ್ಟವನ್ನು ಒಂದು ಬಂಧನ ಸ್ಥಳವೆಂದು ಭಾವಿಸುವುದು ಸರಿಯಲ್ಲ. ಈ ತಪ್ಪು ಕಲ್ಪನೆ ಅಜ್ಞಾನದಿಂದ ಉಂಟಾ ದುದಾಗಿದೆ. ದೈವಗ್ರಂಥದಲ್ಲಿ ಸುಕೃತರಿಗೂ ದುಷ್ಕೃತ ರಿಗೂ ಪ್ರತಿಫಲವಾಗಿ ಎರಡು ಸ್ಥಾನಗಳನ್ನು ನೀಡಲಾ ಗುವುದೆಂದು ಪ್ರಸ್ತಾಪಿಸಲಾಗಿದೆ. ಅವುಗಳಲ್ಲೊಂದು 'ಬರ್‌ಸಖ್' ಎಂಬ ಮಧ್ಯ ಘಟ್ಟವಾಗಿದೆ. ಇಲ್ಲೇ ಪ್ರತಿಯೊಬ್ಬ ಮನುಷ್ಯನು ತನ್ನ ಒಳ್ಳೆಯ ಅಥವಾ ಕೆಟ್ಟ ಕರ್ಮಕ್ಕನುಗುಣವಾದ ರಕ್ಷೆ ಅಥವಾ ಶಿಕ್ಷೆಯನ್ನು, ಪುನರುತ್ಥಾನ ಘಟ್ಟದಷ್ಟು ಪ್ರತ್ಯಕ್ಷ ರೀತಿಯಲ್ಲಿ ಅಲ್ಲ ವಾದರೂ, ಅನುಭವಿಸಲು ತೊಡಗುತ್ತಾನೆ. ಅಂದರೆ, ಮೃತಪಟ್ಟ ಕೂಡಲೇ ದುಷ್ಕೃತರು ನರಕ ಶಿಕ್ಷೆಯನ್ನೂ ಸುಕೃತರು ಸ್ವರ್ಗ ಸುಖವನ್ನೂ ಅನುಭವಿಸುತ್ತಾರೆ. ಹೀಗೆ, ಮರಣಾನಂತರ ಪ್ರತಿಯೊಬ್ಬನು ಕೂಡಲೇ

ಕರ್ಮಫಲವನ್ನು ಅನುಭವಿಸಲು ತೊಡಗುವನೆಂದು ಸೂಚಿಸುವ ವಾಕ್ಯಗಳು ಪವಿತ್ರ ಖುರ್ಆನಿನಲ್ಲಿ ಅನೇಕ ಇವೆ. ಓರ್ವ ಸುಕೃತನ ಕುರಿತು ಅದು ಹೀಗೆ ಹೇಳುತ್ತದೆ:

"ಕೀಲದ್‌ಕುಲಿಲ್ ಜನ್ನತ" (36:27)

ನೀನು ಸ್ವರ್ಗದಲ್ಲಿ ಪ್ರವೇಶಿಸು ಎಂದು ಅವನೊಡನೆ ಆಜ್ಞಾಪಿಸಲಾಯಿತು.

ಇದೇ ಪ್ರಕಾರ ಒಬ್ಬ ದುಷ್ಕೃತನ ಕುರಿತು ಹೀಗೆ ಹೇಳುತ್ತದೆ:

"ಫರಆಹು ಫೀ ಸವಾಇಲ್ ಜಹೀಂ"
(37:56)

ಎಂದರೆ, ಸ್ವರ್ಗೀಯನಾದ ಒಬ್ಬ ಸುಕೃತನಿಗೆ ನರಕವಾಸಿಯಾದ ಒಬ್ಬ ಸ್ನೇಹಿತನಿದ್ದನು. ಇಬ್ಬರು ಮರಣ ಹೊಂದಿದಾಗ ಸ್ವರ್ಗವಾಸಿಯಾದವನಿಗೆ ತನ್ನ ಗೆಳೆಯ ಎಲ್ಲಿದ್ದಾನೆಂದು ತಿಳಿಯಲು ಕಾತರವಾಯಿತು. ನೋಡಿದಾಗ "ಅವನನ್ನು ನರಕದ ಮಧ್ಯದಲ್ಲಿ ಕಂಡನು."

ಹೀಗೆ ರಕ್ಷಾ-ಶಿಕ್ಷಾ ಅನುಭವ ಮರಣದ ಬಳಿಕ ವಿಳಂಬವಿಲ್ಲದೆ ಆರಂಭವಾಗುತ್ತದೆ. ಅಂದರೆ ನರಕಕ್ಕೆ ಅರ್ಹನಾದವನು ಕೂಡಲೇ ನರಕದಲ್ಲೂ ಸ್ವರ್ಗದ ಹಕ್ಕುದಾರ ಸ್ವರ್ಗದಲ್ಲೂ ಪ್ರವೇಶಿಸುತ್ತಾನೆ. ಆದರೆ, ಇದರ ನಂತರ ದೇವನ ಪರಿಪೂರ್ಣ ಮಹಾತ್ಮೆ ಪ್ರಕಟವಾಗುವ ಒಂದು ಪ್ರತ್ಯೇಕ ಕಾಲಘಟ್ಟವಿದೆ. ಪೂರ್ಣರೀತಿಯ ಈ ಮಹತ್ವ ಪ್ರಕಟನೆ ಪುನರುತ್ಥಾನ ಘಟ್ಟದಲ್ಲಿ ಸಂಭವಿಸುವುದಾಗಿ ಅಪಾರ ಜ್ಞಾನಿಯಾದ ದೇವನು ಗೊತ್ತುಮಾಡಿದ್ದಾನೆ. ಅವನು ಮನುಷ್ಯನನ್ನು ಸೃಷ್ಟಿಸಿದ್ದು ತನ್ನ ಸೃಷ್ಟಿಕರ್ತತ್ವವು ಗ್ರಹಿಸಲ್ಪಡಲಿಕ್ಕಾಗಿದೆ. ನಂತರ ಅವನು ಸಕಲವನ್ನೂ ನಾಶಗೊಳಿಸುವುದು ತಾನು ಸರ್ವವನ್ನೂ ಜಯಿಸುವವನು ಎಂದು ಗುರುತಿಸಲ್ಪಡಲಿಕ್ಕಾಗಿದೆ. ಕೊನೆಗೆ ತಾನು ಸರ್ವಶಕ್ತನೆಂದು ತಿಳಿಯಲ್ಪಡಲಿಕ್ಕಾಗಿ ಅವನು ಎಲ್ಲರಿಗೂ ಪೂರ್ಣ ಜೀವನ ನೀಡಿ ಅವರನ್ನು ಒಂದು ಸ್ಥಳದಲ್ಲಿ ಒಂದುಗೂಡಿಸುವನು. ಮರಣಾನಂತರ ಜೀವಿತದ ಅವಸ್ಥೆಗಳ ಕುರಿತು ಪವಿತ್ರ ಖುರ್ಆನ್ ಪ್ರಸ್ತಾವಿಸಿದ ಮೂರು ಗೂಢಾರ್ಥಕ ತತ್ವಗಳ ಪೈಕಿ ಒಂದನೆಯ ಕುರಿತು ವಿವರಿಸಲಾಯಿತು.

ಎರಡನೆಯ ತತ್ವ ಐಹಿಕ ಜೀವಿತದಲ್ಲಿ ಆಧ್ಯಾತ್ಮಿಕವಾಗಿ ಸಿದ್ಧಿಸುವ ಸ್ಥಿತಿಗಳೆಲ್ಲಾ ಪರಲೋಕದಲ್ಲಿ ಬರ್‌ಸಖ್ ಎಂಬ ಮಧ್ಯಂತರ ಘಟ್ಟದಲ್ಲಾದರೂ ಪುನರುತ್ಥಾನ ಘಟ್ಟದಲ್ಲಾದರೂ ಸರಿ, ಪ್ರತ್ಯಕ್ಷ ರೂಪದಲ್ಲಿ ಗೋಚರಿಸುವುದೆಂದಾಗಿದೆ. ಪವಿತ್ರ ಖುರ್‌ಆನ್ ಒಂದೆಡೆ ಹೇಳುತ್ತದೆ:

"ಮನ್‌ಕಾನ ಫೀ ಹಾದಿಹೀ ಅಅ್‌ಮಾ ಫಹುವ ಫಿಲ್ ಆಖಿರತಿ ಅಅ್‌ಮಾ ವ ಅಲಲ್ಲು ಸಬೀಲಾ" (17:73).

ಯಾವನು ಇಹದಲ್ಲಿ ಅಂಧನಾಗಿರುವನೋ ಅವನು ಪರದಲ್ಲೂ ಅಂಧನಾಗಿರುತ್ತಾನೆ.

ಬೇರೆ ಮಾತಿನಲ್ಲಿ ಹೇಳುವುದಾದರೆ, ಈ ಲೋಕದ ಆಧ್ಯಾತ್ಮ ಅಂಧತೆ ಪರಲೋಕದಲ್ಲಿ ಪ್ರತ್ಯಕ್ಷದಲ್ಲಿ ಅನುಭವಿಸುವಂತಾಗುವುದು. ಇನ್ನೊಂದೆಡೆಯಲ್ಲಿ ಖುರ್ ಆನ್ ಹೀಗೆ ಹೇಳುತ್ತದೆ:

"ಖುದೂಹು ಫಗುಲಲ್ಲೂಹು – ಸುಮ್ಮಲ್ ಜಹೀಮ ಸಲ್ಲೂಹು – ಸುಮ್ಮ ಫೀ ಸಿಲ್‌ಸಿಲತಿನ್ ದರ್‌ಉಹಾ ಸಬ್‌ಊನ ದಿರಾಅನ್ ಫಸ್ಲುಕೂಹು" (69:31-33)

ಅವನನ್ನು (ಆ ಪಾಪಿಯನ್ನು) ಹಿಡಿಯಿರಿ; ನಂತರ ಅವನ ಕೊರಳಿಗೆ ಸಂಕೋಲೆ ತೊಡಿಸಿರಿ. ಅನಂತರ ಅವನನ್ನು ಪ್ರಜ್ವಲಿಸುತ್ತಿರುವ ನರಕಾಗ್ನಿಗೆ ಎಸೆಯಿರಿ. ಮತ್ತೆ ಅವನನ್ನು ಎಪ್ಪತ್ತು ಮೊಳ ಉದ್ದವಿರುವ ಶೃಂಖಲೆಯಿಂದ ಬಂಧಿಸಿರಿ.

ಈ ವಾಕ್ಯಗಳು ವ್ಯಕ್ತಪಡಿಸುವುದೇನೆಂದರೆ, ಈ ಲೋಕದ ಆಧ್ಯಾತ್ಮ ಪೀಡನೆಗಳು ಪರಲೋಕದಲ್ಲಿ ಪ್ರತ್ಯಕ್ಷ ರೂಪದಲ್ಲಿ ಪ್ರಕಟಗೊಳ್ಳುವುವು. ಕೊರಳಿಗೆ ತೊಡಿಸುವುದಾಗಿ ಹೇಳಲಾಗಿರುವ ಸಂಕಲೆ ಮನುಷ್ಯನ ಶಿರಸ್ಸನ್ನು ಭೂಮಿಯೆಡೆಗೆ ಬಗ್ಗಿಸುವ ವಿಷಯಾಸಕ್ತಿಗಳನ್ನು ಸೂಚಿಸುತ್ತದೆ. ಈ ಇಚ್ಛೆಗಳೆಲ್ಲಾ ಪರಲೋಕದಲ್ಲಿ ಸಂಕಲೆಯ ರೂಪದಲ್ಲಿ ಅವನಿಗೆ ಗೋಚರಿಸುವುದು. ಈ

ಲೋಕದ ಪೇಚಾಟಗಳೆಲ್ಲಾ ಕಾಲುಗಳಲ್ಲಿ ಸಿಲುಕಿದ ಶೃಂಖಲೆಯಾಗಿ ಕಾಣುವುದು. ವಿಷಯಾಭಿಲಾಷೆ ನಿಮಿತ್ತ ಉಂಟಾಗುವ ಮನೋವ್ಯಥೆಯು ಅಗ್ನಿ ಪ್ರತ್ಯಕ್ಷದಲ್ಲಿ ಜ್ವಲಿಸುವಂತೆ ತೋರುವುದು. ಅಧರ್ಮಿಯು ಐಹಿಕ ಜೀವಿತದಲ್ಲಿ ಇಂದ್ರಿಯಾಸಕ್ತಿಯಿಂದ ಕೂಡಿದ ಒಂದು ನರಕವನ್ನು ತನ್ನೊಳಗೆ ಇರಿಸಿಕೊಂಡಿರುತ್ತಾನೆ. ತನ್ನ ಆಶೆಗಳು ಈಡೇರದೆ ಇರುವಾಗ ಒಳಗಿನ ನರಕಾಗ್ನಿಯು ತಾಪ ಅವನಿಗೆ ಅನುಭವವಾಗುತ್ತದೆ. ಒಟ್ಟಾರೆ, ಐಹಿಕೇಚ್ಛೆಗಳು ಈಡೇರದೆ ಅವುಗಳಿಂದ ಅವನು ವಿವಂಚಿತನಾಗಿ, ಸದಾ ಅವನಿಗೆ ನಿರಾಶೆಯುಂಟಾಗುವಾಗ ಅವನಿಗೆ ಅನುಭವವಾಗುವ ದು:ಖವನ್ನು ದೇವನು ಪ್ರತ್ಯಕ್ಷ ಅಗ್ನಿಯ ರೂಪದಲ್ಲಿ ತೋರಿಸುವನು. ಪವಿತ್ರ ಖುರ್‌ಆನ್ ಹೇಳುತ್ತದೆ:

"ವ ಹೀಲ ಬೈನಹುಂ ವ ಬೈನ ಮಾ ಯಶ್ತಹೂನ" (34:55).

ಅವರಿಗೂ ಅವರು ಇಚ್ಛಿಸುವವುಗಳಿಗೂ ಮಧ್ಯೆ ಒಂದು ತಡೆ ಇರುವುದು.

ಅವರ ಶಿಕ್ಷೆಯ ಮೂಲ ಇದೇ ಆಗಿರಬಹುದು.

"ಅವನನ್ನು ಎಪ್ಪತ್ತು ಮೊಳ ಉದ್ದವಿರುವ ಸಂಕಲೆಯಿಂದ ಬಂಧಿಸಿಡಿರಿ" ಎಂದು ಪಾಪಿಯಾದ ಮನುಷ್ಯನ ಕುರಿತು ಪವಿತ್ರ ಖುರ್‌ಆನ್ ಹೇಳಿದುದರಲ್ಲಿ ಒಂದು ತತ್ವರಹಸ್ಯ ಅಂತರ್ಲೀನವಾಗಿದೆ. ಅಧರ್ಮಿ ಹೆಚ್ಚಾಗಿ ಎಪ್ಪತ್ತು ವಯಸ್ಸಿನ ವರೆಗೆ ಜೀವಿಸುವನು ಎಂದು ಈ ವಚನ ಸೂಚಿಸುತ್ತದೆ. ಕೆಲವೊಮ್ಮೆ ಬಾಲ್ಯಾವಸ್ಥೆ ಮತ್ತು ಮುಪ್ಪಿನ ಬಲಹೀನಾವಸ್ಥೆಯು ಹೊರತಾಗಿ ಎಪ್ಪತ್ತು ವರ್ಷಗಳ ದೀರ್ಘ ಜೀವಿತವನ್ನು ಪಾಪಿಷ್ಠನು ಈ ಲೋಕದಲ್ಲಿ ಪಡೆಯುತ್ತಾನೆ. ವಿವೇಕಬುದ್ಧಿ ಉಪಯೋಗಿಸಿ ನೀತಿಪೂರ್ವಕವಾಗಿ ಪ್ರವರ್ತಿಸುವರೆ ಸರ್ವಥಾ ಯೋಗ್ಯವಾದ ತನ್ನ ಆಯುಷ್ಕಾಲದ ಸುವರ್ಣಘಟ್ಟವಾದ ಈ ಎಪ್ಪತ್ತು ವರ್ಷಗಳನ್ನು ಅವನು ಪ್ರಪಂಚಾನುರಾಗದಲ್ಲಿ ಕಳೆಯುತ್ತಾನೆ. ಈ ಹೀನವಾದ ಪ್ರಾಪಂಚಿಕ ಬಂಧನದಿಂದ ವಿಮೋಚನೆ ಹೊಂದಲು ಶ್ರಮಿಸದೆ ಅವನು ಜೀವನ ನಡೆಸುವುದರಿಂದ, ಮೇಲಿನ ದೈವ ವಾಕ್ಯದಲ್ಲಿ ಹೇಳಿದಂತೆ, ಅವನ ಎಪ್ಪತ್ತು ವರ್ಷ ಕಾಲದ ಜೀವನ ಪರಲೋಕದಲ್ಲಿ ಎಪ್ಪತ್ತು ಮೊಳ ನೀಳವಿರುವ ಸಂಕಲೆಯಾಗಿ ಅವನನ್ನು ಸುತ್ತಿಕೊಳ್ಳುವುದು. ಸಂಕಲೆಯ ಒಂದೊಂದು ಮೊಳ ಉದ್ದವು ದುಷ್ಟ ಜೀವಿತ ಕಾಲದ ಒಂದೊಂದು ವರ್ಷ ಕಾಲವನ್ನು ಸೂಚಿಸುತ್ತದೆ, ದೇವನು ಯಾರಿಗೂ ಯಾವುದೇ ಬಗೆಯ ಸಂಕಷ್ಟವನ್ನು ನೀಡುವುದಿಲ್ಲ; ಬದಲಾಗಿ, ಮನುಷ್ಯನು ದುಷ್ಕರ್ಮಗಳ ಮೂಲಕ ಸಂಪಾದಿಸುವ ದೋಷ ಫಲಗಳನ್ನು ಮಾತ್ರವೇ ದೇವನು ಅವನ ಮುಂದೆ ಇರಿಸುತ್ತಾನೆ ಎಂಬುದನ್ನು ಇಲ್ಲಿ ಸ್ಮರಿಸಬೇಕು.

ಈ ದೈವಿಕ ನಿಯಮವನ್ನು ಸೂಚಿಸುತ್ತಾ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

"ಇನ್ತಲಿಕೂ ಇಲಲ್ಲಿನ್ ದೀ ಸಲಾಸಿ ಶುಅಬಿನ್ – ಲ್ಲಾಲಲೀಲಿನ್ ವಲಾ ಯುಗ್‌ನೀ ಮಿನಲ್ಲಹಬ್" (77 : 31, 32).

ಓ ದುರ್ಮಾರ್ಗಿಗಳೇ, ನಿಮಗೆ ನೆರಳನ್ನು ನೀಡದ, ಅಗ್ನಿಯ ತಾಪವನ್ನು ತಡೆಯಲು ಉಪಯುಕ್ತವಾಗದ ಮೂರು ಶಾಖೆಗಳ ಕೆಳಭಾಗಕ್ಕೆ ನಡೆಯಿರಿ.

ಈ ವಾಕ್ಯದಲ್ಲಿ ಪ್ರಸ್ತಾಪಿಸಲಾದ 'ಮೂರು ಶಾಖೆಗಳು' ಎಂಬುದರ ತಾತ್ಪರ್ಯ ಹಿಂಸ್ರ ಸ್ವಭಾವ, ಕಿರಾತ ಸ್ವಭಾವ, ಮತ್ತು ಚಪಲ ಸ್ವಭಾವಗಳಾಗಿವೆ. ಈ ಮೂರು ಸ್ವಭಾವಗಳನ್ನು ನಿಯಂತ್ರಿಸಿ ನೈತಿಕ ಗುಣಗಳನ್ನಾಗಿ ಪರಿವರ್ತಿಸದವರಿಗೆ ಅವು ನ್ಯಾಯ ವಿಚಾರಣೆ ದಿನದಲ್ಲಿ ಎಲೆಗಳಿಲ್ಲದ ಮೂರು ಶಾಖೆಗಳಂತೆ ಗೋಚರಿಸುವುವು. ಅವುಗಳಿಗೆ ಉಷ್ಣವನ್ನು ತಡೆಯಲು ಶಕ್ತಿಯಿಲ್ಲದುದರಿಂದ ಕೆಳಭಾಗದಲ್ಲಿ ನಿಲ್ಲುವವರು ತಾಪದಿಂದ ಸಂಕಷ್ಟಪಡುವರು. ಇದೇ ದೈವಿಕ ನಿಯಮವನ್ನು ಸ್ಪಷ್ಟಪಡಿಸಲಿಕ್ಕಾಗಿ ಪವಿತ್ರ ಖುರ್‌ಆನ್ ಸ್ವರ್ಗವಾಸಿಗಳ ಕುರಿತು ಹೀಗೆ ಹೇಳುತ್ತದೆ:

"ಯೌಮ ತರಲ್ ಮೂಅ್‌ಮಿನೀನ ವಲ್ ಮೂಅ್‌ಮಿನಾತಿ ಯಸ್‌ಆ ನೂರುಹುಂ ಬೈನ ಅಯ್ದೀಹಿಂ ವಬಿಅಯ್ಮಾನಿಹಿಂ" (57:13).

ಧರ್ಮ ವಿಶ್ವಾಸಿಗಳನ್ನೂ ಧರ್ಮವಿಶ್ವಾಸಿನಿಗಳನ್ನೂ ಅವರಿಗೆ ಐಹಿಕ ಜೀವಿತದಲ್ಲಿ ಗುಪ್ತವಾಗಿರುವ ಪ್ರಕಾಶ ಆ ದಿನದಲ್ಲಿ ಅವರ ಮುಂಭಾಗದಲ್ಲೂ ಬಲಭಾಗದಲ್ಲೂ ಪ್ರವಹಿಸುತ್ತಿರುವ ಸ್ಥಿತಿಯಲ್ಲಿ ನೀನು ಕಾಣುವಿ.

ಇನ್ನೊಂದೆಡೆಯಲ್ಲಿ ಖುರ್‌ಆನ್ ಹೀಗೆ ಹೇಳುತ್ತದೆ:

"ಯೌಮ ತಬ್ಯಲ್ಲು ವುಜೂಹುನ್ ವ ತಸ್‌ವದ್ದು ವುಜೂಹುನ್". (3:107)

ಆ ದಿನದಂದು ಕೆಲವು ಮುಖಗಳು ಬಿಳಿಯಾಗಿ ಪ್ರಕಾಶಮಾನವಾಗಿಯೂ ಕೆಲವು ಮುಖಗಳು ಕಪ್ಪಾಗಿ ಅಂಧಕಾರಮಯವಾಗಿಯೂ ಇರುವುವು. ಮತ್ತೊಂದೆಡೆಯಲ್ಲಿ ಹೀಗೆ ಹೇಳಲಾಗಿದೆ:

"ಮಸಲುಲ್ ಜನ್ನತಿಲ್ಲತೀ ವುಇದಲ್ ಮುತ್ತಕೂನ ಫೀಹಾ ಅನ್‌ಹಾರುನ್ ಮಿನ್ ಮ್ಮಾಇನ್ ಗ್ಯೆರಿ ಆಸಿನಿನ್ ವ ಅನ್‌ಹಾರುನ್ ಮ್ಮಿನ್ ಲ್ಲಬನಿನ್ ಲ್ಲಮ್ ಯತ ಗಯ್ಯರ್ ತಅ್‌ಮುಹೂ ವ ಅನ್‌ಹಾರುನ್ ಮ್ಮಿನ್ ಖಮ್ರಿನ್ ಲ್ಲದ್ದತಿನ್ ಲ್ಲಿಶ್ಶಾರಿಬೀನ ವ ಅನ್‌ಹಾರುನ್ ಮ್ಮಿನ್ ಅಸಲಿನ್ ಮ್ಮುಸಫ್ಫಾ" (47 : 16).

ಭಕ್ತ ಜನರಿಗೆ ವಾಗ್ದಾನ ಮಾಡಲ್ಪಟ್ಟ ಸ್ವರ್ಗ ಎಂದಿಗೂ ಮಲಿನವಾಗದ ಶುದ್ಧ ಜಲವಾಹಿನಿಗಳಿಂದಲೂ ರುಚಿ ವ್ಯತ್ಯಾಸವಾಗದ ಕ್ಷೀರ ನದಿಗಳಿಂದಲೂ ಕುಡಿಯುವವರಿಗೆ ಆನಂದವನ್ನೀಯುವ ಅಮಲು ರಹಿತ ಮದ್ಯಸರಿತ್ತುಗಳಿಂದಲೂ ನಿರ್ಮಲವೂ ನಿರ್ದೋಷಕರವೂ ಆದ ಜೇನಿನ ನದಿಗಳಿಂದಲೂ ಕೂಡಿದ ತೋಟದಂತೆ ಇರುವುದು.

ಈ ವಾಕ್ಯದಿಂದ, ಸ್ವರ್ಗವೆಂದರೆ ಪ್ರಸ್ತುತ ಸುಖಸಾಧನಗಳಿಂದ ಕೂಡಿದ ಅನಂತ ಪ್ರವಾಹಗಳ ಒಂದು ಪ್ರತಿಫಲನವೆಂದು ತಿಳಿದು ಬರುತ್ತದೆ. ಭಕ್ತನಾದ ಮನುಷ್ಯನು ಐಹಿಕ ಜೀವಿತದಲ್ಲಿ ಆಧ್ಯಾತ್ಮಿಕವಾಗಿ ಪಾನ ಮಾಡುವ ಜೀವಜಲ ಪಾರತ್ರಿಕ ಜೀವಿತದಲ್ಲಿ ಸ್ವಚ್ಛ ಜಲವಾಹಿನಿಯಾಗಿ ರೂಪುಗೊಳ್ಳುತ್ತದೆ. ಈ ಲೋಕದಲ್ಲಿ ಅವನು ಒಂದು ಶಿಶುವಿನಂತೆ ಆಧ್ಯಾತ್ಮಿಕವಾಗಿ ಯಾವ ಹಾಲಿನಿಂದ ಪೋಷಿಸಲ್ಪಟ್ಟಿದ್ದನೋ ಆ ಆಧ್ಯಾತ್ಮಿಕ ಹಾಲು ಪರಲೋಕದಲ್ಲಿ ಕ್ಷೀರ ನದಿಯಾಗಿ ಗೋಚರಿಸುವುದು. ಇಹದಲ್ಲಿ ಅವನು ಆಧ್ಯಾತ್ಮಿಕವಾಗಿ ಯಾವ ಅನುರಾಗದ ಮತ್ತಿನಿಂದ ಆನಂದತುಂದಿಲನಾಗುವನೋ ಆ ದೈವಾನುರಾಗವೆಂಬ ಆಧ್ಯಾತ್ಮಿಕ ಮದ್ಯ ಪರದಲ್ಲಿ ಮದ್ಯನದಿಯಾಗಿ ಪರಿವರ್ತಿತಗೊಳ್ಳುವುದು. ಈ ಲೋಕದಲ್ಲಿ ಅವನು ಆಧ್ಯಾತ್ಮಿಕವಾಗಿ ಆಸ್ವಾದಿಸುವ ಸತ್ಯ ವಿಶ್ವಾಸದ ಮಾಧುರ್ಯವೆಂಬ ಜೇನು ಪರಲೋಕದಲ್ಲಿ ಮಧುಪ್ರವಾಹವಾಗಿ ರೂಪಾಂತರಗೊಳ್ಳುತ್ತದೆ. ಹೀಗೆ ಪ್ರತಿಯೊಬ್ಬ ಸ್ವರ್ಗವಾಸಿಯ ಆಧ್ಯಾತ್ಮಿಕ ಸ್ಥಿತಿಗಳು ಅವನ ತೋಟಗಳಂತೆಯೂ ಸರಿತ್ತುಗಳಂತೆಯೂ ಗೋಚರಿಸುವುವು. ಆ ದಿನದಂದು ಸರ್ವಮಹಿಮಾವಂತನಾದ ದೇವನು ತನ್ನ ಪ್ರಭಾಪದೊಂದಿಗೆ ಸ್ವರ್ಗವಾಸಿಗಳಿಗೆ ಪ್ರತ್ಯಕ್ಷನಾಗುವನು. ಸಂಕ್ಷಿಪ್ತವಾಗಿ, ಆ ಘಟ್ಟದಲ್ಲಿ ಆಧ್ಯಾತ್ಮಿಕ ಸ್ಥಿತಿಗಳು ಗೋಪ್ಯವಾಗಿರದೆ ಸ್ಪಷ್ಟವಾಗಿ ಗೋಚರಿಸುವುವು.

ಮೂರನೆಯ ತತ್ತ್ವ ಪರಲೋಕದಲ್ಲಿ ಅನುಭವಿಸಲ್ಪಡುವ ಪ್ರಗತಿ ಮತ್ತು ಉನ್ನತಿಗಳೆಲ್ಲಾ ಅಪರಿಮಿತ ಹಾಗೂ ಅನಂತವೆಂಬುದಾಗಿದೆ. ಇದರ ಸಂಬಂಧಿಸಿ ಖುರ್‌ಆನ್ ಹೀಗೆ ಹೇಳುತ್ತದೆ:

"ವಲ್ಲದೀನ ಆಮನೂ ಮಅಹೂ ನೂರುಹುಂ ಯಸ್‌ಆ ಬಯ್ನ ಅಯ್ದೀಹಿಂ ವಬಿ ಅಮ್ಮಾನಿಹಿಂ ಯಕೂಲೂನ ರಬ್ಬನಾ ಅತ್ಮಿಂ ಲನಾ ನೂರನಾ ವಗ್‌ಫಿರ್‌ಲನಾ ಇನ್ನಕ ಅಲಾ ಕುಲ್ಲಿ ಶೈಇನ್ ಕದೀರ್" (66 : 9).

ಈ ಲೋಕದಲ್ಲಿ ಸತ್ಯ ವಿಶ್ವಾಸವೆಂಬ ಪ್ರಕಾಶವನ್ನು ಪಡೆದವರ ಆ ದಿವ್ಯಜ್ಯೋತಿ ನ್ಯಾಯವಿಚಾರಣೆಯ ದಿನದಂದು ಅವರ ಮುಂಭಾಗದಲ್ಲೂ ಬಲಭಾಗದಲ್ಲೂ ಪ್ರವಹಿಸುತ್ತಾ ಇರುವುದು. 'ನಮ್ಮ ನಾಥ, ನೀನು ನಮ್ಮ ಪ್ರಕಾಶವನ್ನು ಪರಿಪೂರ್ಣಗೊಳಿಸಿ ನಮಗೆ ನಿನ್ನ ರಕ್ಷಣೆಯನ್ನು ಅನುಗ್ರಹಿಸು. ನೀನು ಸರ್ವವಸ್ತುಗಳ ಮೇಲೆ ಅಧಿಕಾರವುಳ್ಳವನಷ್ಟೇ ಎಂದು ಅವರು ಪ್ರಾರ್ಥಿಸುತ್ತಾ ಇರುವರು.

ಈ ವಾಕ್ಯದಲ್ಲಿ ಅವರು ತಮ್ಮ ಪ್ರಕಾಶದ ಸಂಪೂರ್ಣತೆಗಾಗಿ ಪ್ರಾರ್ಥಿಸುತ್ತಾ ಇರುವರೆಂದು ಹೇಳಿರುವುದ

ರಿಂದ, ಸ್ವರ್ಗದ ಪ್ರಗತಿ ಅನಂತವೆಂದು ತಿಳಿದು ಬರುತ್ತದೆ. ಎಂದರೆ, ಅವರು ಆಧ್ಯಾತ್ಮಿಕ ಪ್ರಕಾಶದ ಒಂದು ಪೂರ್ಣತೆಯನ್ನು ಪಡೆದ ಬಳಿಕ ವಿರಮಿಸುವುದಿಲ್ಲ. ಈ ಹಂತದಲ್ಲಿ ಅವರು ಉನ್ನತವಾದ ಮತ್ತೊಂದು ಉತ್ಕೃಷ್ಟತೆಯನ್ನು ಕಂಡು ಮೊದಲಿನದನ್ನು ಅಪೂರ್ಣಾವಸ್ಥೆಯೆಂದು ಭಾವಿಸಿಕೊಂಡು ಎರಡನೆಯ ಹಂತದ ಸಿದ್ಧಿಗಾಗಿ ಪ್ರಾರ್ಥಿಸುವರು. ಅದು ಸಿದ್ಧಿಸಿದ ನಂತರ ಅವರಿಗೆ ಮೂರನೆಯ ಒಂದು ಉಚ್ಛ ಸ್ಥಿತಿ ಕಾಣುತ್ತದೆ. ಆಗ, ಅಷ್ಟರ ವರೆಗಿನ ಸಿದ್ಧಿಯೆಲ್ಲಾ ಅಪೂರ್ಣವೆಂದು ಗ್ರಹಿಸಿ ಇನ್ನೂ ಮೇಲಿನ ಸ್ಥಾನಕ್ಕಾಗಿ ಪ್ರಾರ್ಥಿಸಲು ತೊಡಗುವವರು. ಇಂತಹ ಅನಂತವಾದ ಉತ್ಕರ್ಷೇಚ್ಛೆಯನ್ನು 'ಅತ್ಮಿಂ' (ಪರಿಪೂರ್ಣ ಗೊಳಿಸು) ಎಂಬ ಪದ ಸೂಚಿಸುತ್ತದೆ. ಒಟ್ಟಿನಲ್ಲಿ, ಸಜ್ಜನರು ಹೀಗೆ ಅನಂತವಾದ ಪ್ರಗತಿಯನ್ನು ಗಳಿಸುವುದರ ಹೊರತು ಎಂದಿಗೂ ಅಧಃಪತಿಸಲಾರರು; ಎಂದಿಗೂ ಅವರು ಸ್ವರ್ಗದಿಂದ ಹೊರದೂಡಲ್ಪಡಲಾರರು. ಅವರು ತುಸು ಮಾತ್ರವಾದರೂ ಹಿಂದಕ್ಕೆ ಸರಿಯದೆ ಸದಾ ಮುಂದಕ್ಕೆ ಗಮಿಸುವರು.

ಮೇಲೆ ಉದ್ಧರಿಸಲಾದ ಖುರ್ಆನ್ ವಾಕ್ಯದಲ್ಲಿ ಸಜ್ಜನರು 'ಮಗ್‌ಫಿರತಿ'ಗಾಗಿ ಪ್ರಾರ್ಥಿಸುತ್ತಾ ಇರುವರೆಂದು ಹೇಳಿದೆಯಷ್ಟೆ. ಸ್ವರ್ಗದಲ್ಲಿ ಪ್ರವೇಶಿಸಿದ ಪುಣ್ಯಾತ್ಮರಿಗೆ 'ಮಗ್‌ಫಿರತಿ'ನ ಕಾರ್ಯದಲ್ಲಿ ಯಾವ ಕೊರತೆಯೂ ಉಂಟಾಗದೆಯೂ ಪಾಪ ವಿಮುಕ್ತಿ ಸಿದ್ಧಿಸಿಯೂ ಇರುವಾಗ ಅವರು 'ಇಸ್ತಿಗ್‌ಫಾರ್' (ಕ್ಷಮಾಯಾಚನೆ) ಮಾಡಬೇಕಾದ ಆವಶ್ಯಕತೆಯೇನೆಂದು ಒಂದು ಪ್ರಶ್ನೆ ಇಲ್ಲಿ ಉದ್ಭವಿಸಬಹುದು. 'ಮಗ್‌ಫಿರತ್' ಎಂಬ ಪದದ ಅರ್ಥ ಸರಿಯಾಗಿ ಗ್ರಹಿಸದಿರುವ ಕಾರಣದಿಂದಾಗಿ ಈ ಪ್ರಶ್ನೆಯೇಳುತ್ತದೆ. ಅದರ ಸರಿಯಾದ ಅರ್ಥ, ಅಯೋಗ್ಯ ಹಾಗೂ ಅಪೂರ್ಣವಾಗಿಯುಳ್ಳ ಸ್ಥಿತಿಯನ್ನು ಹೋಗಲಾಡಿಸುವುದು ಅಥವಾ ಗೋಪ್ಯವಾಗಿರಿಸುವುದು ಎಂದಾಗಿದೆ. ಒಟ್ಟಾರೆ, ಸ್ವರ್ಗವಾಸಿಗಳಾದ ಪುಣ್ಯಾತ್ಮರು ಪರಿಪೂರ್ಣ ಶ್ರೇಷ್ಠತೆಯನ್ನು ಪಡೆಯಲಿಕ್ಕಾಗಿಯೂ ಪ್ರಕಾಶದಲ್ಲಿ ಲೀನರಾಗಲಿಕ್ಕಾಗಿಯೂ ಆಶಿಸುತ್ತಾ ಇರುವರು. ತಾವು ಗಳಿಸಿದ ಸ್ಥಿತಿಗಿಂತ ಉತ್ತಮವಾದ ಮತ್ತೊಂದು ಉನ್ನತ ಮಟ್ಟವನ್ನು ಅವರು ಕಾಣುವಾಗ ಮೊದಲಿನ ಸ್ಥಿತಿಯನ್ನು ಅಪೂರ್ಣವೆಂದು ಗ್ರಹಿಸಿ, ಅದನ್ನು ಹೋಗಲಾಡಿಸಲಿಕ್ಕಾಗಿ ಪ್ರಾರ್ಥಿಸುವರು. ನಂತರ, ಅದಕ್ಕಿಂತ ಉಚ್ಛ ಮಟ್ಟದ ಮೂರನೆಯ ಹಂತವನ್ನು ಕಾಣುವಾಗ ಅಷ್ಟರ ವರೆಗೆ ಸಿದ್ಧಿಸಿದ ಸ್ಥಿತಿಯು ಸಂಬಂಧಿಸಿ 'ಮಗ್‌ಫಿರತ್' ಲಭಿಸಲಿಕ್ಕಾಗಿ ಎಂದರೆ, ಆ ಸ್ಥಿತಿ ಹೋಗಲಾಡಿಸಲ್ಪಡಲಿಕ್ಕಾಗಿ ಅವರು ಕಾಂಕ್ಷಿಸುವರು. ಏಕೆಂದರೆ ಅಲ್ಲಿ ಅವರಿಗೆ ಪ್ರಾಪ್ತವಾಗುವ ಪ್ರಗತಿ ಅನಂತವಾಗಿದೆ. ಹೀಗೆ ಅವರು ಅನಂತವಾದ 'ಮಗ್‌ಫಿರತಿ'ಗಾಗಿ ಅಥವಾ ಅಪೂರ್ಣಾವಸ್ಥೆಗಳು ಹೋಗಲಾಡಿಸಲ್ಪಡಲಿಕ್ಕಾಗಿ ಪ್ರಾರ್ಥಿಸುತ್ತಾ ಇರುವರು. 'ಮಗ್‌ಫಿರತ್' ಮತ್ತು 'ಇಸ್ತಿಗ್‌ಫಾರ್' ಎಂಬ ಪದಗಳನ್ನು ದೋಷದೃಷ್ಟಿಯುಳ್ಳವರು ನಮ್ಮ ಪ್ರವಾದಿ ಶ್ರೇಷ್ಠರಾದ ಮುಹಮ್ಮದ್ ಪೈಗಂಬರರ ಮೇಲೆ ದೋಷಾರೋಪಣೆ ಮಾಡಲು ಪ್ರಯೋಗಿಸುತ್ತಾರೆ. ಆದರೆ, ಈ ಪದಗಳ ಸರಿಯಾದ ಅರ್ಥ ಮೇಲಿನ ವಿವರಣೆಯಿಂದ ಸ್ಪಷ್ಟವಾಗಿದೆ. 'ಇಸ್ತಿಗ್‌ಫಾರಿ'ನ ಆಕಾಂಕ್ಷೆ ಮನುಷ್ಯನನ್ನು ಅನಂತವಾದ ಪ್ರಗತಿಯೆಡೆಗೆ ಕೊಂಡೊಯ್ಯಲು ಪ್ರೇರಕವಾಗುವುದರಿಂದ ಅದು ಅವನಿಗೆ ಅಭಿಮಾನಕರವಾಗಿದೆ. ಸ್ತ್ರೀಯ ಉದರದಿಂದ ಬಂದ ಯಾವೊಬ್ಬನು 'ಇಸ್ತಿಗ್‌ಫಾರ್' ಎಂಬ ರಕ್ಷಾರ್ಥನೆಯ ನಿತ್ಯಾನುಷ್ಠಾನ ಮಾಡುವುದಿಲ್ಲವೋ ಅವನು ಕೀಟಕ್ಕೆ ಸಮಾನ; ಏನನ್ನೂ ಕಾಣದ ಕುರುಡ; ಹಾಗೂ ಹೃದಯದಲ್ಲಿ ಪಾಪವುಳ್ಳ ಅಶುದ್ಧನು.

ಸಾರಾಂಶವೇನೆಂದರೆ, ಪವಿತ್ರ ಖುರ್ಆನಿನ ಅಧ್ಯಾಪನ ಪ್ರಕಾರ ಸ್ವರ್ಗ ಮತ್ತು ನರಕ ಮನುಷ್ಯನ ಐಹಿಕ ಜೀವಿತಾವಸ್ಥೆಗಳ ಪ್ರತಿರೂಪಗಳಾಗಿವೆ. ಅವು ಹೊರನಿಂದ ಬರುವ ನವ್ಯ ಭೌತಿಕ ಲೋಕಗಳಲ್ಲ, ಸ್ವರ್ಗವೂ ನರಕವೂ ಸ್ಥೂಲರೂಪದಲ್ಲಿ ಗೋಚರಿಸುವುದಾದರೂ ಅವು ಈ ಜೀವಿತದ ಆಧ್ಯಾತ್ಮ ಸ್ಥಿತಿಗಳ ಪ್ರತಿಚ್ಛಾಯೆಗಳು ಮಾತ್ರವಾಗಿವೆ. ಸ್ವರ್ಗವು ಈ ಲೋಕದಲ್ಲಿರುವಂತೆ ವೃಕ್ಷಗಳನ್ನು ನೆಡಲಾದ ಸ್ಥೂಲವಾದೊಂದು ಲೋಕವೆಂದಾಗಲಿ. ನರಕವು ಗಂಧಕ ಕಲ್ಲುಗಳಿಂದೆಲ್ಲಾ ಕೂಡಿದ ಕುಶೀರವೆಂದಾಗಲಿ ನಾವು ನಂಬುವುದಿಲ್ಲ. ತದ್ವಿರುದ್ಧವಾಗಿ, ಸ್ವರ್ಗ ಮತ್ತು ನರಕ ಇಸ್ಲಾಂ ಮತ ಕಲಿಸುವ ಪ್ರಕಾರ, ಮನುಷ್ಯನ ಐಹಿಕ ಜೀವಿತದ ಕರ್ಮಸ್ಥಿತಿಗಳ ಪ್ರತಿ ಫಲನಗಳೆಂದು ನಾವು ನಂಬುತ್ತೇವೆ. ●

(ಮುಂದುವರಿಯುವುದು)




ಅಹ್ಮದಿಯಾ ಜಮಾಅತಿನ ಖಲೀಫರಾದ ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್ ಸಾಹೇಬ್ ಅವರು ಇತ್ತೀಚೆಗೆ ಲಂಡನಿನಲ್ಲಿ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡುತ್ತಿದ್ದಾರೆ.

ಜಾಗತಿಕ ನ್ಯಾಯಾಲಯದ ಮಾಜಿ ಅಧ್ಯಕ್ಷ ಸರ್ ಮುಹಮ್ಮದ್ ಝಫರುಲ್ಲಾ ಖಾನ್ ಸಾಹೇಬ್ (ಎಡ ಬದಿ) ಮತ್ತು ಲಂಡನ್ ಮಸೀದಿಯ ಇಮಾಂ ಮೌಲಾನಾ ಮುಬಾರಕ್ ಅಹ್ಮದ್ ಸಾಹೇಬ್ (ಬಲ ಬದಿ) ಅವರನ್ನೂ ಫೋಟೋದಲ್ಲಿ ಕಾಣಬಹುದು.

Regd. with the Registrar of Newspapers for India. Regd. No. R. N. 27354/75
YUGARASHMI Kannada Quaterly, Jan. 1981/Sulh 1360


## English Translation of the HOLY QUARAN with Arabic Text & Extensive Index




**Price: Rs. 15-00**

**Postal Charge Extra**

### AHMADIYYA ENGLISH LITERATURE

1. THE TEACHINGS OF ISLAM — Rs. 6-00
   by Hazrat Mirza Ghulam Ahmad
2. JESUS IN INDIA — 2-25
   by Hazrat Mirza Ghulam Ahmad
3. CHARACTERISTICS OF THE QURANIC TEACHINGS — 1-00
   by Hazrat Mirza Bashiruddin Mahmud Ahmad
4. THE HOLY PROPHET MUHAMMAD — 1-50
   by Hazrat Mirza Bashiruddin Mahmud Ahmad
5. WHERE DID JESUS DIE? — 2-25
   by J. D. Shams, Ex-Imam, London Mosque

**Write to: NAZIR DAWAT-O-TABLIGH, Qadian (Punjab)-143516**


Edited and Published by Muhammad Yusuf on behalf of Jamath Ahmadiyya
at 10-23/1008, Ansari Road, Bunder, Mangalore-575 001.
Printed at Karavali Printers, Azizuddin Road, Bunder, Mangalore-575001.